ಸಾಹಿತ್ಯ ಸಿಂಚನ

ISSN 2456-3617

ತ್ರೈಮಾಸಿಕ ಪತ್ರಿಕೆ

ಪುಟ-೩	ಸಂಚಿಕೆ-೬	ಅಕ್ಟೋಬರ್-ಡಿಸೆಂಬರ್ - ೨೦೧೮	ಪುಟ-೬೪	ಬೆಲೆ ₹-೫೦
ume-3	Issue-6	October - December - 2018	Pages-64	Price ₹-50

೧೪



ಕಲ್ಯಾಣ ನಾಡಿನ ಸಮಸ್ತ ಮಹಾಜನತೆಗೆ ನೂತನ ವರ್ಷದ ಹಾರ್ದಿಕ ಶುಭಾಶಯಗಳು

ಕರುನಾಡು ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ (ರಿ), ಬೀದರ



ಸಂಜೀವಕುಮಾರ ಅತಿವಾಳೆ
ಗೌರವಾಧ್ಯಕ್ಷರು
ಮೊ: ೯೯೮೬೦೩೩೩೫೬

ಶಾಮರಾವ ನೆಲವಾಡೆ
ಅಧ್ಯಕ್ಷರು
ಮೊ: ೯೭೪೧೦೧೦೬೫೧





ರವೀಂದ್ರ ಲಂಜವಾಡಕರ್
ಗೌರವ ಕಾರ್ಯದರ್ಶಿ
ಮೊ: ೯೪೪೯೭೨೩೪೦೫

ಶಿವಕುಮಾರ ಚನ್ನಶೆಟ್ಟಿ
ಉಪಾಧ್ಯಕ್ಷರು
ಮೊ: ೯೨೩೯೨೪೨೬೧೮



ಸಾಹಿತ್ಯ ಸಿಂಚನ

ಅಕ್ಟೋಬರ್-ಡಿಸೆಂಬರ್ - ೨೦೧೮ ಸಂಪುಟ-೩
ಸಂಚಿಕೆ-೬ ತ್ರೈಮಾಸಿಕ ಪತ್ರಿಕೆ ISSN 2456-3617

ಸಂಪಾದಕರು
ಶಾಮರಾವ ನೆಲವಾಡೆ

◈

ಗೌರವ ಸಲಹೆಗಾರರು
ಸಂಜೀವಕುಮಾರ ಅತಿವಾಳೆ
ರವೀಂದ್ರ ಲಂಜವಾಡಕರ್
ಶಿವಕುಮಾರ ಚಿನಶೆಟ್ಟಿ
ಸಂಜೀವಕುಮಾರ ಭಾಲ್ಕೆ ಜಂಬಗಿ
ವಿಳಾಸ
ಶಾಮರಾವ ನೆಲವಾಡೆ
ಸಂಪಾದಕರು
ಮನೆ ಸಂಖ್ಯೆ: ೯-೯-೧೩೭, ಅಕ್ಕಮಹಾದೇವಿ ಕಾಲೋನಿ
ಹಾರೂರಗೇರಿ ರಸ್ತೆ, ಬೀದರ್-೫೮೫೪೦೩.

ಚಂದಾ ವಿವರ
ಬಿಡಿ ಪ್ರತಿ : ೫೦ ರೂ.
ವಾರ್ಷಿಕ : ೨೦೦ ರೂ.
೩ ವರ್ಷಕ್ಕೆ : ೬೦೦ ರೂ.
೫ ವರ್ಷಕ್ಕೆ : ೧೦೦೦ ರೂ.
ಪೋಷಕರು : ೫೦೦೦ ರೂ

ಪ್ರಕಾಶಕರು
ಕರುನಾಡು ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ (ರಿ)
೧೫-೫-೫೭೫, ಕುಂಬಾರವಾಡ ರಸ್ತೆ, ಬ್ಯಾಂಕ್‌ಕಾಲೋನಿ, ಬೀದರ-೫೮೫೪೦೩
ಪತ್ರಿಕೆ ಚಂದಾದಾರರಾಗಲು ಹಾಗೂ ಲೇಖನಗಳನ್ನು ಕಳಿಸಲು ಸಂಪರ್ಕಿಸಿ
೯೨೪೧೦೧೦೬೫೧, ೯೪೪೮೯೬೦೪೭೩, ೯೯೮೬೦೩೩೩೫೬
ತಮ್ಮ ಬರಹಗಳನ್ನು, ನುಡಿ Font ನಲ್ಲಿ ಈ ಕೆಳಗಿನ ಇ-ಮೇಲ್ ಗೆ ಕಳುಹಿಸಿ
sanjeevatiwale@gmail.com / sgnelwade@gmail.com
ಲೇಖನಗಳು ಆಯಾ ಲೇಖಕರ ಅಭಿಪ್ರಾಯಗಳು
ಮುದ್ರಕರು
ಪಟ್ನೆ ಪ್ರಿಂಟರ್ಸ್ ದೀಪಕ್ ಟಾಕೀಸ್ ಹತ್ತಿರ, ಬೀದರ್

ಈ ಸಂಚಿಕೆಯಲ್ಲಿ

ಆಶಯ ಮಾತು

ಸಾಹಿತ್ಯ ಮಾನವನನ್ನು ಸನ್ಮಾರ್ಗದಲ್ಲಿ ನಡೆಯಲು ಮಾರ್ಗದರ್ಶನ ಮಾಡುತ್ತದೆ. ಸಾಹಿತ್ಯ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕಾದರೆ ಅನುಭವ, ಅಧ್ಯಾಯನದ ಅಗತ್ಯವಿದೆ. ಈ ಎರಡು ಇಲ್ಲದೆ ಸಾಹಿತ್ಯ ನಿರ್ಮಿಸಿದರೆ ಹೆಚ್ಚು ಕಾಲ ಜನರ ಮನಸಲ್ಲಿ ಉಳಿಯಲಾರದು. ಸಾಹಿತ್ಯ ಜನರ ಮನಸನ್ನು ಕಲಕುವಂತಿರಬೇಕು. ಸಾಮಾಜಿಕ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಸಾಹಿತ್ಯ ರಚಿಸಬೇಕಾಗಿದ್ದು ಹಿಂದಿಗಿಂತಲೂ ಇಂದು ತೀರ ಜರೂರಿಯಿದೆ.

ಮಾನವೀಯ ಮೌಲ್ಯಗಳಿಗೆ ಬೆಲೆ ಇಲ್ಲದ ಈ ಸಂದರ್ಭದಲ್ಲಿ ಪರಸ್ಪರ ಗೌರವಾದರದ ಬದುಕು ಕಟ್ಟಿಕೊಳ್ಳುವಲ್ಲಿ ಸಾಹಿತ್ಯ ಪೂರಕವಾಗಿ ಕೆಲಸ ಮಾಡಬೇಕಾಗಿದೆ. ಹಿರಿಯರ, ಅನುಭವಿಗಳಿಂದ ರಚಿತಗೊಂಡ ಸಾಹಿತ್ಯದ ಓದಿನಿಂದ ಬದುಕು ರೂಪಿಸಿಕೊಂಡವರು ಸಾಕಷ್ಟು ಜನರಿದ್ದಾರೆ.

ಪ್ರಸ್ತುತ ಸಾಹಿತ್ಯದ ಕ್ಷೇತ್ರದಲ್ಲಿ ಹೆಸರು, ಕೀರ್ತಿ, ಹಣಗಳಿಕೆಯ ಉದ್ದೇಶದಿಂದ ಕೆಲವರು ಪ್ರವೇಶ ಮಾಡಿರುವುದು ವಿಷಾದನೀಯ. ಬರಹದಂತೆ ಬದುಕುವುದು ಕೂಡ ಅಷ್ಟೆ ಮುಖ್ಯ. ಬರಹ ಬೇರೆ ಬದುಕು ಬೇರೆಯಾದರೆ ಸಮಾಜದಲ್ಲಿ ಮಾದರಿಯಾಗಲು ಸಾದ್ಯವಿಲ್ಲ.

ವಿದ್ಯಾರ್ಥಿ ಜೀವನದಲ್ಲಿಯೇ ಮಕ್ಕಳಿಗೆ ಸಾಹಿತ್ಯ, ಸಂಸ್ಕೃತಿ ಮೌಲ್ಯಗಳ ಬಗ್ಗೆ ಅರಿವು ಮೂಡಿಸುವುದು ಅವಶ್ಯಕತೆಯಿದೆ.

ಈ ನಿಟ್ಟಿನಲ್ಲಿ ಕರುನಾಡು ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆಯು ಬಸವಣ್ಣನವರ ಕರ್ಮಭೂಮಿಯಾದ ಬೀದರದಿಂದ ಕಾರ್ಯ ಮಾಡುತ್ತಿದೆ. ಜೊತೆಗೆ ಸಾಹಿತ್ಯ ಸಿಂಚನ ತ್ರೈಮಾಸಿಕ ಪತ್ರಿಕೆಯ ಮೂಲಕ ಓದುಗರನ್ನೂ ಸೃಷ್ಟಿಸುವ ಹಾಗೂ ಸಂಶೋಧನಾ ಕ್ಷೇತ್ರದಲ್ಲಿ ತೊಡಗಿರುವವರಿಗೆ ಬೆಂಬಲ, ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಕೆಲಸ ಕಾರ್ಯಗಳನ್ನು ಮಾಡುತ್ತಿದೆ.

ಎಂದಿನಂತೆ ತಮ್ಮೆಲ್ಲರ ಸಲಹೆ-ಸೂಚನೆ, ಸಹಾಯ-ಸಹಕಾರ ಹೀಗೆ ಮುಂದೆಯೂ ಕೂಡ ಇರಲೆಂದು ಆಶಿಸುವೆ.

-ಸಂಜೀವಕುಮಾರ ಅತಿವಾಳೆ

ಗೌರವ ಅಧ್ಯಕ್ಷರು ಕರುನಾಡು ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ,
ಬೀದರ

ಲೇಖಕರ / ಚಂದಾದಾರರ ಗಮನಕ್ಕೆ

ಭಾಷೆ, ಸಾಹಿತ್ಯ, ಸಂಸ್ಕೃತಿ, ಸಂಶೋಧನೆ, ಮೌಲ್ಯಯುತ ಬದುಕು ನಡೆಸಿದ ಮಹನೀಯರ ಬದುಕು ಬರಹ ಕುರಿತಾಗಿ ಬೆಳಕು ಚೆಲ್ಲುವ ರೀತಿಯ ಲೇಖನಗಳು ಈ ಪತ್ರಿಕೆಯೂ ಅಪೇಕ್ಷಿಸುತ್ತದೆ.

ಕವನ, ಹನಿಗವನ, ಚುಟುಕುಗಳು, ಹಾಸ್ಯ ಬರಹಗಳು, ಸಣ್ಣ ಕಥೆ, ಬದುಕಿನ ಉನ್ನತಿಗೆ ಸಂಬಂಧಿಸಿದ ಸಂದೇಶ ಮತ್ತು ಬರಹಗಳು, ಕೂಡ ಕಳುಹಿಸಬಹುದು.

ಈ ಪತ್ರಿಕೆಯ ಮತ್ತೊಂದು ಮಹತ್ವವೆಂದರೆ ಸಂಶೋಧಕರಿಗೆ, ಉಪನ್ಯಾಸಕರಿಗೆ, ಪ್ರಾಧ್ಯಾಪಕರಿಗೆ, ಶಿಕ್ಷಕರಿಗೆ ಅತಿ ಉಪಯುಕ್ತವಾದ ISSN ಸಂಖ್ಯೆ ದೊರೆತಿರುತ್ತದೆ. ಇಂತಹ ಮಹತ್ವದ ಪತ್ರಿಕೆಗೆ ತಾವುಗಳು ಕೂಡ ಚಂದಾದಾರರಾಗಿ ಪತ್ರಿಕೆ ಮುನ್ನೆಡೆಸಲು ಸಹಕರಿಸಬೇಕು.

ಸಾಹಿತ್ಯ ಸಿಂಚನ ಪತ್ರಿಕೆಗೆ ಲೇಖನ ಕಳಿಸುವವರು ಮೂರರಿಂದ ನಾಲ್ಕು ಪುಟಗಳ ಒಳಗೆ ಲೇಖನವನ್ನು ನುಡಿ ಅಕ್ಷರಗಳಲ್ಲಿ ಸಿದ್ಧಪಡಿಸಿ ನಮ್ಮ ಇ-ಮೇಲ್

sanjeevatiwale@gmail.com/ sgnelwade@gmail.com
ವಿಳಾಸಕ್ಕೆ ಕಳಿಸಬೇಕು.

ಪತ್ರಿಕೆಯ ಚಂದಾದಾರರಾಗಲು ಬಯಸುವವರು
ಈ ಕೆಳಗಿನ ಬ್ಯಾಂಕ್ ಖಾತೆಗೆ ಚಂದಾ ಹಣ ಕಳುಹಿಸಬೇಕೆಂದು
ವಿನಂತಿ

ಖಾತೆ ಹೆಸರು : ಕರುನಾಡು ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ, ಬೀದರ
ಶಾಖೆ ಹೆಸರು : ಕ್ಯಾನರ್ ಬ್ಯಾಂಕ್ ಮುಖ್ಯ ಶಾಖೆ, ಬೀದರ
ಖಾತೆ ಸಂಖ್ಯೆ : 0448101060292
IFSC code : CNRB0000448
ಸಂಪರ್ಕ ಸಂಚಾರಿವಾಣಿ : 9241010651

– ಶಾಮರಾವ ನೆಲವಾಡೆ

ಸಂಪಾದಕರು

ಕಸ್ತೂರಿ ಕನ್ನಡ

ಕೋಟಿ ಕೋಟಿ ಜನಮನದ ಕನ್ನಡ
ನಾಡು ನುಡಿ ಮೆರೆಸುವ ಕನ್ನಡ
ಬಾಳ ದೀಪ ಬೆಳಗುವ ಕನ್ನಡ
ರಾಗ ರಂಗು ನೀಡುವ ಕನ್ನಡ
ಬೆಳಗೋಣ ಬೆಳಗೋಣ ಕರುನಾಡ ಹಣತೆ,
ಮರೆಸೋಣ ನಾವಿಂದು ಈ ನೆಲದ ಕವಿತೆ
ಜನಪದದ ಒಡಲಿಂದ ಹರಿದಿದೆ ಸರಿತೆ,
ಮೊಗೆದರೂ ಮುಗಿಯದು ಕನ್ನಡದ ಒರತೆ!
ಯುಗಯುಗದ ಇನಿದನಿಯು ಸಂಗೀತ ಸ್ವರವಾಗಿ
ಈ ಮಣ್ಣ ಸಿರಿ ಮಿಡಿತ ಶಿಲ್ಪಕಲೆ ನೆಲೆಯಾಗಿ
ಕನ್ನಡದ ನಿಜಗುಡಿಗೆ ಬಾಂದಳದ ಹಿರಿಮೆ
ಕಸ್ತೂರಿ ತನಿ ನುಡಿಗೆ ಸಂಸ್ಕೃತಿಯ ಗರಿಮೆ!
ಸನ್ನಡತೆ ಸನ್ಮಾರ್ಗ ಜನಮನದ ಉಸಿರಾಗಿ
ಸಾಮರಸ್ಯ ಭಾವಸಿರಿ ಸದ್ಧರ್ಮ ತೇರಾಗಿ.....
ಕನ್ನಡದ ಸತ್ಕೀರ್ತಿ ಜಗದಗಲ ಮುಗಿಲಗಲ
ಕನ್ನಡದ ಅಭ್ಯುದಯ ಸಮೃದ್ಧ ಅನುಗಾಲ!
ವಚನ ಸುಧೆಯ ಸವಿದಿರುವ ಕನ್ನಡ
ಗೀತ ಧಾರೆ ಹರಿಸಿರುವ ಕನ್ನಡ
ದಾಸ ನಮನ ನಲಿಸಿರುವ ಕನ್ನಡ
ನಾದಗಂಗೆ ಎನಿಸಿರುವ ಕನ್ನಡ.

– ಡಾ॥ ದೊಡ್ಡರಂಗೇಗೌಡರು
ಹಿರಿಯ ಕವಿಗಳು, ಬೆಂಗಳೂರು

ಆಧುನಿಕ ಕನ್ನಡ ಸಾಹಿತ್ಯ ಪರಂಪರೆ ಮತ್ತು ಮಹಿಳೆ

ಬ್ರಿಟಿಷ್ ವಸಾಹತಿನ ಪ್ರಭಾವದಿಂದಾಗಿ ಭಾರತದ ೨೦ನೇ ಶತಮಾನ ಆಧುನಿಕದೆಡೆಗೆ ಮುಖ ಮಾಡಿತು. ಹೊಸ ಹೊಸ ಜ್ಞಾನದಿಗಂತಗಳನ್ನು ಅರಿಯುವುದು; ಅರಿತುಕೊಂಡದ್ದನ್ನು ಅಭಿವ್ಯಕ್ತ ಮಾಡುವ ಸ್ವಾತಂತ್ರ್ಯವನ್ನು ಮಹಿಳೆ ಪಡೆದುಕೊಂಡಳು.

೧೯೦೭ರಲ್ಲಿ ವೀರಶೈವ ಮಹಾಸಭೆಯ ವೇದಿಕೆಯ ಮೇಲೆ ಮಾತನಾಡಿದ ಮೊದಲ ವೀರಶೈವ ಮಹಿಳೆ ಬಾರ್ಸಿ ಗಂಗಾಬಾಯಿ ಎಂದು ತಿಳಿದುಬರುತ್ತದೆ (ಎಮ್.ಎಮ್.ಕಲಬುರ್ಗಿಯವರು ಬೀದರಿನ ರಂಗಮಂದಿರದಲ್ಲಿ ದೇಜಗೌ ಅವರ ಸನ್ಮಾನ ಸಮಾರಂಭದಲ್ಲಿ ಮಾತನಾಡುತ್ತಾ ಈ ವಿಷಯ ಉಲ್ಲೇಖಿಸುತ್ತಾರೆ). ಅದರಂತೆ ೧೯೦೯-೧೯೧೦ರಲ್ಲಿ ಸಂತೂಬಾಯಿ (ಶಾಂತಾಬಾಯಿ) ನೀಲಗಾರ (ಮುಖ್ಯೋಪಾಧ್ಯಾಯಿನಿ ಆಗಿದ್ದರು) ಸ್ಪರ್ಧೆಗಾಗಿ ಬರೆದ ಕಾದಂಬರಿ 'ಸದ್ಗುಣಿ ಕೃಷ್ಣಾಬಾಯಿ ಅಥವಾ ಉತ್ತಮ ಗೃಹಿಣಿ' ಇವರನ್ನು ಆಧುನಿಕ ಕನ್ನಡದ ಪ್ರಥಮ ಲೇಖಕಿ ಎಂದು ಗುರುತಿಸಲಾಗಿದೆ (ಶಕುಂತಲಾ ಎಸ್.ದುರ್ಗಿ, ಆಧುನಿಕ ಕನ್ನಡದಲ್ಲಿ ಮಹಿಳಾ ಸಾಹಿತ್ಯ, ೧೯೯೯, ಪು-೩೮). ನಂಜನಗೂಡಿನ ತಿರುಮಲಾಂಬ ಹೊಸಗನ್ನಡದ ಮೊದಲ ಲೇಖಕಿ, ಮೊದಲ ಪತ್ರಿಕಾ ಸಂಪಾದಕಿ ಜೊತೆಗೆ ಮೊದಲ ಪ್ರಕಾಶಕಿಯೂ ಆಗಿದ್ದು, ಸತೀ ಹಿತೈಷಿಣಿ ಗ್ರಂಥಮಾಲೆಯನ್ನು ಹೊರತಂದರು (ವಿಜಯಾ ದಬ್ಬೆ, ಲೇಖಕಿಯರ ಸಾಹಿತ್ಯ ೭೫ ವರ್ಷಗಳಲ್ಲಿ, ೧೯೮೭, ಪು-೭). ಕರ್ನಾಟಕ ನಂದಿನಿ ಮಹಿಳೆಯರಿಂದ ಮಹಿಳೆಯರಿಗಾಗಿ ಹೊರಡಿಸುತ್ತಿದ್ದ ಪತ್ರಿಕೆ (೧೯೧೯), ೧೯೨೨ರಲ್ಲಿ 'ಸನ್ಮಾರ್ಗ ದರ್ಶಿನಿ' ಎಂಬ ಮತ್ತೊಂದು ಪತ್ರಿಕೆಯನ್ನು ತರಲಾರಂಭಿಸಿದ್ದರು. ೧೯೧೩ರಲ್ಲಿ ಅವರ ಸುಶೀಲೆ ಕಾದಂಬರಿ ಪ್ರಕಟವಾಗಿದೆ. ಭಕ್ತಿಗೀತಾವಳಿ ಭದ್ರಗೀತಾವಳಿಗಳು ಗೀತಪ್ರಕಾರಗಳಾಗಿವೆ. ೧೮೮೭ರಲ್ಲಿ ಜನಿಸಿದ ತಿರುಮಲಾಂಬ ಅವರು ಬಾಲ ವಿಧವೆಯಾದವರು. ಆದರೂ ಎದೆಗುಂದದೆ ತಮ್ಮ ಕ್ರಿಯಾಶೀಲತೆಯಿಂದಾಗಿ ೯೫ ವರ್ಷಗಳ ಸಾರ್ಥಕ ಜೀವನವನ್ನು ನಡೆಸಿ, ತಮ್ಮ ಕಾಲದ ಮಹಿಳೆಯರಿಗೆ ಆದರ್ಶಪ್ರಾಯರೆನಿಸಿದ್ದರು (ಹೇಮಲತಾ ಮಹಿಷಿ, ಅದೇ, ೧೯೮೭, ಪು- , ಮೊದಲ ಮಾತಿನಲ್ಲಿ).

ಆರ್.ಕಲ್ಯಾಣಮ್ಮನವರು ಸೃಜನಶೀಲ ಸಾಹಿತ್ಯ ರಚನೆಯ ಜೊತೆಗೆ ತಮ್ಮ ವಿಚಾರಗಳನ್ನು ಜನರಿಗೆ ತಲುಪಿಸುವುದಕ್ಕಾಗಿ ಮತ್ತು ಸ್ತ್ರೀಯರಲ್ಲಿ ವಿಚಾರಶಕ್ತಿಯನ್ನು ಜಾಗೃತಗೊಳಿಸುವುದಕ್ಕಾಗಿ ಪತ್ರಕರ್ತೆಯಾದವರು. ಸುಮಾರು ೪೦ ವರ್ಷಗಳ ಕಾಲ 'ಸರಸ್ವತಿ' (೧೯೨೦) ಎಂಬ ಪತ್ರಿಕೆಯನ್ನು ನಡೆಯಿಸಿಕೊಂಡು ಬರುತ್ತಾ,

ಮಹಿಳಾ ಸಾಹಿತ್ಯದ ಬೆಳವಣಿಗೆಗೆ ಅಪಾರ ಸೇವೆ ಸಲ್ಲಿಸಿರುವರು. ಕೊಡಗಿನ ಗೌರಮ್ಮ ೨೭ರ ಹರೆಯದಲ್ಲಿಯೇ ಆಕಸ್ಮಿಕ ದುರ್ಮರಣಕ್ಕೀಡಾದ ಭರವಸೆಯ ಕಥೆಗಾರ್ತಿ (೧೯೧೨-೧೯೩೯). 'ಚಿಗುರು ಮತ್ತು ಕಂಬನಿ' ಎಂಬ ಎರಡು ಕಥಾ ಸಂಕಲನಗಳನ್ನು ಕೊಟ್ಟು, ಸಾಕಷ್ಟು ಭರವಸೆಗಳನ್ನು ಮೂಡಿಸಿ ಕನ್ನಡ ಸಾಹಿತ್ಯ ಲೋಕದೊಂದಿಗೆ ಇಹಲೋಕವನ್ನು ಬಿಟ್ಟು ಹೋದವರು.

"ಕೊಡಗಿನ ಗೌರಮ್ಮನವರ ಹೆಸರು ಸಣ್ಣ ಕಥೆಯೊಂದಿಗೆ ನಿಕಟ ಸಂಬಂಧವನ್ನು ಬೆಳೆಸಿಕೊಂಡಿದೆ. ಗೌರಮ್ಮನವರು ಮೊದಲ ಲೇಖಕಿಯರೆಂದಷ್ಟೇ ಅಲ್ಲದೆ, ಒಳ್ಳೆಯ ಕತೆಗಾರರೆಂದು ಸ್ಮರಣೀಯರಾಗಿದ್ದಾರೆ" (ಜಿ.ಬಿ.ಜೋಷಿ. ಕೆ.ಡಿ.ಕುರ್ತಕೋಟಿ, ನಡೆದುಬಂದ ದಾರಿ, ಸಂಪುಟ-೨, ೧೯೬೦, ಪು-೮೧೩). ಕೊಡಗಿನ ಗೌರಮ್ಮನವರಿಂದ ಆರಂಭಗೊಂಡ ಸಣ್ಣಕತೆ ಪರಂಪರೆಯನ್ನು ಆರಂಭದ ತಲೆಮಾರಿನವರು ಮತ್ತು ಹೊಸ ತಲೆಮಾರಿನವರು ಎಂದು ಎರಡು ಭಾಗಗಳಲ್ಲಿ ನೋಡಲಾಗಿದೆ. ಆರಂಭದ ತಲೆಮಾರಿನವರಲ್ಲಿ ಶಾಮಲಾದೇವಿ ಬೆಳಗಾಂವಕರ, ಜಯಲಕ್ಷ್ಮೀ ಆರ್. ಶ್ರೀನಿವಾಸನ್, ಸರಸ್ವತಿ ರಾಜವಾಡೆ (ಗಿರಿಬಾಲೆ), ಶಾಂತಾದೇವಿ ಮಾಳವಾಡ ಮತ್ತು ಸರಸ್ವತಿ ದೇವಿ ಗೌಡರನ್ನು ಹೆಸರಿಸಲಾಗಿದೆ. ಹೊಸ ತಲೆಮಾರಿನ ಕತೆಗಾರರಲ್ಲಿ ತ್ರಿವೇಣಿಯೆಂದೇ ಪರಿಚಿತರಾದ ಅನುಸೂಯಾ ಶಂಕರ್, ಕಾತ್ಯಾಯಿನಿ ಎಚ್.ಎಸ್, ಗೀತಾ ಕುಲಕರ್ಣಿ, ಎಚ್.ವಿ.ಸಾವಿತ್ರಮ್ಮ, ವೀಣಾ ಶಾಂತೇಶ್ವರ ಇವರೆಲ್ಲಾ ಮುಖ್ಯರಾಗುತ್ತಾರೆ.

ನಂಜನಗೂಡಿನ ತಿರುಮಲಾಂಬ ಅವರು ಸುಶೀಲೆ, ನಭಾ, ವಿದ್ಯುಲ್ಲತಾ, ವಿರಾಗಿಣಿ, ವಿಕ್ರಮ, ನಿಶಾಕಾಂತ ಮೊದಲಾದ ಕಾದಂಬರಿಗಳ ರಚನೆಯ ಮೂಲಕ ಆರಂಭಿಸಿದ ಕಾದಂಬರಿ ಸಾಹಿತ್ಯ ಪರಂಪರೆಯು ಆರ್.ಕಲ್ಯಾಣಮ್ಮ ಅವರಿಂದ ಮುಂದುವರೆಯಿತು. ಇವರು ಪ್ರಿಯಂವದೆ, ನಿರ್ಭಾಗ್ಯ ವನಿತೆ, ಸುಖಲತೆ ಮೊದಲಾದ ಕಾದಂಬರಿಗಳನ್ನು ರಚಿಸಿದ್ದಾರೆ. ಕಾದಂಬರಿ ಸಾಹಿತ್ಯದಲ್ಲಿ ಎರಡನೆಯ ಘಟ್ಟದಲ್ಲಿ ಗುರುತಿಸಲಾಗುವ ಆಧುನಿಕ ಕಾದಂಬರಿಕಾರ್ತಿಯರ ಪಟ್ಟಿಯು ದೀರ್ಘವಾಗಿದೆ. ಅದರಲ್ಲಿ ತ್ರಿವೇಣಿ, ವಾಣಿ, ಅನುಪಮ ನಿರಂಜನ, ಎಂ.ಕೆ.ಇಂದಿರಾ, ಆರ್ಯಾಂಬ ಪಟ್ಟಾಭಿ, ಸರೋಜಾರಾವ್ ಕಾಕೋಳು ಮೊದಲಾದವರೆಲ್ಲ ಸೇರುತ್ತಾರೆ.

ಈ ಎರಡೂ ಘಟ್ಟದ ಗದ್ಯ ಲೇಖಕಿಯರು ತಮ್ಮ ಕೃತಿಗಳಲ್ಲಿ (ಕಾದಂಬರಿ, ನಾಟಕ, ಲೇಖನ ಇತ್ಯಾದಿ) ಬಾಲವಿಧವೆ, ಶೀಲ, ಬಾಲವಿಧವಾ ವಿವಾಹ, ಪ್ರೌಢವಿಧವಾ ವಿವಾಹ, ಉದ್ಯೋಗಸ್ಥ ಮಹಿಳೆಯ ಸಂದಿಗ್ಧತೆ, ತಲೆಮಾರುಗಳ ಅಂತರ, ಮಾನವೀಯ ಅಂತಃಕರಣ ಮತ್ತು ಕಲಾರಾಧನೆ ಮುಂತಾದ ವಿಷಯಗಳನ್ನು ಚರ್ಚಿಸಿದ್ದಾರೆ. ಆದರೆ ಆಧುನಿಕರಲ್ಲಿ ಸಾಮಾಜಿಕ ಸಮಸ್ಯೆಗಳು, ವ್ಯಕ್ತಿಯ ಬೀದರ ಜಿಲ್ಲೆಯ ಕಾವ್ಯವು ಅತ್ಯಂತ ಆಸಕ್ತಿದಾಯಕ ಕ್ಷೇತ್ರ ಆಗಿರುವುದರಿಂದ ಕನ್ನಡದಲ್ಲಿ ಆಧುನಿಕ ಕಾವ್ಯ ಪರಂಪರೆ ನಡೆದು ಬಂದ ಪ್ರಮುಖ ಹೆಜ್ಜೆ ಗುರುತುಗಳನ್ನುಆಧುನಿಕ ಕನ್ನಡ ಸಾಹಿತ್ಯದಲ್ಲಿ ಗದ್ಯದ ಕಡೆ ಒಲವನ್ನು ತೋರಿಸಿದ ಮಹಿಳೆಯರಂತೆ,

ಕಾವ್ಯದ ಕಡೆ ನೆಚ್ಚಿಕೆ ತೋರಿಸಿದವರು ಆರಂಭದ ಘಟ್ಟದಲ್ಲಿ ಗಮನಾರ್ಹವಾಗಿ ಕಂಡುಬರುತ್ತಾರೆ. ತಿರುಮಲೆ ರಾಜಮ್ಮ, ಸಾವಂತ್ರಾದೇವಿ, ಬೆಳಗೆರೆ ಜಾನಕಮ್ಮ, ಜಯದೇವಿತಾಯಿ ಲಿಗಾಡೆ, ಹಾಡಿನ ವೆಂಕಮ್ಮ, ಎಂ.ಬಿ.ಗೌರಮ್ಮ, ಪಾರ್ವತಿ ಹೆಗಡೆ, ಹಾಡಿನ ಹುಚ್ಚಮ್ಮ, ಕರವೀರ ಶೆಟ್ಟಿರ ಸಂಗಮ್ಮ, ವಾಸಂತಿ ಟೆಕಣ್ಣರು ಮುಂತಾದವರೆಲ್ಲ ಮುಖ್ಯರಾಗಿದ್ದಾರೆ. ಇವರಲ್ಲಿ ಹೆಚ್ಚಿನವರು ಪ್ರಾಥಮಿಕ ಶಿಕ್ಷಣ ಪಡೆದವರು. ಆದರೆ ಆಶುಕವಯಿತ್ರಿಯರು, ದೈವ ಪ್ರೇರಕರು, ಧರ್ಮ ಪೋಷಕರು ಆಗಿರುವರು.

ತಿರುಮಲೆ ರಾಜಮ್ಮನವರು 'ಭಾರತಿ' ಕಾವ್ಯನಾಮದಿಂದ ಅನೇಕ ಕಾವ್ಯ, ನಾಟಕ, ವ್ಯಕ್ತಿ ಚಿತ್ರಣಗಳನ್ನು ರಚಿಸಿದ್ದಾರೆ. ಖ್ಯಾತ ಪತ್ರಿಕೋದ್ಯಮಿ ತೀ.ತಾ. ಶರ್ಮರ ಪತ್ನಿಯಾದ ಇವರು ಶರ್ಮರ 'ವಿಶ್ವಕರ್ನಾಟಕ'ದಲ್ಲಿ ವಿಚಾರಪೂರ್ಣ ಲೇಖನಗಳನ್ನು ಬರೆಯುತ್ತಿದ್ದರು. ತಪಸ್ವಿನಿ, ಮಹಾಸತಿ, ಸ್ವರ್ಗ ನಿರಸನ ಇವು ಇವರ ಪ್ರಮುಖ ಕೃತಿಗಳು. ಇವರ ತಪಸ್ವಿನಿ ಸಾಹಿತ್ಯ ಪ್ರಪಂಚದಲ್ಲಿ ಕ್ರಾಂತಿಯನ್ನೆಬ್ಬಿಸಿದ ಕೃತಿಯಾಗಿತ್ತೆಂಬುದು ಗಮನಾರ್ಹವಾಗಿದೆ (ಸರೋಜಿನಿ ಮಹಿಷಿ, ಕರ್ನಾಟಕದ ಕವಯಿತ್ರಿಯರ, ಸಂಶೋಧನ ಪ್ರಬಂಧ, ೧೯೬೧, ಪು-೬೮೩). ರಾಮಾಯಣದಲ್ಲಿ ಅಲಕ್ಷಿತ ಪಾತ್ರವಾದ ಊರ್ಮಿಳೆಯ ಜೀವನ ಕುರಿತಾದ ಈ ಕೃತಿ ವಿಷಯ ನಿರೂಪಣೆ ಮತ್ತು ಶೈಲಿಯಿಂದ ವಿನೂತನವಾಗಿದೆ ಎಂಬುದನ್ನು ಗಮನಿಸಿ ಕನ್ನಡ ಸಾಹಿತ್ಯ ಪರಿಷತ್ತು ಈ ಕೃತಿಗೆ ಬಹುಮಾನ ನೀಡಿ ಗೌರವಿಸಿದೆ.

ಬೆಳಗೆರೆ ಜಾನಕಮ್ಮ (೧೯೧೪-೧೯೪೮) ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯವರು. ಅವರು ನವೋದಯದ ಪ್ರಮುಖ ಕವಯಿತ್ರಿ. ಕಲ್ಯಾಣ ಇವರ ವಿವಿಧ ವಿಷಯಗಳ ಕವನ ಸಂಕಲನವಾಗಿವೆ. ಇದು ೧೯೪೮ರಲ್ಲಿ ಪ್ರಕಟವಾಗಿದೆ. ಇದರಲ್ಲಿ ೫೪ ಕವಿತೆಗಳಿವೆ. ಇದರಲ್ಲಿ ಸ್ತ್ರೀ ಸಂವೇದನೆಯ ಮೊದಲ ಎಳೆಗಳನ್ನು ಗುರುತಿಸಲಾಗಿದೆ. ಹಲವಾರು ಭಕ್ತಿಗೀತೆಗಳನ್ನು ರಚಿಸಿರುವ ಜಾನಕಮ್ಮನವರು ಸಾಮಾಜಿಕ ಅನ್ಯಾಯವನ್ನು ಕುರಿತು ಬರೆಯುವಾಗ ಭಿನ್ನರಾಗುತ್ತಾರೆ. ಆಗ ಇವರ ಲೇಖನಿಗೆ ಎಲ್ಲಿಲ್ಲದ ಹರಿತ ಬರುತ್ತದೆ. ಜಾನಕಮ್ಮ "ತಮ್ಮ ಕವನಗಳಲ್ಲಿ ಬಳಸಿರುವ ಲಯಗಳು, ಬಂಧರೂಪಕ ಶಕ್ತಿ ನವೋದಯ ಕಾಲದ ಶ್ರೇಷ್ಠ ಕವನಗಳಿಗೆ ಸರಿಸಾಟಿಯಾಗಿ ನಿಲ್ಲಬಲ್ಲವಾಗಿವೆ" (ಜಿ.ಎಸ್.ಎಸ್. (ಸಂ), ಕನ್ನಡ ಸಾಹಿತ್ಯ ಸಂದರ್ಭ, ೧೯೯೯, ಪು೨೩೦). ಜಾನಕಮ್ಮನವರ ಚಂಡಶಾಸನ, ಗಂಡ ಮೊದಲಾದ ಕವಿತೆಗಳು ಸ್ತ್ರೀ ಸಂವೇದಿ ಭಾವನೆಗಳಿಂದ ಕೂಡಿದವು ಆಗಿವೆ. ಆಡುಮಾತಿನ ಧಾಟಿ ಕವಿತೆಗಳ ಆಪ್ತತೆಗೆ ಕಾರಣವಾಗಿದೆ.

ಜಯದೇವಿತಾಯಿ ಲಿಗಾಡೆ ಇವರು ೪೧ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷೆ ಪಟ್ಟವನ್ನು ಅಲಂಕರಿಸಿದ ಪ್ರಪ್ರಥಮ ಮಹಿಳೆಯಾಗಿದ್ದಾರೆ. ಗಡಿನಾಡಾದ ಸುರಪುರದವರಾದ ಇವರು ಕನ್ನಡ ನಾಡು ನುಡಿಗೆ ತಮ್ಮ ತನು ಮನಗಳನ್ನು ಮೀಸಲಾಗಿರಿಸಿದ್ದರು. ತ್ರಿಪದಿಯಲ್ಲಿ ಶ್ರೀ ಸಿದ್ಧರಾಮೇಶ್ವರ ಪುರಾಣ

ಮಹಾಕಾವ್ಯ ರಚಿಸಿದ ಖ್ಯಾತಿ ಇವರದಾಗಿದೆ (೧೯೬೫ ರಿಂದ ೧೯೭೧). ಜಯಗೀತ (೧೯೫೨) ಅವರ ಮೊದಲ ಕವನ ಸಂಕಲನವಾಗಿದೆ. ತಾಯಿಯ ಪದಗಳು (೧೯೫೯), ಸಾವಿರದ ಪದಗಳು, ತಾರಕ ತಂಬೂರಿ (೧೯೬೮), ಬಂದೇವು ಕಲ್ಯಾಣಕ (೧೯೮೨) ಇವು ಇತರ ಸಂಕಲನಗಳಾಗಿವೆ. ವಿಶಾಲ ದೃಷ್ಟಿಕೋನ, ತ್ಯಾಗ ಭಕ್ತಿಯೋಗಗಳ ಸಮನ್ವಯ ಇವರಲ್ಲಿ ಕಂಡಿವೆ.

ಎಂ.ಬಿ.ಗೌರಮ್ಮ (ಶ್ರೀಕಂಠಶಾಸ್ತ್ರಿಗಳ ಸೊಸೆ) ಸತಿ ವೃಂದಾ ಎಂಬ ಕಾವ್ಯವನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿರುವರು. ಪಾರ್ವತಿದೇವಿ ಹೆಗಡೆ ಉತ್ತರ ಕನ್ನಡ ಜಿಲ್ಲೆಯ ಕರ್ಕಿಯವರಾಗಿದ್ದಾರೆ. ವೇಣಿಪುಷ್ಪ ಇವರ ಪ್ರಥಮ ಸಂಕಲನ. ಇವರ ಸಂಶಯ ಮತ್ತು ಅಹಲ್ಯೆ ಕವಿತೆಗಳು ಸ್ತ್ರೀಸಂವೇದನೆಯನ್ನು ಬಲವಾಗಿ ಪ್ರತಿಪಾದಿಸುತ್ತವೆ.

ಕರವೀರ ಶೆಟ್ಟರ ಸಂಗಮ್ಮ ಅವರ 'ಭಾವ ಕುಸುಮ' ೧೯೫೫ರಲ್ಲಿ ಪ್ರಕಟವಾಗಿದೆ. ಅನುಭಾವಪೂರ್ಣ ೪೭ ಭಾವಗೀತೆಗಳು ಈ ಸಂಕಲನದಲ್ಲಿವೆ. ಈ ಕೃತಿಗೆ ಮುನ್ನುಡಿ ಬರೆಯುತ್ತಾ ಹಿರಿಯ ಕವಿಗಳಾದ ಡಿ.ಎಸ್.ಕರ್ಕಿಯವರು "ಕವಿಗಳಷ್ಟು ಕವಯಿತ್ರಿಯರು ತೋರಿ ಬಾರದುದಕ್ಕೆ ಹೆಣ್ಣು ಮಕ್ಕಳಲ್ಲಿ ಸ್ವಭಾವತಃ ಕಾವ್ಯ ಪ್ರತಿಭೆ ಕಡಿಮೆಯೆಂದು ಅರ್ಥ ಮಾಡಕೂಡದು. ಬರೆಯುವ ಅಭ್ಯಾಸದ ಕೊರತೆಯಿಂದಾಗಿ ಅವರ ಕಾವ್ಯ ಪ್ರತಿಭೆ ಕಾವ್ಯ ರೂಪದಲ್ಲಿ ಮೈದೋರದೆ ಉಳಿಯುತ್ತದೆ ಅಷ್ಟೇ ಎಂದಿದ್ದಾರೆ." ಇವರ ಹೆಚ್ಚಿನ ಗೀತೆಗಳು ಪ್ರಾರ್ಥನಾ ಗೀತೆಗಳಾಗಿವೆ.

ಕವಯಿತ್ರಿ ವಾಸಂತಿಬಾಯಿ ತಮ್ಮ ಹದಿನಾರನೆಯ ವಯಸ್ಸಿನಲ್ಲೇ ಸ್ನೇಹಿತೆಗೆ ಕಾವ್ಯ ರೂಪದಲ್ಲಿ ಪತ್ರ ಬರೆಯುವ ಸಾಮರ್ಥ್ಯ ಹೊಂದಿದವರಾಗಿದ್ದರು. ದಾನಲಿಂಗಾ ಪುರಾಣ ಭಾಮಿನಿಷಟ್ಪದಿಯಲ್ಲಿ ರಚನೆಯಾಗಿರುವ ಕೃತಿಯಾಗಿದೆ. ಮೃಚ್ಛಕಟಿಕ, ಪದ್ಮನಯನೆ ನಾಟಕಗಳ ಕರ್ತೃವಾಗಿರುವ ಶ್ರೀ ಉಳವೀಶ ನೇಸರ್ಗಿಯವರ ಮಗಳು ವಾಸಂತಿಬಾಯಿ ಧಾರವಾಡದ ಶ್ರೇಷ್ಠ ಕವಯಿತ್ರಿ

ಇವರೆಲ್ಲರ ಕಾವ್ಯವನ್ನು ಗಮನಿಸಿದಾಗ ಸಂಪ್ರದಾಯಸ್ಥ ಸಮಾಜದ ಹಿನ್ನೆಲೆಯ ನೆಲೆಗಟ್ಟಿದ್ದರೂ ಅದನ್ನೇ ಅಪ್ಪಿ-ಒಪ್ಪಿ ನಡೆಯುವ ಅಂಧಾನುಕರಣೆ ಎಲ್ಲಿಯೂ ಕಂಡುಬರುವುದಿಲ್ಲ. ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳಂತೆ ಮೌಢ್ಯತೆಯ ಪಾತಿವ್ರತ್ಯ ದೈವಭಕ್ತಿಪಾಲನೆಯ ನಿರ್ಬಂಧಗಳು ಕಂಡುಬರುವುದಿಲ್ಲ. ಹೊಸ ಚಿಂತನೆ, ವಿಷಯ ವೈವಿಧ್ಯತೆ, ನಿರೂಪಣೆಯಲ್ಲಿ ಹೊಸತನ ಇವೆಲ್ಲಾ ಕಾಣಲಾಗಿದೆ. ಇವರೆಲ್ಲರ ಆರಂಭಿಕ ಗಟ್ಟಿ ಹೆಜ್ಜೆಗಳಿಂದಾಗಿ "ಮಹಿಳೆಯ ಕಾರ್ಯ ಕ್ಷೇತ್ರ ಇಂದು ವ್ಯಾಪಕವಾಗಿದೆ. ಅದಕ್ಕನುಗುಣವಾಗಿ ಸಾಹಿತ್ಯವು ವಿಶಾಲದೃಷ್ಟಿಯಿಂದ ಕೂಡಿದ್ದಾಗಿರಬೇಕು. ಅವಳ ಭಾವನೆಗಳು, ವಿಚಾರಗಳು ಅವಳದೇ ಆಗಿ ಸಾಹಿತ್ಯದಲ್ಲಿ ಹೊರಬರಬೇಕು. ಹಾಗೆ ಅಭಿವ್ಯಕ್ತಗೊಳಿಸುವ ಆತ್ಮವಿಶ್ವಾಸ ಅವಳದಾಗಬೇಕು. ಆಗಲೇ ನಾಡಿನ ಜನತೆಯಲ್ಲಿ ಚೈತನ್ಯವನ್ನು ತುಂಬಬಲ್ಲ ಸಾಹಿತ್ಯ ವ್ಯಾಪಕವಾಗಿ ಅವಳಿಂದ ನಿರ್ಮಾಣವಾದೀತು"

ಎಂಬ ಆಶಾದಾಯಕ ಮಾತುಗಳನ್ನಾಡಿದ್ದಾರೆ ಡಾ.ಸರೋಜಿನಿ ಮಹಿಷಿಯವರು (ಸರೋಜಿನಿ ಮಹಿಷಿ, ಕರ್ನಾಟದ ಕವಯಿತ್ರಿಯರು (ಸಂಶೋಧನಾ ಪ್ರಬಂಧ, ೧೯೬೧, ಪು-೭೬).

ಹೀಗೆ ಇಪ್ಪತ್ತನೇ ಶತಮಾನದ ಮಧ್ಯಂತರ ಯುಗದಲ್ಲಿ ಕನ್ನಡ ಕಾವ್ಯ ರಚನೆ, ಉತ್ಕೃಷ್ಟ ಕೃತಿಗಳ ಬಗೆಗೆ ಚಿಂತನೆ, ನಡೆಸಿದ ಸಾಧನೆ, ಪಡೆದುಕೊಂಡ ಸಿದ್ಧಿ, ಕಾವ್ಯ ಲಕ್ಷಣಗಳನ್ನು ಕುರಿತಾದ ವಿಫುಲವಾದ ಚರ್ಚೆ, ಸ್ತ್ರೀ ಸಂವೇದನಾ ದೃಷ್ಟಿಕೋನ, ಸ್ತ್ರೀತ್ವದ ಜಾಗೃತಿ ಇವೆಲ್ಲವೂ ಕವಯಿತ್ರಿ ಶೈಲಜಾ ಅವರ ಬೆನ್ನಿಗಿದ್ದವು. ಅದರಂತೆ ಸ್ವಾತಂತ್ರ್ಯ ನಂತರದಲ್ಲಿ ಮಹಿಳಾ ಸಾಹಿತ್ಯದ ರಚನೆಗೆ ಬದಲಾಗಿ ಸಾಮಾಜಿಕ ಮೌಲ್ಯಗಳು, ಸ್ತ್ರೀ ಶಿಕ್ಷಣ, ಸ್ವಾತಂತ್ರ್ಯ, ಸಮಾನತೆಯ ಅವಕಾಶಗಳು ಕಾರಣವಾದವು. ಇದರಿಂದಾಗಿ ಯಾವ ಕಾಲದ ಸಾಹಿತ್ಯದಲ್ಲಿಯೂ ಕಾಣಸಿಗದಷ್ಟು ವಸ್ತು ವೈವಿಧ್ಯತೆ, ಪ್ರಯೋಗಶೀಲತೆಯನ್ನು ಹೊಸಗನ್ನಡ ಸಾಹಿತ್ಯದಲ್ಲಿ ಕಾಣುವಂತಾಯಿತು.

ಸಾಮಾಜಿಕ ಅಸಮಾನತೆಯನ್ನು ಕುರಿತು ಪ್ರಶ್ನಿಸುವುದು, "ಸ್ತ್ರೀ ಶಿಕ್ಷಣದ ಅಗತ್ಯತೆಯ ಅರಿವು ಮೂಡಿಸುವುದು, ವ್ಯಕ್ತಿ ಸ್ವಾತಂತ್ರ್ಯವನ್ನು ಬಯಸುವುದು ಈ ಮೊದಲಾದ ವೈಯಕ್ತಿಕ ಮತ್ತು ಸಾಮಾಜಿಕ ಕಾಳಜಿಗಳನ್ನು ಚಿತ್ರಿಸುವುದು ನವೋದಯ ಲೇಖಕಿಯರ ಸಾಹಿತ್ಯೀಕ ಒಲವಾಗಿತ್ತು. ಅವರದು ಸಾಮಾನ್ಯವಾಗಿ ಸುಧಾರಣಾ ವಾದ ಮತ್ತು ವಾಸ್ತವವಾದದ ನೆಲೆಯಲ್ಲಿ ರಚನೆಗೊಂಡ ಸಾಹಿತ್ಯ. ಮಹಿಳಾ ಸಾಹಿತ್ಯ ಯಾವುದೇ ಕಾಲದ ಸಾಹಿತ್ಯಿಕ, ಸಾಮಾಜಿಕ ಚಳುವಳಿಯ ಸಿದ್ಧಾಂತಗಳಿಗೆ ಬದ್ಧವಾಗದೆ, ಆಯಾ ಕಾಲದ ತಾತ್ವಿಕ ವಿಚಾರಗಳಿಂದ ಪ್ರಭಾವಿತವಾಗಿದೆ. ಬಂಡಾಯದ ಸಂದರ್ಭವನ್ನು ಹೊರತುಪಡಿಸಿದರೆ, ಲೇಖಕಿಯರು ಯಾವುದೇ ಚಳುವಳಿ, ಸಂಘಟನೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಸಾಹಿತ್ಯ ರಚನೆಗೆ ತೊಡಗಿದವರಲ್ಲಿ, ಚಳುವಳಿಯ ಹೊರಗಿದ್ದುಕೊಂಡೆ ಚಳುವಳಿಯ ಆಶಯಗಳನ್ನು ಅಭಿವ್ಯಕ್ತಿಸಿದ್ದಾರೆ. ಸಮಕಾಲೀನ ಸಾಮಾಜಿಕ ವ್ಯವಸ್ಥೆಯನ್ನು ಅವಲೋಕಿಸಿದ್ದಾರೆ, ಸ್ಪಂದಿಸಿದ್ದಾರೆ."

ನವೋದಯ ಸಂದರ್ಭದಲ್ಲಿದ್ದ ಸ್ತ್ರೀಪರ ಸಾಮಾಜಿಕ ಕಾಳಜಿ, ಪ್ರಗತಿಶೀಲದ ಪ್ರಗತಿಪರತೆ, ನವ್ಯ ಸಂದರ್ಭದ ಮುಕ್ತ ಆಲೋಚನೆ, ಅಭಿವ್ಯಕ್ತಿ ಇವೆಲ್ಲವೂ ಬಂಡಾಯ ಮನೋಧರ್ಮದಲ್ಲಿ ಮೇಳೈಸಿರುವುದನ್ನು ನೋಡಲಾಗಿದೆ. ಅಂತೆಯೇ ಬಂಡಾಯದ ಆಶಯಗಳನ್ನು ಪ್ರಧಾನವಾಗಿಸಿದ ಕಾವ್ಯ ಜಗತ್ತು ಸಮನ್ವಯ ಧೋರಣೆಯನ್ನು ಪ್ರಕಟಿಸುತ್ತದೆ. ನವೋದಯ, ಪ್ರಗತಿಶೀಲ, ನವ್ಯ ಸಂದರ್ಭದ ಮಹಿಳಾ ಸಾಹಿತ್ಯಕ್ಕಿಂತಲೂ ದಲಿತ ಬಂಡಾಯದ ಮಹಿಳಾ ಸಾಹಿತ್ಯವು ಸಂಖ್ಯೆ ಮತ್ತು ಗುಣದ ದೃಷ್ಟಿಯಿಂದ ಗಮನಾರ್ಹವಾಗಿದೆ.

ಸ್ಥಾಪಿತ ಮೌಲ್ಯಗಳ ನಿರಾಕರಣೆ, ಹೊಸ ಮೌಲ್ಯಗಳ ಅನ್ವೇಷಣೆ, ಸ್ತ್ರೀಶೋಷಣೆಯ ವಿವಿಧ ಮಗ್ಗಲುಗಳನ್ನು ಅರಿಯುತ್ತಲೇ ಅವಕ್ಕೆ ಕಾರಣವಾದ

ವ್ಯವಸ್ಥೆಯನ್ನು ಪ್ರತಿಭಟಿಸುವುದೇ ಪ್ರಧಾನ ಆಶಯಗಳಾಗಿ ನಿಂತವು. ದಾಂಪತ್ಯದ ವಿಫಲತೆಯೊಂದಿಗೆ ದುಡಿಯುವ ಮಹಿಳೆಯ ತೊಳಲಾಟ, ಅಸಹಾಯಕತೆಗಳಿಂದಾಗಿ ಸ್ತ್ರೀವಾದಿ ನೆಲೆಯ ಚಿಂತನೆಯೂ ಪ್ರಧಾನವಾಯಿತು. ಸ್ತ್ರೀ ಸಂವೇದನೆ ಪ್ರಖರವಾಗುತ್ತ ನಡೆಯಿತು.

ಈ ಹಿನ್ನೆಲೆಯಲ್ಲಿ ಇತ್ತೀಚಿನ ಲೇಖಕಿಯರು ಆತ್ಮಾವಲೋಕನಕ್ಕೆ ಹೆಚ್ಚಾಗಿ ತೊಡಗಿಸಿಕೊಂಡಿದ್ದಾರೆ. ನವೋದಯದವರ ರಮ್ಯಭಾವ, ಪ್ರಯೋಗಶೀಲತೆ, ಪ್ರಗತಿಶೀಲರ ಆರ್ಥಿಕ ಅಸಮಾನತೆ, ನವೋದಯದವರ ವ್ಯಕ್ತಿನಿಷ್ಠತೆ, ಪ್ರತಿಮಾವಿಧಾನ, ಬಂಡಾಯದವರ ಬಂಡಾಯ ಮನೋಧರ್ಮ, ಸಾಮಾಜಿಕ ಕಾಳಜಿ, ಪ್ರಗತಿಪರ ಮಹಿಳಾ ಸಂಘಟನೆಗಳ ಹೋರಾಟ, ಸ್ತ್ರೀವಾದಿ ನಿಲುವುಗಳು, ವಚನಕಾರ್ತಿಯರ ವೈಚಾರಿಕತೆಗಳಿಂದಾಗಿ ಇಂದಿನ ಮಹಿಳಾ ಸಾಹಿತ್ಯ ಜೀವಪರ ಕಾಳಜಿಯುಳ್ಳದ್ದಾಗಿ ಬೆಳೆಯುತ್ತಿದೆ. ಸಮಾಜಮುಖಿಯಾಗುತ್ತಿದೆ.

"ಮಹಿಳೆಯ ಕಾವ್ಯವನ್ನು ಆಸ್ವಾದಿಸಬೇಕಾದರೆ ವಿಶೇಷ ಸಿದ್ಧತೆಗಳು ಬೇಕು. ಅವಳು ನಡೆದು ಬಂದ ದಾರಿ ತುಳಿಯುತ್ತಿರುವ ದಿಕ್ಕು, ಸೇರಬೇಕಾದ ನೆಲೆ ಇವನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು" (ಡಿ.ಮಂಗಳಾ ಪ್ರಿಯದರ್ಶಿನಿ. ಲೇಖಕಿಯರ ಸಾಹಿತ್ಯ, ೭೫ ವರ್ಷಗಳಲ್ಲಿ, ೧೯೮೭, ಪು-೪೮). ಇದುವರೆಗೆ ಬೀದರ ಜಿಲ್ಲಾ ಭಾಗದ ಮಹಿಳಾ ಕಾವ್ಯ ಸಾಹಿತ್ಯಕ್ಕೆ ಹಿನ್ನೆಲೆಯಾಗಿ ಕಾವ್ಯ ಪರಂಪರೆ ನಡೆದುಬಂದ ದಾರಿಯನ್ನು ತುಳಿದ ಹೆಜ್ಜೆಗಳನ್ನು ಸೇರಬೇಕಾದ ನೆಲೆಯನ್ನು ಕುರಿತು ನೋಡಲಾಗಿದೆ. ಈ ಮೂಲಕ ಅಧ್ಯಯನಕ್ಕೊಂದು ತಾತ್ವಿಕ ನೆಲೆಗಟ್ಟನ್ನು ಸಿದ್ಧಪಡಿಸಿಕೊಳ್ಳಲಾಗಿದೆ. ಇತ್ತೀಚಿನ ಮಹಿಳಾ ಕಾವ್ಯ ಸಮಕಾಲೀನ ಸಾಮಾಜಿಕ ಕಾಳಜಿಯೊಂದಿಗೆ ಕಾವ್ಯಾತ್ಮಕ ಕಾಳಜಿಯನ್ನು ಪ್ರಮುಖವಾಗಿ ಹೊಂದಿದೆ. ಹೊಸಗನ್ನಡ ಸಾಹಿತ್ಯದಲ್ಲಿ ೨೧ನೇ ಶತಮಾನದ ಕಾಲಘಟ್ಟದಲ್ಲಿ ಮಹಿಳಾ ಕಾವ್ಯದ ದಿಟ್ಟ ಹೆಜ್ಜೆಗಳನ್ನು ಇಡುತ್ತಿರುವುದು ಎದ್ದು ಕಾಣುತ್ತದೆ.

– ಪ್ರೊ. ನಾಗಮ್ಮ ಎಚ್.ಭಂಗರಗಿ
ಕನ್ನಡ, ಸಹಾಯಕ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೀದರ

ಜನಪದ ವಸ್ತುಸಂಗ್ರಹಾಲಯಗಳು ಒಂದು ಅವಲೋಕನ

ಜನಪದ ವಸ್ತುಸಂಗ್ರಹಾಲಯಗಳು ಒಂದು ಅವಲೋಕನ ಕೈಗೊಳ್ಳುವ ಮೊದಲು ಜನಪದ ಎನ್ನುವುದರ ಬಗೆಗೆ ಅರಿಯುವುದು ಮುಖ್ಯವೆನಿಸುತ್ತದೆ. ಡಾ. ಹಾ. ಮಾ. ನಾಯಕ ಅವರು ವಿಶ್ಲೇಷಿಸುವಂತೆ 'ಜನಪದ'ವೆನ್ನುವುದು 'ಜಾನಪದ'ದ ಒಂದು ಅಂಗ. ಹಾಗಾದರೆ 'ಜಾನಪದ' ಎಂದರೇನೆಂಬುದನ್ನು ತಿಳಿಯುವುದು ಆವಶ್ಯಕವಾಗಿದೆ.

ಜಾನಪದ ಎಂಬುದು ಇಂಗ್ಲೀಷಿನ 'Folklore'ಗೆ ಸಂವಾದಿಯಾಗಿ ಇಂದು ಬಳಕೆಯಾಗುತ್ತಿರುವ ಪದವಾಗಿದೆ. ಇದು ಕಾಲಾಗತಿಯಲ್ಲಿ ಬಗೆ ಬಗೆಯ ಅರ್ಥಛಾಯೆಗಳನ್ನು ಪಡೆದು ಇಂದು ಮನುಷ್ಯ ಸಂಸ್ಕೃತಿಯನ್ನು ಅರಿಯಲು, ರೂಪಿಸಲು ಇರುವ ಅಧ್ಯಯನ ಶಿಸ್ತುಗಳಲ್ಲಿ ಒಂದಾಗಿ ಹೊರಹೊಮ್ಮಿದೆ.

ವಸ್ತುಸಂಗ್ರಹಾಲಯ ಎಂಬುದು 'museum' ಎಂಬ ಇಂಗ್ಲೀಷಿನ ಪದಕ್ಕೆ ಸಂವಾದಿಯಾಗಿ ಬಳಕೆಯಾಗುತ್ತಿದೆ. ಇಂದು ಇದು ಗತಕಾಲದ ಬದುಕನ್ನು ಜೀವಂತವಾಗಿ ಕಾಣಿಸುವ ಮೂಲಕ, ಮಾಹಿತಿ ಕೋಶವಾಗಿ ಪರಿಮಣಿಸುತ್ತಿದೆ.

ಜಾನಪದ ಅಧ್ಯಯನ ಮೊದಮೊದಲಿಗೆ ಪಳಯುಳಿಕೆ ಶಾಸ್ತ್ರದ ಭಾಗವಾಗಿ ಪರಿಗಣಿತವಾಗಿತ್ತು. ಸ್ಥಳೀಯವಾಗಿ ದೊರೆತ ಪ್ರಾಚೀನ ವಸ್ತು ಸಾಮಗ್ರಿಗಳನ್ನು ಜೋಡಿಸಿಡುವ ಕ್ರಮಕ್ಕೆ ಬದ್ಧಗೊಳ್ಳುತ್ತಿತ್ತು. ಕಾಲಕ್ರಮೇಣ ಜಾನಪದ ಅಧ್ಯಯನವು ವಿಕಾಸಗೊಳ್ಳುತ್ತ ಮನಷ್ಯನ ಸೂಪ್ತ ಪ್ರಜ್ಞೆಯಲ್ಲಿ ಅಡಕವಾಗಿರುವ ಸಮಷ್ಟಿ ಅನುಭವಗಳನ್ನು ಬಹುರೂಪಿ ಪ್ರವೃತ್ತಿಯಲ್ಲಿ ಅನಾವರಣಗೊಳಿಸುತ್ತ, ಅದು ಸಮಷ್ಟಿ ಚಹರೆಯನ್ನು ಪ್ರತಿಪಾದಿಸುತ್ತಲಿದೆ.

ಜಾನಪದದ ಬಿಡಿ-ಬಿಡಿಯಾದ ರೂಪಗಳೇ ಜನಪದ ಚಹರೆಗಳು. ಇವುಗಳ ಒಟ್ಟು ರೂಪವೇ ಜಾನಪದ. ಹೀಗಾಗಿ ಜನಪದ ವಸ್ತು ಸಂಗ್ರಹಾಲಯಗಳು ಎನ್ನುವಂತಹದ್ದು 'ಒಂದು ಕಾಲದ, ಒಂದು ಪ್ರದೇಶದ ಮಾನವನ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಬದುಕನ್ನು ರೂಪಿಸಿದ, ಆದರೆ ಆಧುನಿಕ ವೈಜ್ಞಾನಿಕತೆ ಹಾಗು ಕೈಗಾರೀಕಾಕರಣದ ಫಲವಾಗಿ ಬಳಕೆ ತಪ್ಪಿ ಹೋಗಿರುವ ಮತ್ತು ಬಳಕೆಯಲ್ಲಿದ್ದು ಪರಂಪರೆಯ ಮುದ್ರೆಯನ್ನು ಪಡೆದಿರುವ ವಸ್ತುಗಳ ಭಂಡಾರವೇ ಜನಪದ ವಸ್ತುಸಂಗ್ರಹಾಲಯ.' ೧

ಜನಪದ ವಸ್ತು ಸಂಗ್ರಹಾಲಯಗಳು ಪ್ರಾಚೀನ ಬದುಕಿನ ವಸ್ತು ವೈಭವವನ್ನು ಸಾರುವ ಸಾಮಗ್ರಿಗಳೇ ಹೊರತು, ಅಧ್ಯಯನಕ್ಕೆ ಒಳಪಡಬೇಕಾದುದೆಂದು ಪರಿಗಣಿಸಲಿಲ್ಲ. ಜಾನಪದ ಭೌತಿಕ ವಸ್ತುಗಳ ಮೂಲಕ ಸಂಸ್ಕೃತಿಯ ಗತಿಯನ್ನು ನಿರ್ಧರಿಸಬಹುದೆನ್ನುವ ವಿಚಾರ ಅಪರಿಚಿತವೇ ಆಗಿತ್ತು.

ಜಾನಪದ ವಸ್ತು ಸಂಗ್ರಹಾಲಯದ ಕಲ್ಪನೆ ಹುಟ್ಟು ಪಡೆದುದು ಮೊದಲಿಗೆ ಯುರೋಪಿನ ಸ್ವೀಡನ್ ದೇಶದ 'ಸ್ಟಾಕ್ ಹೋಂ'ನಲ್ಲಿ ಆರ್ತರ್ ಹೆಜೆಲಿಸ್ ಎನ್ನುವವನು ಕ್ರಿ.ಶ. ೧೮೭೩ರಲ್ಲಿ ಜನಪದ ವಸ್ತುಸಂಗ್ರಹಾಲಯವನ್ನು ಮೊಟ್ಟ ಮೊದಲಿಗೆ ಸ್ಥಾಪಿಸಿದನು.

ಜನಪದ ವಸ್ತುಸಂಗ್ರಹಾಲಯಗಳು ಏನನ್ನು ಒಳಗೊಳ್ಳಬೇಕು? ಎಂಬುದನ್ನು ಕೇಳಿದಾಗ ಅದಕ್ಕೆ ಈ ಮುಂದಿನಂತೆ ವಿವರಣೆ ನೀಡಬಹುದು.

೧. ಒಂದು ಜನ ಸಮುದಾಯ ತನ್ನ ಬದುಕಿಗಾಗಿ ರೂಪಿಸಿಕೊಂಡ ಭೌತಿಕ ಸಾಮಗ್ರಿಗಳು, ವಸತಿ ನೆಲೆಗಳು, ಕೃಷಿಕೇಂದ್ರಗಳು, ಕೈಕಸುಬಿನ ಸರಕುಗಳು ಇತ್ಯಾದಿ.

೨. ಮೇಲಿನ ವಸ್ತು-ಪರಿಕಗಳ ಹುಟ್ಟಿಗೆ ಕಾರಣವಾದ ಇಡಿಯ ಜನಪದ ಜೀವನ ಹಾಗು ಸಂಪ್ರದಾಯಗಳ ಮಾಹಿತಿ.

೩. ಮೇಲಿನ ಕರಕುಶಲ ವಸ್ತುಗಳ ಜೊತೆಗೆ ಅದನ್ನು ನಿರ್ಮಿಸಿದ ಸಮುದಾಯದ ಬದುಕಿನ ವಿವರಗಳು ಮತ್ತು ಅವರ ನಿರ್ಮಾಣ ಕೌಶಲವನ್ನು ಒಂದು ಪ್ರಕ್ರಿಯೆಯಾಗಿ ದಾಖಲಿಸುವುದು ಒಳಗೊಳ್ಳುತ್ತದೆ.

ಜನಪದ ವಸ್ತುಸಂಗ್ರಹಾಲಯ ಒಳಗೊಂಡ ಪರಿಕರಗಳನ್ನು ಬಗೆಯುವುದಾದರೆ ಅದಕ್ಕಿರುವ ಗುರಿ ಈ ಕೆಳಗಿನಂತೆ ರೇಖಿಸಬಹುದು.

೧. ಜನಪದ ವಸ್ತುಸಂಗ್ರಹಾಲಯವು ಸಮುದಾಯದ ಬದುಕಿನ ಒಂದು ಸ್ಪಷ್ಟ ಚಿತ್ರ ನೀಡುವಂತಿರಬೇಕು.

೨. ಆಯಾ ಪ್ರದೇಶದ ಸಾಂಸ್ಕೃತಿಕ ಅನನ್ಯತೆಯನ್ನು ಅದು ಪ್ರತಿನಿಧಿಸುವಂತಿರಬೇಕು.

೩. ಆಯಾ ಪ್ರದೇಶದ ಇಲ್ಲವೇ ಸಮುದಾಯದ ಅನನ್ಯತೆಯನ್ನು ಹಾಗು ಅದರ ಐತಿಹಾಸಿಕ ಪ್ರಗತಿಯನ್ನು ಪರಿಕಲ್ಪಿಸಿಕೊಳ್ಳಲು ಅಲ್ಲಿನ ವಸ್ತುಗಳು ಸಹಕಾರಿ ಯಾಗಿರಬೇಕು.

ಆರ್ತರ್ ಹೆಜೆಲಿಸ್ ಅವರು ಹುಟ್ಟು ಹಾಕಿದ ಜನಪದ ವಸ್ತುಸಂಗ್ರಹಾಲಯ ಒಳಾಂಗಣಕ್ಕೆ ಸೀಮಿತವಾಗಿತ್ತು. ಮುಂದೆ ಅದು ಹೊರಾಂಗಣಕ್ಕೆ ವಿಸ್ತರಿಸಿಕೊಂಡು ಜಗತ್ತಿನಾದ್ಯಂತ ಈ ಇಬ್ಬಗೆಯ ಪ್ರದರ್ಶನ ವಿನ್ಯಾಸ ಪಡೆಯಿತು. ೧. ಒಳಾಂಗಣ ೨. ಹೊರಾಂಗಣ.

೧. ಒಳಾಂಗಣದಲ್ಲಿ ಮಾನವ ಸಮುದಾಯದ ನಾಗರೀಕತೆಯನ್ನು ರೂಪಿಸಿದ ಭೌತಿಕ ಪರಿಕರಗಳು ಹಾಗು ಅವುಗಳ ನಿರ್ಮಾಣ ಕೌಶಲವನ್ನು ಒಂದು ಪ್ರಕ್ರಿಯೆಯಾಗಿ ದಾಖಲಿಸುವ ಕ್ರಮ ಇದ್ದಿರುತ್ತದೆ.

೨. ಹೊರಾಂಗಣದಲ್ಲಿ ವಾಸದ ಮನೆಗಳು ಕರಕುಶಲ ತಯಾರಿ ಕೇಂದ್ರಗಳು ಸಾರ್ವಜನಿಕ ಕಟ್ಟಡಗಳ ವಿನ್ಯಾಸಗಳನ್ನು ಜೋಡಿಸಲಾಗುತ್ತದೆ. ಈ ಬಗೆಯ ನಿರ್ಮಾಣ ಸಜೀವವಾಗಿರುವಂತೆ ನೋಡಿಕೊಳ್ಳಲಾಗುತ್ತದೆ.

ಭಾರತದಲ್ಲಿ ೨೦ನೇ ಶತಮಾನದ ಆರಂಭದಲ್ಲಿ ಜನಪದ ವಸ್ತುಸಂಗ್ರಹಾಲಯ ಚಳುವಳಿಯು ಆರಂಭಗೊಂಡಿತು. ಅದರನ್ವಯ ಕಾಣಿಸಿಕೊಂಡ ಜನಪದ ವಸ್ತು ಸಂಗ್ರಹಾಲಯಗಳೆಂದರೆ:-

೧. ಪೂನಾದ ಕೇಳ್ಕರ್ ಮ್ಯೂಸಿಯಂ.

೨. ಹೈದ್ರಾಬಾದಿನ ಸಾಲಾರ್ ಜಂಗ ಮ್ಯೂಸಿಯಂ.

೩. ಮದರಾಸಿನ 'ಸರಕಾರಿ ಮ್ಯೂಸಿಯಂ'ಗಳಲ್ಲಿ ಜನಪದ ಸಾಮಗ್ರಿಗಳ ಸಂಗ್ರಹಕ್ಕೆ ಒಂದು ಭಾಗ ಮೀಸಲಿಟ್ಟಿದ್ದಾರೆ.

೪. ಅಹಮ್ಮದಾಬಾದಿನಲ್ಲಿ ಡಾ. ಜ್ಯೋತೀಂದ್ರ ಜೈನ ಸ್ಥಾಪಿಸಿರುವ 'ಶ್ರೇಯಸ್ ಜನಪದ ಕಲಾ ಮ್ಯೂಸಿಯಂ'.

೫. ಉದಯಪುರದ ದೇವಿಲಾಲ ಸಮರ್ ಅವರ ಜನಪದ ವಸ್ತು ಸಂಗ್ರಹಾಲಯ.

೬ ಮೈಸೂರಿನಲ್ಲಿ ಡಾ. ದೇ. ಜವರೇಗೌಡ, ಡಾ. ಹಾ. ಮಾ. ನಾಯಕ, ಡಾ. ಜೀ. ಶಂ. ಪರಮಶಿವಯ್ಯ, ಮುಂತಾದವರ ಶ್ರಮದಿಂದ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಜನಪದ ವಸ್ತು ಸಂಗ್ರಹಾಲಯವನ್ನು ೧೯೬೮ರಲ್ಲಿ ಸ್ಥಾಪನೆಗೊಂಡಿದೆ. ಇದು ಭಾರತೀಯ ಜನಪದ ವಸ್ತು ಸಂಗ್ರಹಾಲಯಗಳಲ್ಲೇ ವಿಶಿಷ್ಟವಾದುದು. ಇಲ್ಲಿ ಸುಮಾರು ೬೫೦೦ ಜನಪದ ಪ್ರದರ್ಶನಗಳಿವೆ .

೭ ರಾಮನಗರದ (ಬೆಂಗಳೂರು) ಬಳಿ ೧೯೭೯ರಲ್ಲಿ ಹುಟ್ಟು ಹಾಕಿದ ಕರ್ನಾಟಕ ಜಾನಪದ ಟ್ರಸ್ಟ ವತಿಯಿಂದ ರೂಪುಗೊಂಡ ಜನಪದ ವಸ್ತು ಸಂಗ್ರಹಾಲಯ. ಇದರಲ್ಲಿ ಪ್ರದರ್ಶಕ ಕಲೆಗಳು, ಜನಪದ ಸಾಹಿತ್ಯದ ಧ್ವನಿಸುರುಳಿಗಳು, ಜನಪದ ನೃತ್ಯ ಕಲೆಗಳ ದೃಶ್ಯ ಮತ್ತು ಶ್ರವ್ಯದ ಧ್ವನಿಸುರುಳಿಗಳು ಗಮನಸೆಳೆಯುವಂತಹವು.

೮. ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಆಶ್ರಯದಲ್ಲಿ ಜನಪದ ವಸ್ತು ಸಂಗ್ರಹಾಲಯ ಸ್ಥಾಪನೆಗೊಂಡಿದೆ. ಇದು ಪ್ರಾದೇಶಿಕ ಸಂಸ್ಕೃತಿಗೆ ಒತ್ತು ನೀಡುವ ನಿಟ್ಟಿನಲ್ಲಿ ಮಹತ್ವ ಪಡೆದಿದೆ.

೯. ಧರ್ಮಸ್ಥಳದ 'ಮಂಜುಷಾ' ವಸ್ತು ಸಂಗ್ರಹಾಲಯವು ಜನಪದ ಸಾಮಗ್ರಿಗಳಿಗೆ ಬಹುಪಾಲು ಮೀಸಲಾಗಿದೆ.

ಜನಪದ ವಸ್ತು ಸಂಗ್ರಹಾಲಯಗಳು ಮನುಕುಲದ ಬದುಕಿಗೆ ಬೇಕಾಗುವ ಬೆಳಕಾಗಿ ಪರಿಣಮಿಸಬೇಕು. ಕೇವಲ ಹಳೆಯದೆಲ್ಲ ಬಂಗಾರ ಎನ್ನುವ ತಿಳುವಳಿಕೆ ದಾರಿ ತಪ್ಪಿಸುತ್ತದೆ. ಜಾನಪದ ರಕ್ಷಿಸುವ ವಕ್ತಾರಿಕೆ ನಮ್ಮನ್ನು ಬಹಳ ದೂರ ಕೊಂಡೊಯ್ಯಲಾರದು, ಕಾರಣ ಬದಲಾವಣೆ ಎನ್ನುವ ನಿಯಮದ ಮುಂದೆ ಅಸ್ಥಿರ ಬದುಕಿನ ಗೋಡೆ ಬಹುಕಾಲ ನಿಲ್ಲುವುದಿಲ್ಲ. ಹೀಗಾಗಿ ನಮ್ಮ ಚಿಂತನೆಯು ಸವೆದ ದಾರಿಯಲ್ಲೇ ಪಯಣಿಸಿದರೆ ಸಾಲದು. ಆದ್ದರಿಂದ ಪ್ರಸ್ತುತ ಜನಪದ ವಸ್ತು ಸಂಗ್ರಹಾಲಯುಗಳು 'ಬರಿಯ ಪ್ರಾಚೀನ ವಸ್ತುಗಳ ಉಗ್ರಾಣವಾಗದೆ, ಬದಲಾಗುತ್ತಿರುವ ವರ್ತಮಾನದ ಬದುಕಿನ ಸಾರ ವಿವರಗಳನ್ನೆಲ್ಲಾ ದಾಖಲುಗೊಂಡು ಭವಿಷ್ಯದ ಬೆಳಕಾಗಬೇಕು.

ಅಡಿಟಿಪ್ಪಣಿ:

೧. ಜನಪದ ವಸ್ತು ಸಂಗ್ರಹಾಲಯ – ಪ್ರೊ. ಎ. ವಿ. ನಾವಡ ಗ್ರಂಥ: ಜಾನಪದ ಕೈಪಿಡಿ.

೨. ------ ಅದೇ------ ಗ್ರಂಥಋಣ:

೧. ಜಾನಪದ ಸ್ವರೂಪ – ಡಾ. ಹಾ. ಮಾ. ನಾಯಕ

೨. ಜಾನಪದ ಅಧ್ಯಯನ – ಡಾ. ದೇ. ಜವರೇಗೌಡ.

೩. ಜಾನಪದ – ಜೀ. ಶಂ. ಪರಮಶಿವಯ್ಯ.

೪. ಕರಾವಳಿ ಜಾನಪದ – ಡಾ.ಪುರುಷೋತ್ತಮ ಬಿಳಿಮಲೆ.

೫. ಜಾನಪದ ಸಾಹಿತ್ಯ ಸಿದ್ಧಾಂತ – ಡಾ. ವೀರಣ್ಣ ದಂಡೆ

೬. ಜಾನಪದ ಕೈಪಿಡಿ – ಸಂ. ಡಾ. ಎಚ್. ಜೆ. ಲಕ್ಕಪ್ಪಗೌಡ.

೭. ಕರ್ನಾಟಕ ಜಾನಪದ ಸಂಪುಟ ೯ ಸಂಚಿಕೆ ೨ ಜನವರಿ–ಜೂನ್.

– ಡಾ॥ ಪಾಟೀಲ ಶ್ರೀಕಾಂತ
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೀದರ.

ಮೀ ಟೂ.. ಅಭಿಯಾನ ಮತ್ತು ಸಾಮಾಜಿಕ ಆಯಾಮ

ನಿಸರ್ಗದ ಉತ್ಪನ್ನವಾಗಿ ಗಂಡು ಮತ್ತು ಹೆಣ್ಣು ಜೀವಿಗಳ ಲಿಂಗಪ್ರಭೇದ ಮಾನವ ಜೀವಿಯಲ್ಲೂ ಇದೆ. ಮಾನವನ ವಿಕಾಸದ ಮೊದಲ ಹಂತಗಳಲ್ಲಿ ಗಂಡು ಹೆಣ್ಣಿನ ಕಾರ್ಯವಿಭಜನೆ ಸ್ಪಷ್ಟವಾಗಿ ಇರಲಿಲ್ಲ. ಮೂಲ ಮಾನವನ ಸಮಾಜದಲ್ಲಿ ಕಾರ್ಯ ಹಂಚಿಕೆಯ ಸ್ಪಷ್ಟವಾದ ಮಾಹಿತಿಗಾಗಿ ಅನೇಕ ಸಂಶೋಧನೆಗಳು ನಡೆದಿವೆ. ಲಿಂಗಾಧಾರಿತ ಮೂಲವಾದಗಳನ್ನು ಸ್ತ್ರೀವಾದಿ ಸಂಶೋಧಕರು ಆಳವಾದ ಅಧ್ಯಯನದಿಂದ ನಿರಾಕರಿಸುತ್ತಿದ್ದಾರೆ. ಸ್ತ್ರೀ ದೃಷ್ಟಿಕೋನದ ಹೊಸವಾದಗಳು ಸಾಕ್ಷಿ ಪುರಾವೆಗಳೊಂದಿಗೆ ಪೂರ್ವಾಗ್ರಹಗಳನ್ನು ಪುಡಿಗಯ್ಯುತ್ತಿವೆ.

"ಸ್ಯಾಲ್ ಲಿಂಟನ್ ೧೯೭೦ ರಲ್ಲಿ ಪ್ರಕಟಿಸಿದ ಮಾನವ ಶಾಸ್ತ್ರದಲ್ಲಿ ಪುರುಷರ ಪೂರ್ವಗ್ರಹ" ಎಂಬ ಪ್ರಬಂಧ ಈ ದಿಕ್ಕಿನ ಚಿಂತನೆಗಳಿಗೆ ಪ್ರಶ್ನೆಯಾಗಿದೆ. ಆಕೆ ಹೆಣ್ಣಿನ ಮೇಲಿನ ದಬ್ಬಾಳಿಕೆ ಆಧುನಿಕ ಕಾಲದ ದುರವ್ಯವಸ್ಥೆಯೇ ಹೊರತು, ಪ್ರಕೃತಿ ಸಹಜವಾಗಿ ನಮ್ಮ ಪ್ರಾಣಿ ಪೂರ್ವಜರ ಕಾಲದಿಂದ ಮೊಳೆತು ಬಂದದ್ದಲ್ಲ ಎಂದಿದ್ದಾರೆ. 'ನೇಮಿಚಂದ್ರರ' 'ಸ್ತ್ರೀವಾದ ಮತ್ತು ಮಾನವ ಶಾಸ್ತ' ಲೇಖನದಲ್ಲಿ ಈ ಮೇಲಿನ ಹೇಳಿಕೆಯ ವಿಚಾರಗಳ ದೀರ್ಘವಾದ ಚಿಂತನೆಗಳಿವೆ. ಜೀವ ವಿಕಾಸದ ಹಾದಿಯಿಂದಲೂ ಸ್ತ್ರಿ ಚೇತನ ಜಾಗೃತವಾಗಿಯೇ ಸಾಗಿಬಂದ ಹತ್ತು ಹಲವು ಸತ್ಯಗಳನ್ನು ಸಂಶೋಧನೆಗಳಿಂದ ಸ್ತ್ರೀ ವಿಜ್ಞಾನಿಗಳು ಪ್ರಕಟಪಡಿಸುತ್ತಿದ್ದಾರೆ. ಹೆಣ್ಣು ಅಬಲೆ, ದುರ್ಬಲೆ, ದಡ್ಡಿ ಎಂದು ಕೊಂಡಿದ್ದವರ ಸೀಮಿತ ತಿಳುವಳಿಕೆಯನ್ನು ಪ್ರಶ್ನಿಸುತ್ತಿದ್ದಾರೆ.

ಶ್ರಮ ವಿಭಜನೆಯು ಲಿಂಗಸಂಬಂಧಿಯಾಗಿ ಮಾನವರಲ್ಲಿ ಮುಂದುವರೆದಿರುವ ಕಾರಣವು ಜೀವಶಾಸ್ತ್ರದ್ದಲ್ಲ, ಸಮಾಜ ಶಾಸ್ತ್ರದ್ದು ಎಂಬುದು ಇಂದು ಸಾಬೀತಾಗಿದೆ. ಇದನ್ನು ಡಾರ್ವಿನ್ ಮತ್ತು ಮೆಂಡಲ್ ನ ಸಂಶೋಧನೆಯೊಂದಿಗೆ ಛಾಯಾದಾತಾರ್ ಹೀಗೆ ವಿವರಿಸುತ್ತಾರೆ.

"ಸಸ್ತನಿ ಪ್ರಾಣಿಗಳ ಗಂಡುಮಗುವಿಗಾಗಲೀ, ಹೆಣ್ಣುಮಗುವಿಗಾಗಲೀ ಎಲ್ಲಾ ಸ್ವಭಾವ ವೈಶಿಷ್ಟ್ಯಗಳು ಸಮಸಮವಾಗಿರುತ್ತದೆ. ಆದ್ದರಿಂದಲೇ ಪುರುಷರ ಬುದ್ಧಿವಂತಿಕೆ ಹೆಚ್ಚಾಗುತ್ತಾ ಪರಾಕಾಷ್ಠೆಗೆ ತಲುಪಿಲ್ಲ. ಅಥವಾ ಸ್ತ್ರೀಯ ಬುದ್ಧಿಗೆ ತುಕ್ಕುಹಿಡಿದು ಅದು ನಷ್ಟವಾಗಿಲ್ಲ. ಮೆಂಡಲ್ ಎಂಬಾತನ ಮತದಂತೆ ಬುದ್ಧಿವಂತಿಕೆಯು ಹೆಚ್ಚಾಗಿ ಅನುವಂಶಿಕವಾಗಿದ್ದರೂ, ಪರಿಸರವು ಅದರ ಒಂದು ಘಟಕವಾಗುತ್ತದೆ." ಸ್ತ್ರೀ-ಪುರುಷರ ಕೆಲಸ ಕಾರ್ಯಗಳಿಗೆ ಗೆರೆಹಾಕಲಾಗಿದೆ. ಸಮಾಜಿಕ ಪರಿಸರದಲ್ಲಿ

ಸಂಪ್ರದಾಯವು ಮುಂದುವರೆಯಲು ಸಾಮಾಜಿಕ ಒತ್ತಡವೇ ಪ್ರಮುಖ ಕಾರಣವೆಂದು ಢಾಳಾಗಿ ಹೊಳೆಯುತ್ತಿದೆ. ದೈಹಿಕ ಭಿನ್ನತೆ ಇಬ್ಬರ ಚೇತನವನ್ನೂ ಮುಕ್ಕಾಗಿಸಬೇಕಿಲ್ಲ. ಹಾಗೂ ತರತಮ ಭಾವನೆಗೂ ಕಾರಣವಾಗಲಾರದು.

ಮನೆಯಲ್ಲಿ ಕೈಗೊಳ್ಳುವ ಸಂಸ್ಕಾರಗಳು, ರೂಢಿ ಸಂಪ್ರದಾಯಗಳು, ಆಚಾರವಿಚಾರಗಳು ಶಿಕ್ಷಣದ ರೂಪದಲ್ಲಿದೆ. ಬಾಲ್ಯದಿಂದಲೇ ಗಂಡು ಹೆಣ್ಣಿನ ನಡುವಿನ ಗೋಡೆಯನ್ನು ಕಟ್ಟುತ್ತಾ ಬರಲಾಗುತ್ತದೆ. ಗಂಡು ಮಗುವಿಗೆ ಬೇರೆಯದೇ ಕೆಲಸಗಳು, ಹೆಣ್ಣು ಮಗುವಿಗೆ ಬೇರೆಯದೇ 'ಸತ್ಕಾರ' ಮಕ್ಕಳಿಗೆ ನೀಡುವ ಅವಕಾಶಗಳ ಉಡುಪಿನಿಂದಲೂ, ಆಹಾರದಿಂದಲೂ, ಕೆಲಸಕಾರ್ಯದಿಂದಲೂ ಗೆರೆಕುಯ್ದಂತೆ ಇದೆ. ಇದು ಗಂಡುತನ, ಹೆಣ್ಣುತನವೆಂತಲೂ ಬೇರೆಬೇರೆಯಾಗಿದೆ. ರೂಢಿಗತ ಮೌಲ್ಯಗಳಲ್ಲಿ ಈರ್ವರ ಚೇತನಗಳೂ ಮುಸುಕಿನಲ್ಲಿ ತೂರಿಸಲ್ಪಟ್ಟಿದೆ. ಅಗಾಧವಾದ ಪ್ರೀತಿ, ಆತ್ಮವಿಶ್ವಾಸ ಮತ್ತು ಹೆಮ್ಮೆ ಗಂಡಿಗೆ ದೊರೆಯುತ್ತಿದೆ. ಆದರೆ ತೀವ್ರವಾದ ಕೀಳರಿಮೆಯಿಂದ ಹೆಣ್ಣು ಅಸಹಾಯಕತೆಗೆ ದೂಡಲ್ಪಟ್ಟಿದ್ದಾಳೆ. ಮೆದುಳಿನ ವಿಕಾಸದ ಮಹತ್ವದ ಕಾಲವೆಂದರೆ ಮನುಷ್ಯನ ಬಾಲ್ಯ. ಬಾಲ್ಯದಲ್ಲಿ ಯಾವುದನ್ನು ತಿಳಿಸಿ ಬಿಂಬಿಸಲಾಗುತ್ತಿದೆಯೋ ಅದನ್ನು ಮರೆಯುವುದಿಲ್ಲ. ಆದ್ದರಿಂದ ಬಾಲ್ಯದಲ್ಲಿ ಆದ ಲಿಂಗ ಸಂಬಂಧದ ಸಂಸ್ಕಾರಗಳು ಮಹತ್ವಪೂರ್ಣವಾಗಿರುತ್ತದೆ. ಆಗ ರೂಪಿಸಿದ ಪ್ರವೃತ್ತಿಗಳು ಖಾಯಂ ಆಗಿ ಉಳಿಯುತ್ತದೆ ಎಂಬುದಾಗಿ ಛಾಯಾದಾತಾರ್ ಬಾಲ್ಯಕಾಲದ ತರಬೇತಿಯ ಬಗ್ಗೆ ಗಮನಸೆಳೆದಿದ್ದಾರೆ.

ಸಮಾಜದಲ್ಲಿ ಗಂಡಿಗೆ ಸಿಗುವ ವಿಶೇಷ ಸವಲತ್ತುಗಳಿಂದಾಗಿಯೇ ಆಕ್ರಮಣ ಸ್ವಭಾವ ಹೆಚ್ಚುತ್ತಿದೆಯೇ ಹೊರತು ವಿಶೇಷವಾದ ದೈಹಿಕ ಸಾಮರ್ಥ್ಯವನ್ನು ಹೊಂದಿರುವುದರಿಂದ ಅಲ್ಲ. "ಸ್ತ್ರೀ ಶರೀರವು ನೈಸರ್ಗಿಕ ಭೋಗಕ್ಕಾಗಿ ಅಲ್ಲ" ಎಂಬುದು ಜನರಿಗೆ ಇನ್ನೂ ಅರ್ಥವಾಗಿಲ್ಲ" ವೆಂದು ಛಾಯಾದಾತಾರ್ ಸ್ಪಷ್ಟವಾಗಿ ದೃಢೀಕರಿಸುತ್ತಾರೆ. ಅದರ ಈ ಕೆಳಗಿನ ಮಾತುಗಳು ಇನ್ನಷ್ಟು ವಿವರಣೆ ನೀಡುತ್ತದೆ.

"ಮಾನವನ ಲೈಂಗಿಕ ಇಚ್ಛೆಯು ನಿಯಮಿತ, ಪೂರ್ಣವಾಗಿರುವುದಿಲ್ಲ. ಸ್ವಲ್ಪದರಲ್ಲಿ ಹೇಳುವುದೆಂದರೆ ಲೈಂಗಿಕ ಭಾವನೆಯು ಮಾನಸಿಕ ಪ್ರಕ್ರಿಯೆಯಾಗಿದೆ. ಹಸಿವು ಮತ್ತು ಲೈಂಗಿಕ ಸುಖ ಇವೆರಡೂ ಮಾನವೀ ಜೀವನದ ಪ್ರೇರಕ ಶಕ್ತಿಗಳಾಗಿವೆ. ಇವೆರಡರ ಮೇಲೆ ಮಾನವನ ಮೆದುಳಿನ ನಿಯಂತ್ರಣವಿದೆ. ಹೀಗಿರುವುದರಿಂದ ಮಾನವೀ ವ್ಯವಹಾರಗಳಿಗೆ ಪ್ರಾಥಮಿಕ ದಿಕ್ಕು ದೊರೆಯುತ್ತದೆ. ಆದರೆ ಈ ಶಕ್ತಿಗಳು ಅಂಥ ಶಕ್ತಿಗಳಲ್ಲ ಅವನ್ನು ನಿಯಂತ್ರಿಸಬಹುದು. ಎಂದರೆ ಸಾಮಾಜಿಕ, ಧಾರ್ಮಿಕ, ರಾಜಕೀಯ ಅವಶ್ಯಕತೆಗೆ ಅನುಗುಣವಾಗಿ ರಚಿಸಲ್ಪಡುವ ಕಟ್ಟಳೆಗಳ ಚೌಕಟ್ಟಿನಲ್ಲಿ ಈ ಶಕ್ತಿಗಳನ್ನು ನಿಯಂತ್ರಿಸಲಾಗುತ್ತಿದೆ."

ಮಾನವ ಶಾಸ್ತ್ರಜ್ಞರು ಮಾನವನ ವೈಶಿಷ್ಟ್ಯಗಳನ್ನು ಅಭ್ಯಸಿಸುವಾಗ ಲೈಂಗಿಕ ಇಚ್ಛೆ ಹಾಗೂ ಶಕ್ತಿ, ಆಕ್ರಮಣ ಪ್ರವೃತ್ತಿ, ಬುದ್ಧಿವಂತಿಕೆ, ಅವಲಂಬನ, ಮಹತ್ವಾಕಾಂಕ್ಷೆ ಮತ್ತು ವಾತ್ಸಲ್ಯಗಳ ಬಗ್ಗೆ ತಮ್ಮದೇ ವಾದಗಳನ್ನು ಮುಂದಿಟ್ಟಿದ್ದಾರೆ. ಮಾನವನ

ಮೆದುಳು ಎಲ್ಲಾ ಜೀವಿಗಿಂತಲೂ ಹೆಚ್ಚು ಪ್ರಗತಿಪರವಾಗಿದೆ. ಬಾಹ್ಯದ ಪರಿಸರದ ಪ್ರಭಾವ ಸಾಕಷ್ಟು ನಡತೆಯ ಮೇಲೆ ಪ್ರಬಾವ ಬೀರಿರುತ್ತದೆ. ಲಿಂಗ ತಾರತಮ್ಯದ ಬೀಜವನ್ನು ಬಾಲ್ಯದಿಂದಲೇ ಬಿತ್ತಲಾಗಿದೆ ಎಂಬುದನ್ನು ಅಧ್ಯಯನಗಳು ದೃಢಗೊಳಿಸುತ್ತದೆ. "ನಮ್ಮ ಸಮಾಜ ವ್ಯವಸ್ಥೆಯಲ್ಲಿ ಗಂಡುಮಕ್ಕಳು ಅಕ್ರಮಣಕಾರಿಯಾಗಿರಬೇಕು, ಹೆಣ್ಣುಮಕ್ಕಳು ತಗ್ಗಿಬಗ್ಗಿ ನಡೆಯಬೇಕು ಎನ್ನುವ ಮೌಲ್ಯಗಳನ್ನು ತುಂಬಿ ಬೆಳೆಸುವುದರಿಂದಲೇ ಇಂತಹ ಕ್ರೌರ್ಯಗಳು ನಡೆಯುತ್ತವೆ." ಎನ್ನುತ್ತಾರೆ ಮಾನಸಿಕ ತಜ್ಞರಾದ ಡಾ: ಸಿ.ಆರ್.ಚಂದ್ರಶೇಖರ್.

ಹೆಣ್ಣಿನ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಎಸಗುವ ಹಿಂದಿನ ಮನಃಸ್ಥಿತಿಯ ಸಾಮಾಜಿಕ ಆಯಾಮವು ಪಿತೃ ಪ್ರಧಾನ ಸಂಸ್ಕೃತಿಯ ಪಾಳೆಗಾರಿಕೆ ಮನೋಭಾವದ ಕೊಡುಗೆಯನ್ನಾಗಿ ನಾವು ಗುರುತಿಸಬಹುದು. ಸೋಮಾರಿತನ, ಲಂಪಟತನಗಳು ಅನಾಯಾಸವಾಗಿ ದಕ್ಕಿದ ಆಸ್ತಿ, ಅಂತಸ್ತು, ಹಣ, ಅಧಿಕಾರದ ಮೋಜಿನ ಫಲಿತಾಂಶವಾಗಿರುತ್ತದೆ. ರಾಜಕೀಯ, ಧಾರ್ಮಿಕ ಶಕ್ತಿಪೀಠಗಳ ಕೇಂದ್ರ ಮೌಢ್ಯವೇ ಆಗಿದ್ದಲ್ಲಿ ಸಮಾಜದ ಅರಾಜಕತೆಗೆ ಸಂಮೃದ್ಧ ಅವಕಾಶಗಳು ತೆರೆದಂತೆ.

ಮಹಿಳೆ ದುರ್ಬಲಳು ಅವಳ ರಕ್ಷಣೆ ಗಂಡಿನಿಂದ ಮಾತ್ರ ಸಾಧ್ಯವೆಂದು ಅವಳಿಗೆ ಶಿಕ್ಷಣದ ಅವಕಾಶದಿಂದ ವಂಚಿಸಿ ವೈವಾಹಿಕ ಬಂಧನಕ್ಕೆ ಸಿಲುಕಿಸಲಾಗಿದೆ. ಮಕ್ಕಳನ್ನು ಹೆರುವ ಯಂತ್ರ ಮಾತ್ರವೇ ಅವಳು. ಕಾಮದ ಭೋಗಕ್ಕಾಗಿಯೇ ಸೃಷ್ಟಿಸಲ್ಪಟ್ಟವಳುಎಂಬ ದಾಸ್ಯದಲ್ಲಿ ಬೀಳಿಸಲ್ಪಟ್ಟಿದ್ದಾಳೆ. ನಿರಂತರ ಶೋಷಣೆಯಿಂದ ಆಕೆ ತನ್ನ ಪ್ರಜ್ಞೆಗೆ ತಾನೇ ಮರಳಲು ಆಗದ ಅಸಹಾಯಕತೆಗೆ ದೂಡಲ್ಪಟ್ಟಿದ್ದಾಳೆ. ಒಮ್ಮೆ ಅವಳಿಗೆ ತನ್ನ ಆತ್ಮಘನತೆಯ ಶಕ್ತಿ ಮೂಡಿದ್ದೇ ಆದರೆ ತನ್ನನ್ನು ತಾನು ನಿಭಾಹಿಸಿಕೊಳ್ಳುವ ಸಾಮರ್ಥ್ಯ ಪಡೆದುಕೊಳ್ಳುವಳು.

ಮೀ ಟೂ.. ಅಭಿಯಾನದಲ್ಲಿ ಧ್ವನಿ ಎತ್ತಿದ ಮಹಿಳೆಯರು ವಿದ್ಯೆ, ಸಾಮಾಜಿಕ ಸ್ಥಾನಮಾನ ಆರ್ಥಿಕ ಸ್ವಾತಂತ್ರ್ಯವನ್ನು ಧಕ್ಕಿಸಿಕೊಂಡವರೆಂಬುದನ್ನೂ ಗಮನಿಸಬಹುದು. ತಮ್ಮ ತಮ್ಮ ರಂಗದಲ್ಲಿ ಗಟ್ಟಿಯಾಗಿ ನೆಲೆಯೂರಿ ಅನ್ನದ ಮಾರ್ಗ ಕಂಡುಕೊಂಡವರು. ಇವರ ಹೋರಾಟದಲ್ಲಿ ಎದುರಾಳಿಗಳು ಸಂಭಾವಿತರೆಂದೂ ಪ್ರಖ್ಯಾತರೂ, ಪ್ರಸಿದ್ಧರೂ ಆದ ವ್ಯಕ್ತಿಗಳಾಗಿದ್ದರೂ ಧ್ವನಿ ಎತ್ತಲು ಸಾಧ್ಯವಾದದ್ದಾದರೂ ಹೇಗೆ? ಇದರಿಂದ ಈ ಹೆಣ್ಣು ಮಕ್ಕಳಿಗೆ ಆಗುವ ಪ್ರಯೋಜನವೇನು? ಸಾಮಾಜಿಕ, ಆರ್ಥಿಕ ಲಾಭ ಆಗುವುದಿದೆಯೇ? ಎಂದು ಚಿಂತಿಸಿದಾಗ ಇಲ್ಲ ಎನ್ನಲೇಬೇಕಾಗಿದೆ. ಏಕೆಂದರೆ ಇದು ಪುರುಷಪ್ರಧಾನ ಸಮಾಜ.!

ದೂರು ನೀಡಿದ, ಅನ್ಯಾಯದ ವಿರುದ್ಧ ಬಂಡಾಯ ಎದ್ದ ಮಹಿಳೆಯ ವಿರೋಧವಾಗಿ ಅಧಿಕಾರ ಶಕ್ತಿ, ಧಾರ್ಮಿಕ ಶಕ್ತಿ, ಆರ್ಥಿಕ ಶಕ್ತಿ ಮುಂಚೂಣಿಗೆ ನಿಲ್ಲುತ್ತವೆ. ದೂರುದಾರಳ ವಿರುದ್ಧ ಈ ಎಲ್ಲಾ ಅಸ್ತ್ರಗಳನ್ನೂ ಎಸೆದು ಶೋಚನೀಯಗೊಳಿಸಲು ಮುನ್ನುಗ್ಗುತ್ತವೆ. ಇದರಿಂದಾಗಿ ಉದ್ಯೋಗ, ವೃತ್ತಿ, ಸಂಪಾದನೆಯ ಎಲ್ಲಾ ಅವಕಾಶಗಳಿಂದ ವಂಚಿತಳನ್ನಾಗಿ ಮಾಡಲು ಸರ್ವ ಪ್ರಯತ್ನ

ಆರಂಭವಾಗುತ್ತದೆ. ಆಕೆಯ ವಿರುದ್ಧ ಇನ್ನಷ್ಟೂ ಮತ್ತಷ್ಟೂ ಮಹಿಳೆಯರನ್ನೇ ಎತ್ತಿಕಟ್ಟಲು ಪಾಳೆಗಾರಿಕೆ ಮನೋಭಾವ ಸಂಚನ್ನು ಹೂಡುತ್ತದೆ. ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗದಲ್ಲಿನ ಪುರುಷಪ್ರಧಾನ್ಯತೆಯೂ ಪುರುಷ ಪರವಾಗಿಯೇ ಮಹಿಳೆಯ ವಿರುದ್ಧವಾಗಿ ಒಗ್ಗಟ್ಟು ಪ್ರದರ್ಶಿಸುತ್ತದೆ. ಏಕೆಂದರೆ ಪುರುಷನ ಅಂತಸ್ಸತ್ವವು ತಿಳಿದಿದ್ದರೂ ಮರೆಮಾಚುವ ದಾಷ್ಟ್ಯವನ್ನು ಮೆರೆಯುತ್ತವೆ. ತನಗೆ ಬೇಕಾದಂತೆ ಸಮಾಜದಲ್ಲಿ ದಾಳಗಳನ್ನು ಉರುಳಿಸಿ ಬೇಕಾದ ಫಲಿತಾಂಶ ಪಡೆಯುವ ಸಾಮರ್ಥ್ಯವನ್ನು ತೋರಿಸುತ್ತಾರೆ. ಏಕೆಂದರೆ ಸಂತ್ರಸ್ತ ಮಹಿಳೆಯ ದನಿ ಅಡಗಬೇಕು, ಉಡಗಬೇಕು, ಸತ್ಯವನ್ನು ಸುಳ್ಳುಮಾಡುವ, ಅದನ್ನೇ ಸಾಧಿಸುವ ತನ್ನ ಸಾಮರ್ಥ್ಯವನ್ನೇ ಮೇಲಿರಿಮೆಯಾಗಿ ಪಳಗಿದ ಗಂಡಿಗೆ ಸಾಧಿಸುವ ಹಂಬಲ ಪ್ರಭಲವಾಗಿ ಬೇರೂರಿರುತ್ತದೆ. ಗೆಲುವಿನ ಬೆನ್ನುಹತ್ತಿರುವುದು ಗಂಡುಜಾತಿಯೇ ಅಲ್ಲವೇ?.

ದೈಹಿಕ ಸಾಮರ್ಥ್ಯದೊಂದಿಗೆ ಆರ್ಥಿಕಶಕ್ತಿ, ಅಧಿಕಾರ ಶಕ್ತಿಯೊಂದಿಗೆ ಕ್ರೂಢೀಕರಣಗೊಂಡಾಗ ಅಂತರಾತ್ಮದ ಮಾತನ್ನು ಸ್ವತಃ ಕೇಳಿಸಿಕೊಳ್ಳಲು ಆತ ಸಿದ್ಧನಿರುವುದಿಲ್ಲ. ಶ್ರೇಣಿಬದ್ಧ ಸಮಾಜರಚನೆಯಲ್ಲಿ ಎಲ್ಲ ವ್ಯವಹಾರಗಳೂ ಕೇಂದ್ರೀಕೃತಗೊಂಡಿರುತ್ತದೆ. ಕೆಲವೇ ಜನರ ಕೈಯಲ್ಲಿ ಸಮಾಜದ ಸರ್ವ ಅಧಿಕಾರಗಳೂ ವಿಜೃಂಭಿಸಿರುತ್ತದೆ. ಮಾಧ್ಯಮಗಳು ರಾಜಕಾರಿಣಿಗಳಿಗೆ, ನಟರಿಗೆ, ಕ್ರಿಕೇಟರಿಗೆ, ಜ್ಯೋತಿಷಿಗಳಿಗೆ ನೀಡುವ ಅತಿಯಾದ ಪ್ರಾಮುಖ್ಯತೆಯ ಮೂಲ ಕಾರಣವೂ ಇದೇ ಆಗಿರುತ್ತದೆ. ಕುಟುಂಬದ ವ್ಯವಸ್ಥೆ, ಧಾರ್ಮಿಕ ವ್ಯವಸ್ಥೆ, ನ್ಯಾಯಿಕ ವ್ಯವಸ್ಥೆ, ಆರ್ಥಿಕ ವ್ಯವಸ್ಥೆಗಳ ಭದ್ರವಾದ ಅಂತರ್ ಸಂಬಂಧಗಳು ಸ್ತ್ರೀ ವರ್ಗದ ಪರವಾಗಿಲ್ಲ. ಅವರ ಕೂಗು ಈ ಎಲ್ಲಾ ಚೌಕಟ್ಟಿನೊಳಗೆ ಬಂಧಿಸಲ್ಪಟ್ಟಿದೆ. ಇದನ್ನೂ ಮೀರಿ ಧ್ವನಿಯೇರಿಸಿದ ಮಹಿಳೆಯರಿಗೆ ನಮ್ಮ ಅಂತರಾಳದ ಮೆಚ್ಚುಗೆ. ಆತ್ಮೀಯ ಒಂದು ಬೆನ್ನುತಟ್ಟುವಿಕೆ ಸಿಗಲೇಬೇಕು. ಸ್ತ್ರೀ ಸಂಘಟನೆಗಳು ಅವಳ ಬೆಂಬಲಕ್ಕೆ ನಿಲ್ಲಲೇಬೇಕು. ಮುಂದಿನ ಸ್ತ್ರೀ ಪೀಳಿಗೆಗೆ ಅನ್ಯಾಯದ ವಿರುದ್ಧ ಮಾತನಾಡಲು ಶಕ್ತಿಯನ್ನು ಈ ಸ್ತ್ರೀಯರು ತುಂಬುತ್ತಿದ್ದಾರೆ. ತನ್ನಲ್ಲಿರುವ ಪ್ರತಿಭೆಯನ್ನು ಪ್ರಕಟಪಡಿಸಲೋ, ಆರ್ಥಿಕ ಸ್ವಾವಲಂಭನೆಗೋ ಅನೇಕ ವೃತ್ತಿಗಳಿಗೆ ಹರಿದು ಬರುತ್ತಿರುವ ಉತ್ಸಾಹಿ ಯುವಕಿಯರಿಗೆ ಅವರಿಡುವ ಹೆಜ್ಜೆಯಲ್ಲಿ ಕಂದಕಗಳನ್ನು ಮುಚ್ಚುವ, ಮುಳ್ಳುಗಂಟಿಗಳನ್ನು ಬದಿಗೆ ಸರಿಸುವ ಪ್ರಯತ್ನವೂ ಹೌದು. ಸೋಗಲಾಡಿ ಪುರುಷರಿಗೆ ಇದು ಎಚ್ಚರಿಕೆಯ ಗಂಟೆಯೂ ಹೌದು. ಸಂಭಾವಿತನ ಮುಖವಾಡ ಧರಿಸಿ ಸಮಯ ನೋಡಿ ಹೊಂಚುಹಾಕಿ ವಿಳಾಸವನ್ನು ಪಡೆಯಲು ಬಂದ ಯುವತಿಯರಿಗೆ ಗಾಳಹಾಕಿ ಸಮಯ ಸಾಧಕತನವನ್ನು ಮೆರೆಯುವ ಪ್ರತಿ ಗಂಡು ಮುಂದಿನ ದಿನಗಳಲ್ಲಿ ಯಾದರೂ ಎಚ್ಚೆತ್ತುಕೊಳ್ಳಲೇ ಬೇಕಾಗುತ್ತದೆ. ತಮ್ಮ ತಾಯಂದಿರಿಗೆ ಗೌರವ, ಪ್ರೀತಿ ತೋರುವ ಪುರುಷರು ಅನ್ಯಸ್ತ್ರೀಯಲ್ಲೂ ಮಾತೃಸ್ವರೂಪವನ್ನೇ ಕಾಣುವ ಔದಾರ್ಯದೆಡೆಗೆ ಚಲಿಸಲೇಬೇಕೆಂದು ಇಂತಹ ಅಭಿಯಾನಗಳು ಎಚ್ಚರಿಸುತ್ತದೆ

ಇಂದಿನ ಕೆಲ ಯುವತಿಯರೂ ಸಹ ಸುಲಭವಾಗಿ ದೊರೆಯುವ ಪ್ರಸಿದ್ಧಿ, ಹಣ, ಮೋಜು ಮಸ್ತಿಗಾಗಿ ಪುರುಷರೊಂದಿಗೆ ಸಹಕರಿಸುವ ಕಾರ್ಯಕ್ಕೆ ಕೈಜೋಡಿಸಿರುವುದೂ ಉಂಟು. ಇದರ ಪರಿಣಾಮ ಅನಿರೀಕ್ಷಿತ ಹಾಗೂ ಆಘಾತ ಕಾರಿಯಾಗಿಯೇ ಆಗಿರುತ್ತದೆ. ಎಲ್ಲಾ ಹೆಣ್ಣುಗಳೂ ಹೀಗೆಯೇ ಎಂಬ ಸಾಮಾನ್ಯೀಕರಣ ಗೊಳಿಸಲೂ ದಾರಿಮಾಡಿಕೊಡುತ್ತದೆ. ದೀಪದ ಉರಿಯ ಆಕರ್ಷಣೆ ಸಾವಿನೊಂದಿಗೆ ಜೋಡಿಸಲ್ಪಡುತ್ತದೆಎಂಬ ಅನುಭವದ ನುಡಿಯನ್ನು "ನಿಲ್ಲು ನಿಲ್ಲೇ ಪತಂಗ ಬೇಡ ಬೇಡ ಬೆಂಕಿಯ ಸಂಗ" ಹಾಡಿನ ಸಾಹಿತ್ಯದಲ್ಲಿ ಅರ್ಥವತ್ತಾಗಿ ಹೆಣೆಯಲ್ಪಟ್ಟಿದೆ. ಹಿರಿಯರು ಹೇಳುವ ಪಂಚೇಂದ್ರಿಯದ ಮೇಲಿನ ನಮ್ಮ ನಿಯಂತ್ರಣದ ಪಾಠ ನಾವು ಕಲಿಯದೇ ಹೋದರೆ ಅಪಾಯ, ಅವಮಾನ, ನಷ್ಟ! ಕಟ್ಟಿಟ್ಟ ಬುತ್ತಿ ! ಎಂಬುದನ್ನು ಮನಗಾಣಲೇ ಬೇಕಿದೆ. ಮೋಜುಮಸ್ತಿ, ಸುಲಭದಗಳಿಕೆ ಹಾಗೂ ಪ್ರಸಿದ್ಧಿಗಾಗಿ ಅಡ್ಡದಾರಿಹಿಡಿಯುವುದೂ ತರತರದ ಆಕರ್ಷಣೆಯಲ್ಲಿ ಸಿಕ್ಕಿಬೀಳುವುದು ಇವು ಯಾವುವೂ ಶಾಶ್ವತವಾದ ಮುನ್ನಡೆ ತರಲಾರದು ಎಂಬ ಎಚ್ಚರಿಕೆಯೂ ಅಗತ್ಯ.

"ಲೈಂಗಿಕ ಸ್ವಾತಂತ್ರ್ಯವನ್ನು ಇಂದು ಮಿತಿ ಇಲ್ಲದೆ ಬಳಸಲಾಗುತ್ತಿದೆ. ಹೊಸ ಸಮಾಜದಲ್ಲಿ ಮನಬಂದಂತೆ ಲೈಂಗಿಕತೆಯನ್ನು ಉಪಯೋಗಿಸುವಂತಿಲ್ಲ. ಅದರ ಅವಶ್ಯಕತೆಯೂ ಇಲ್ಲ. ಆತ್ಮ ಗೌರವದ ಅರಿವು ಒಮ್ಮೆ ಮಾಡಿತೆಂದರೆ ಎದುರು ವ್ಯಕ್ತಿಯ ಸಹಕಾರ ಅನುಮತಿ ಇಲ್ಲದೆ ಲೈಂಗಿಕ ಕ್ರಿಯೆಯಲ್ಲಿ ತೊಡಗುವಂತಿಲ್ಲ. ಈ ರೀತಿ ಲೈಂಗಿಕ ಸುಖಕ್ಕೆ ತಾನಾಗಿಯೇ ನಿರ್ಬಂಧಗಳು ಬರುತ್ತವೆ. ಇನ್ನೊಂದು ವ್ಯಕ್ತಿಯ ನಿಕಟ ಹೋಗುವ ಅವಕಾಶಗಳೂ ಕಡಿಮೆಯಾಗುತ್ತವೆ. ನೈಸರ್ಗಿಕ ಭಾವನೆಗಳನ್ನು ನಿಗ್ರಹಿಸಿದರೆ ಅವು ತಪ್ಪುದಾರಿ ಹಿಡಿಯುವ ಸಂಭವವಿರುತ್ತದೆ. ವಿಕೃತ ಸಂಬಂಧಗಳೂ ಹುಟ್ಟಬಹುದು. ಸ್ತ್ರೀ-ಪುರುಷರ ಸಂಬಂಧಗಳ ಮನಃಪೂರ್ವಕವಾಗಿ, ಹಿತಕರವಾಗಿ ನಡೆದಾಗ ಅದು ಏಕರೂಪತೆಯ ಸಂಭೋಗವಾಗುವುದು ತಿಳುವಳಿಕೆಯುಳ್ಳ ಸ್ತ್ರೀ-ಪುರುಷರಿಬ್ಬರೂ ಗಂಭೀರ ದೃಷ್ಟಿಯಿಂದ ಇದನ್ನು ಕಾಣಬೇಕು."

ಇಲ್ಲಿ ಛಾಯಾದಾತಾರ್ ರವರು ಉನ್ನತ ಮಟ್ಟದ ಲೈಂಗಿಕ ಸಹಯೋಗದ ಬಗ್ಗೆ ತಿಳುವಳಿಕೆ ಮೂಡಿಸುತ್ತಾರೆ. ನೈಸರ್ಗಿಕ ಭಾವನೆಯನ್ನು ವಿಚಾರವಂತಿಕೆ ಯಿಂದಲೂ, ಹೃದಯವಂತಿಕೆಯಿಂದಲೂ ನಿರ್ವಹಿಸಬೇಕೇ ಹೊರತು ಬಲತ್ಕಾರದ ಆವೇಶದಿಂದಲ್ಲ. ಹೆಣ್ಣು ಗಂಡಿನ ನಡುವೆ ಆತ್ಮೀಯ ಹೃದ್ಯ ಸಂಪರ್ಕವರಬೇಕು. ಇದಕ್ಕೆ ಸ್ತ್ರೀಗೆ ಹೆಚ್ಚಿನ ಶಿಕ್ಷಣ, ವ್ಯಕ್ತಿ ಸ್ವಾತಂತ್ರ್ಯ, ಆರ್ಥಿಕ ಸ್ವಾವಲಂಬನೆಗೆ ಮುಕ್ತ ಅವಕಾಶವಿರಬೇಕು. ಆಯಾಯ ಸ್ವಾತಂತ್ರ್ಯದೊಂದಿಗೆ ವಿವೇಚನಾ ಶಕ್ತಿ ಮೇಳೈಸಿದಲ್ಲಿ ಸ್ತ್ರೀ-ಪುರುಷರ ಸಹ ಸಂಬಂಧಗಳು ಸೊಗಸನ್ನು ತರಬಲ್ಲುದು. ಇಂದಿನ ವ್ಯವಸ್ಥೆ ಬರೀ ಪುರುಷಪರವಾಗಿ ವ್ಯವಸ್ಥೆಗೊಂಡಿದೆಯೇ ಹೊರತು ಸ್ತ್ರೀ ಚೇತನಕ್ಕೆ ಚೇತೋಹಾರಿಯಾಗಿ ಅಲ್ಲ. ಸಮಾಜ ಈ ಬಗ್ಗೆ ಧನಾತ್ಮಕವಾಗಿಯೂ,

ಪುರೋಗಾಮಿಯಾಗಿಯೂ ಬದಲಾಗುವ ದಿಕ್ಕಿನಲ್ಲಿ ಸಾಗಬೇಕಿದೆ. ಹೊಸ ಸಂಬಂಧವೊಂದು ಲಿಂಗ ಅಸಮಾನತೆಯ ಬದಲಿಗೆ ಉದಯಿಸಬೇಕಿದೆ. ಮಿತ್ರತ್ವದ ಸಹಜೀವನ ಹೆಣ್ಣುಗಂಡುಗಳ ನಡುವೆ ವೃದ್ಧಿಸಬೇಕಿದೆ. ದೋಷರಹಿತವಾದ ದೃಷ್ಟಿಕೋನವೊಂದು ಲಿಂಗತಾರತಮ್ಯವನ್ನು ಕೊನೆಗಾಣಿಸಬೇಕಿದೆ. ಇತ್ತೀಚೆಗೆ ನೀಡಿರುವ ಸುಪ್ರೀಂಕೋರ್ಟ್ ಆದೇಶದ ಆಶಯವೂ ಇದೇ ಆಗಿದೆ.

ಸಹಜೀವಿಯೊಂದಿಗೆ ನಡೆದುಕೊಳ್ಳುವ ರೀತಿಯನ್ನು ಇನ್ನಷ್ಟು ಸುಧಾರಿಸಿ ಕೊಳ್ಳುವತ್ತ ಸ್ತ್ರೀ–ಪುರುಷರಿಬ್ಬರೂ ಆಲೋಚಿಸಲು ಈ ಅಭಿಯಾನವು ಪ್ರೇರೇಪಿಸಿದೆ. ಯುವ ಜನಾಂಗವು ತಾಳ್ಮೆ, ಸಹನೆಯಿಂದ ಕಾದುನೋಡುವ ತಂತ್ರ ಅನುಸರಿಸಬೇಕು. ಇಡೀ ಪ್ರಕ್ರಿಯೆ ಧಾರ್ಮಿಕ ವಿಚಾರದೊಂದಿಗೊ ಅಥವಾ ವೈಯಕ್ತಿಕ ಲಾಭಕ್ಕಾಗಿಯೋ ಎಂಬುದನ್ನು ಮೊದಲೇ ಊಹಿಸುವುದು, ನಂಬುವುದು ಅಪಾಯಕಾರಿ ಬೆಳವಣಿಗೆಯಾಗಿದೆ. ಸಮಾಜವು ಸೂಕ್ಷ್ಮತೆಯನ್ನು ಕಳೆದುಕೊಳ್ಳಬಾರದು. ಅನುಭವಿಸಿದವರಿಗೆ ಮಾತ್ರವೇ ಅದರ ಸತ್ಯಾಸತ್ಯತೆ ತಿಳಿದಿರುತ್ತದೆ. ಪ್ರಖ್ಯಾತರೆಂದೋ, ಬುದ್ಧಿವಂತರೆಂದೋ ಕೆಟ್ಟನಡೆಗೆ ವಿನಾಯಿತಿ ಸಿಗಬೇಕಿಲ್ಲ. ಯಾವುದೇ ಕೀಳುಮಟ್ಟದ ಸಂದೇಶವು ಮುಂದಿನ ಜನಾಂಗಕ್ಕೆ ತಲುಪಬಾರದು. ಘನತೆ ಮತ್ತು ಗೌರವದ ಬದುಕು ಸ್ತ್ರೀ–ಪುರುಷರಿಬ್ಬರಿಗೂ ದಕ್ಕಬೇಕು. ಪುರುಷನ ಮೇಲಿರಿಮೆ ಹಾಗೂ ಸ್ತ್ರೀ ಯ ಕೀಳಿರಿಮೆಗಳ ನರಳಾಟದಿಂದ ಸಮಾಜದ ನೆಮ್ಮದಿಗೆ ಧಕ್ಕೆ ಉಂಟಾಗುತ್ತದೆ.

ಕೆ.ಎನ್. ಗಣೇಶಯ್ಯ ರವರು ಗಂಡಸು ಯಾಕೆ 'ಮೀ.ಟೂ' ಆರೋಪ ಮಾಡುವುದಿಲ್ಲ? ಎಂಬ ಭಾನು ಪ್ರಭದ ಲೇಖನದಲ್ಲಿ ವಿಸ್ತರಿಸಿದ ಈ ಕೆಳಗಿನ ಅಂಶವು ಪುನರ್ ಮನನಕ್ಕೆ ಯೋಗ್ಯವಾಗಿದೆ.

"ಮಾನವನ ಅಂತರ್ಯದಲ್ಲಿ ಜೈವಿಕ ವಿಕಾಸ ಕ್ರಿಯೆಯಿಂದ ರೂಪುಗೊಂಡ ಸ್ವಾರ್ಥಗುಣಗಳಿಗೂ, ಸಾಂಸ್ಕೃತಿಕ ವಿಕಾಸದ ನಿಸ್ವಾರ್ಥ, ತ್ಯಾಗ ಗುಣಗಳಿಗೂ ಸದಾ ಜಂಜಾಟ ನಡೆಯುತ್ತಲೆ ಇರುತ್ತದೆ ಈ ದೃಷ್ಟಿಯಲ್ಲಿ ಇತ್ತೀಚಿನ ಮೀಟೂ ಅಭಿಯಾನ ಬಹುಷಃ ಬದಲಾಗುತ್ತಿರುವ ನಮ್ಮ ಸಮಾಜದ ಹೆಗ್ಗುರುತು ಎನ್ನಬಹುದು."

ಕುಂದು ಕೊರತೆಗಳತ್ತ ಆತ್ಮಾವಲೋಕನಕ್ಕೆ ಸಿದ್ಧರಾದವರು ತಮ್ಮನ್ನು ತಾವು ತಿದ್ದುಕೊಳ್ಳುತ್ತಾ ಸುಧಾರಿಸಿಕೊಳ್ಳಲು ಇಚ್ಛಿಸುತ್ತಾರೆ. ಇದು ಮನುಷ್ಯತ್ವದ ದೊಡ್ಡಗುಣವೆನಿಸುತ್ತದೆ. ಹಣ, ಅಧಿಕಾರ, ಪ್ರಸಿದ್ಧಿಯೊಳಗೆ ಬಂಧಿಯಾದವರಿಗೆ ಆತ್ಮಪ್ರಜ್ಞೆಯ ಧ್ವನಿ ಕೇಳಿಸಲಾರದು ಅದರಿಂದ ಹೊರಬಂದು ಆಲೋಚಿಸುವ ಗಟ್ಟಿತನ ಮರೆಯಬೇಕಿದೆ. ಸಹಜೀವಿಯೊಂದಿಗಿನ ಸಂವಹನ, ಒಡನಾಟ ಪರಸ್ಪರರ ಭಾವನೆಗೆ ಘನತೆಯನ್ನು ತರುವಂತಿರಬೇಕು.

ಸ್ತ್ರೀ ಪರ ಅನೇಕ ಕಾನೂನುಗಳು ಈಗಾಗಲೇ ಜಾರಿಯಲ್ಲಿವೆ. ಆದರೆ ಕಾನೂನಿಗಿಂತ ಸಾಮಾಜಿಕ ಕಾರ್ಯಾಚರಣೆಗಳು ಶಕ್ತಿಯುತವಾಗಿದೆ. ಕಾನೂನಿನ

ಬಾಹುಗಳು ತಲುಪಲಾಗದ ಅನೇಕ ಸ್ಥಳಗಳೂ, ಸಂಗತಿಗಳೂ ಇವೆ ಎಂಬುದನ್ನು ಮರೆಯಲಾಗದು. ಕಾನೂನಿನ ಸ್ಪರ್ಶಕ್ಕೂ ನಿಲುಕದೆ, ಸಮಾಜದಲ್ಲಿ ಅವ್ಯಾಹತವಾಗಿ ಅಪರಾಧಗಳು ಜರುಗುತ್ತಲೇ ಇರುವುದನ್ನು ಕಾಣಬಹುದು. ಪ್ರಜಾಪ್ರಭುತ್ವದ ಸ್ತಂಭಗಳಾದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಗಳು ಪುರುಷ ಷಾಹಿಯಾಗಿಯೇ ಮುಂದುವರೆಯುತ್ತಿದೆ. ಶೇ ೩೩ ರ ಮಹಿಳಾ ಮೀಸಲಾತಿಯು ಸಹ ಇನ್ನೂ ಕಾಗದದ ಮೇಲಿನ ಘೋಷಣೆಯಾಗಿದೆ. ಸಮ ಸಮಾಜದ ಕನಸು ನನಸಾಗದೇ ಉಳಿದಿದೆ.

ಮನು ಧರ್ಮ ಶಾಸ್ತ್ರವನ್ನು ಕಾಯಾ ವಾಚಾ ಮನಸಾ ಪಾಲಿಸುವ ಸ್ತ್ರೀಯ ಮನಸ್ಸು ದಾಸ್ಯದಿಂದ ಬಳಲಿದೆ. ಕೆಲವರಿಗೆ ಮಾತ್ರ ಪ್ರಾಥಮಿಕ ಶಿಕ್ಷಣ ಸೌಲಭ್ಯ ದೊರೆಯುತ್ತಿದೆ. ಉನ್ನತ ಶಿಕ್ಷಣ ಇನ್ನೂ ಗಗನ ಕುಸುಮವಾಗಿದೆ. ಸ್ವ ಚಿಂತನೆಯಿಂದ ಸ್ತ್ರೀ ಪ್ರಜ್ಞೆ ಅರಳಲು ಸ್ವಾವಲಂಬಿಯಾಗಿ ಮುನ್ನಡೆಯಲು ಕುಟುಂಬದ ಪ್ರೋತ್ಸಾಹವೇ ಇನ್ನೂ ಎಷ್ಟೋ ಹೆಣ್ಣು ಮಕ್ಕಳಿಗೆ ಸಿಗುತ್ತಿಲ್ಲ. ವಿವಾಹವು ಸ್ತ್ರೀ ಗೆ ಅನಿವಾರ್ಯವೆಂದು ಈ ಹೊತ್ತಿಗೂ ಭಾವಿಸಲಾಗಿದೆ. ಇನ್ನೂ ಗೃಹಬಂಧಿಯಾಗಿಯೇ ಉಳಿದು ಶೋಷಿತಳಾಗಿಯೇ ಉಳಿದಿರುವ ಭಗಿನಿಯರ ಸಂಕಷ್ಟಗಳು ಹಲವಾರು. ವೃತ್ತಿನಿರತ ಮಹಿಳೆಯರ ಮೇಲಿನ ಒತ್ತಡಗಳೂ ನೂರಾರು. ಒಂದೆಡೆ ಸ್ತ್ರೀ ಸಬಲೀಕರಣಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ಎನ್ನೊಂದೆಡೆ ಎಚ್ಚೆತ್ತ ಸ್ತ್ರೀ ಧ್ವನಿಯನ್ನು ಉಡುಗಿಸುತ್ತಾರೆ. ವಿರೋಧಾಭಾಸಗಳಿಗೆ ಸಿಲುಕಿದವಳ ನರಳಾಟವು ಆಕ್ರೋಶವಾಗಿ ಬದಲಾಗಿ ಸಮಾಜದ ನೆಮ್ಮದಿಗೆ ಕಂಟಕ ತಂದೀತು.

"ಎಚ್ಚೆತ್ತ ಮಹಿಳೆಯರು ಸುಸಂಘಟಿತರಾಗಿ ಸಂವಿಧಾನ ದತ್ತವಾದ ತಮ್ಮ ಹಕ್ಕು ಭಾದ್ಯತೆಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಉಳಿದ ಸ್ತ್ರೀಯರಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ತಲೆತಲಾಂತರದಿಂದ ಸ್ತ್ರೀ ಶೋಷಣೆ ಮಾಡುತ್ತಾ, ಮಹಿಳೆ ಎಂದರೆ ಪುರುಷನ ಚರಣದಾಸಿ, ಪತಿ ಸೇವೆಯೇ ಸತಿಗೆ ಮುಕ್ತಿಯ ಸೋಪಾನ ಎಂಬ ನಂಬಿಕೆಯನ್ನು ಸ್ತ್ರೀಯರಲ್ಲಿ ಬಿತ್ತುತ್ತಾ ಬಂದ ಪುರುಷರಲ್ಲೂ ಬದಲಾವಣೆ ಕಾಣುತ್ತಿದೆ. ಸ್ತ್ರೀ ಶಿಕ್ಷಣ ಮತ್ತು ಸ್ತ್ರೀ ಸಶಕ್ತೀಕರಣದಿಂದ ಮಾತ್ರ ಕುಟುಂಬದ ಆರ್ಥಿಕ ಪ್ರಗತಿ, ಸಾಮಾಜಿಕ ಮನ್ನಣೆ ಮತ್ತು ಮಕ್ಕಳಿಗೆ ಉತ್ತಮ ಶಿಕ್ಷಣ ಸಾಧ್ಯ ಎಂಬುದನ್ನು ಪುರುಷರೂ ಮನಗಾಣುತ್ತಿದ್ದಾರೆ." ಎಂಬ ಆಶಾವಾದದ ನುಡಿಯನ್ನು ಪ್ರೊ.ಬಿ.ವಿ. ವೀರಭದ್ರಪ್ಪನವರು ನುಡಿದಿದ್ದಾರೆ.

ಪರಸ್ಪರರ ನಂಬಿಕೆ, ಗೌರವಯುತ ನಡವಳಿಕೆಗಳೇ ಪ್ರಬುದ್ಧ ಸಮಾಜದ ಹೆಗ್ಗುರುತಾಗಬೇಕು. "ಮಹಿಳಾ ಅಧ್ಯಯನ"ವು ಸ್ತ್ರೀ ಮತ್ತು ಪುರುಷರ ಎರಡೂ ರೀತಿಯ 'ಅಹಂ'ಗಳಿಗೆ ಮದ್ದನ್ನು ಅರಿಯುವುದಾಗಿದೆ. ಕೀಳಾಟ-ಮೇಲಾಟಗಳು ವಿಚಾರವಂತರ ಆಯ್ಕೆಯಲ್ಲ. ಸಮತೋಲಿತ ಸದ್ಭಾವನೆಯ ನಡೆಯು ಇಬ್ಬರಿಗೂ ಶ್ರೇಯಸ್ಕರವಾದುದು. ಇತಿಹಾಸದ ತಪ್ಪುಗಳಿಂದ ಪಾಠ ಕಲಿಯುತ್ತಾ ವರ್ತಮಾನವನ್ನು ಅರಿಯಲು ಸಾಧ್ಯವಾಗಬೇಕು. ಆ ಮೂಲಕ ಭವಿಷ್ಯದಲ್ಲಿ ಅತ್ಯುತ್ತಮವಾದುದನ್ನು

ಆಯ್ಕೆ ಮಾಡುವ ಸಾಮರ್ಥ್ಯವೂ ದಕ್ಕುವುದು ಅಡಿಗಡಿಗೂ ಆತ್ಮಾವಲೋಕನದ ನಡೆಯಿಂದ ಸಹಕಾರದ ಸಹಬಾಳ್ವೆಯು ಬದುಕಿನ ಮಂತ್ರವಾಗಲಿ, ಜೊತೆಜೊತೆಯಲ್ಲಿ ಬದುಕಲೇ ಬೇಕಿದೆ. ಪರಸ್ಪರ ನಂಬಿಕೆ, ಪ್ರೀತಿ, ವಿಶ್ವಾಸದ ಹಸನ್ಮುಖತೆಯಿಂದ ಆರೋಗ್ಯಕರ ಸಮಾಜದ ಭಾಗವಾಗೋಣ

– ನಾಗಜ್ಯೋತಿ ತರಿಕೇರೆ
ಸಂಶೋಧನ ವಿದ್ಯಾರ್ಥಿನಿ
ಹಂಪಿ ಕನ್ನಡ ವಿಶ್ವವಿದ್ಯಾನಿಲಯ
ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ

ಕೊರಳ ಗಂಟೆ–ಕನ್ನಡ

ಯಾವ ಕೊರಳಿನ ಗಂಟೆ ಉಲಿದರೂ ಕೇಳುತಿರುವುದು ಕನ್ನಡ
ಮಣ್ಣ ವಾಸನೆ ಘಮಲು ಘಮಲೊಳು ಸೂಸುತಿರುವುದು ಕನ್ನಡ
ಕಣ್ಣ ಅರಳಿಸಿ ನಗುವ ತುಳುಕಿಸಿ
ನುಡಿವ ನುಡಿಯಿದು ಕನ್ನಡ

ನಾನು ಕನ್ನಡ ನೀನು ಕನ್ನಡ
ಬೆಸೆವ ಭಾಷೆಯೆ ಕನ್ನಡ
ಹೆಣ್ಣ ಹಣೆಯಲಿ ಕೆಂಪು ಕುಂಕುಮ
ಕೆನ್ನೆಯರಸಿನ ಕಾಣಲು

ಕನ್ನಡಾಂಬೆಯೇ ಕಾಣುತಿರುವಳು ಮನವು ಹಬ್ಬವ ಸವಿಯಲು
ಬಿಚ್ಚಿ ಹರಹಿದ ಹಸಿರ ಬಲೆಯಿದು
ನಮ್ಮ ನಾಡಿದು ಕನ್ನಡ
ಉಸಿರು ಎಸರು ತಂಪು ಬಸಿರು

ಸ್ವರ್ಗದಾ ಸೆಲೆಯು ಕನ್ನಡ.
ತಾಯ್ ಮಡಿಲ ಮಗುವು ನಾನು
ಅಮರ ಪದಗಳ ಹೆಕ್ಕುತಾ
ತೊದಲು ನುಡಿಯಲಿ ಗಾನಗೈಯುವೆ
ನನ್ನ ನಾಡಿದು ಕನ್ನಡ

– ನಾಗರೇಖಾ ಗಾಂವಕರ

ವಚನ ಸಾಹಿತ್ಯ

"ವಚನ" ವೆಂಬುದು ೧೨ನೆ ಶತಮಾನದಲ್ಲಿ ಕರ್ನಾಟಕದ ಶಿವಶರಣರು, ಕನ್ನಡ ಸಾಹಿತ್ಯಕ್ಕೆ ನೀಡಿದ ಅವರ ಅನುಭಾವದ ವಿಶಿಷ್ಟ, ವಿನೂತನ ಮತ್ತು ಸ್ವತಂತ್ರ ಆಲೋಚನಾ ಅಭಿವ್ಯಕ್ತಿ ಮಾಧ್ಯಮ. 'ವಚನ' ಸಂಸ್ಕೃತದ 'ವಚ್' ದಾತುವಿನಿಂದ ನಿಷ್ಪನ್ನವಾದ ನಾಮಪದ 'ವಚ್'-ನುಡಿ, ಮಾತು, ಹೇಳು, ವ್ಯಕ್ತಪಡಿಸು ಮೊದಲಾದ ಅರ್ಥ ಹೊಂದಿದೆ. ಅಲ್ಲದೆ ವಚನವೆಂದರೆ ಮಾತನಾಡುವುದು, ಉಚ್ಚರಿಸುವುದು, ನುಡಿ, ಮಾತು ಹೇಳಿಕೆ, ಪ್ರತಿಜ್ಞೆ, ವಾಗ್ದಾನ, ಗದ್ಯ, ಗದ್ಯ ಸಾಹಿತ್ಯದಲ್ಲಿ ಒಂದು ಪ್ರಕಾರ ವ್ಯಾಕರಣದಲ್ಲಿ ನಾಮಪದ, ಸಂಖ್ಯೆಯನ್ನು ಸೂಚಿಸುವ ಪದ. ವಚನವೆಂದರೆ, ವಚಿಸು, ಭಾಷೆಕೊಡು, ಪ್ರತಿಜ್ಞೆಮಾಡು, ಮುಂತಾದ ಅರ್ಥಗಳಿವೆ. ಮುಖ್ಯವಾಗಿ ಇದು ಗದ್ಯಪದ್ಯದ ಹಿಡಿತಕ್ಕೆ ಸಿಗದೆ ಸ್ವತಂತ್ರ ಮುಕ್ತಕದ ರಚನಯೇ, "ವಚನ" ವೆನಿಸಿದೆ. ವಚನವೆಂದು ಮಂತ್ರ ಆತ್ಮ ಸಾಕ್ಷಿಯ ಮಾತು. ಅಧ್ಯಾತ್ಮದ ಸೂತ್ರಗಳೆಂದು ಅರ್ಥೈಸುತ್ತದೆ ವಚನ ಪುರುಷವೆಂದಿದ್ದಾರೆ. ಅದು ಆದರಕ್ಕೆ ಕಯಿಯಾದರೂ ಉದರಕ್ಕೂ ಸಿಹಿಯನ್ನೆ ಉಂಟು ಮಾಡುತ್ತದೆ. ಎಂದಿದ್ದಾರೆ. ಹಿಂದಿನ ಹಿರಿಯರು ನಡೆದುನುಡಿದ ಮಾತುಗಳು ವಚನಗಳೆನಿಸುತ್ತವೆ. ಪುರಷಮಣಿ ತಾಗಿದಕಬ್ಬಿಣ ಬಂಗಾರವಾಗುತ್ತಿದೆ. ಶಿವಶರಣರ ವಚನವನ್ನು ಪಾಲಿಸಿದವನು ಆಚರಿಸಿದವನು ಚಿನ್ನದ ಬಾಳನ್ನು ಬದುಕುತ್ತಾನೆ. ವಚನಗಳು ಪುರುಷಮಣಿಗಿಂತ ಮಿಗಿಲೆನಿಸಿದೆ.

"ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು" ಎಂಬ ಗಾದೆಯ ಮಾತು ಮಾತಿನ ಮಹತ್ವವನ್ನು ಬಿತ್ತರಿಸುತ್ತದೆ.

ಮಾತು ವಚನವಾಗಬೇಕಾದರೆ "ವಚನದಲ್ಲಿ ನಿಮ್ಮ ನಾಮಾಮೃತ ತುಂಬಿರಬೇಕೆಂದು ನಿರೂಪಿಸಿದ್ದಾರೆ. ವ್ಯರ್ಥ ಹರಟೆಮಾತುಗಳು ವಚನಗಳಾಗುವವು ಅದಕ್ಕಾಗಿ "ವಚನ" ಎನ್ನುವ ಈ ರೂಪವು ಶರಣರು ಕನ್ನಡಕ್ಕೆ ಕೊಟ್ಟ ಕಾಣಿಕೆ ಈ ವಚನಗಳು ತಮ್ಮ ರೂಪ ಸ್ವರೂಪದಿಂದಲೂ ಕೂಡ ಕನ್ನಡ ಸಾಹಿತ್ಯ ಭಂಡಾರದ ಅಮೂಲ್ಯ ರತ್ನಗಳಾಗಿ ವಿಶ್ವಸಾಹಿತ್ಯದ ದೃಷ್ಟಿಯಿಂದ ಕನ್ನಡದ ಬೆಲೆಯನ್ನು ಹೆಚ್ಚಿಸಿವೆ.

ಕೆಲವುಕಡೆ ವಚನವನ್ನು "ಮಾತು" ಎಂಬರ್ಥದಲ್ಲಿಯು ಬಳಸಿದ್ದುಂಟು ಉದಾ:- "ಮೃದು ವಚನವೆ ಸಕಲ ಜಪಂಗಳಯ್ಯ" -ಬಸವಣ್ಣ.

"ಅವಳ ವಚನ ಬೆಲ್ಲದಂತೆ
ಹೃದಯಲ್ಲಿಪ್ಪುದು ನಂಜುಕಂಡಯ್ಯ"

"ತನ್ನ ವಚನ ತನಗೆ ಹಗೆಯೊದಡೆ ಅದೆಪ್ರಳಯವಲಾ" ಪ್ರಭುದೇವ. ಇನ್ನು ಕೆಲವರು "ವಚನವೆಂದರೆ" ಒಂದು ಸಾಹಿತ್ಯದ ಪ್ರಕಾರವೆಂದು ಅರ್ಥ ಬರುವ ಹಾಗೆ ಹೇಳಿದ್ದುಂಟು ಚನ್ನಬಸವಣ್ಣನವರು ಅಕ್ಕಮಹಾದೇವಿಯ ವಚನಗಳನ್ನು ತೌಲನಿಕವಾಗಿ ತೂಗಿದಾಗ

"ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ
ಅಜಗಣ್ಣನ ಐದು ವಚನಕ್ಕೆ ಕೂಡಲ ಚನ್ನಸಂಗಮದೇವಾ
ಮಹಾದೇವಿಯಕ್ಕಳ ಒಂದು ವಚನ"

ಸಮಾಜೋಧಾರ್ಮಿಕ ಕ್ರಾಂತಿ ಶರಣರು ಪಣತೊಟ್ಟ ಕನಸು. ಇದಕ್ಕಾಗಿ, ಜನಸಾಮಾನ್ಯರನ್ನು ಅವರ ಭಾಷೆಯಲ್ಲಿ ಅವರ ಮಟ್ಟದಲ್ಲಿ ಮುಟ್ಟಿ, ತಟ್ಟಿ ಎಚ್ಚರಿಸಬೇಕಾದ ಹೊಣೆ ಶರಣರ ಮೇಲಿತ್ತು. ಅದಕ್ಕೆ ತಕ್ಕರೂಪ 'ವಚನಗಳು' ತಮ್ಮ ಅನುಭವಗಳ ಅಭಿವ್ಯಕ್ತಿಗೆ, ತಮ್ಮ ಆಚಾರ ವಿಚಾರ ಪ್ರಚಾರಕ್ಕೆ ವಚನಗಳೇ ಮಾಧ್ಯಮಗಳಾದವು. ಕಾವ್ಯವನ್ನು ಬರೆಯುದಾಗಲಿ, ಸಾಹಿತ್ಯವನ್ನು ಸೃಷ್ಟಿಸುವುದಾಗಲಿ, ವಚನಕಾರರ ಉದ್ದೇಶವಾಗಿರದಿದ್ದರೂ, ವಚನಮುಕ್ತಗಳ ಕೊರಳಮಾಲೆ ಸಾಹಿತ್ಯ ಸರಸ್ವತಿಗೆ ಶರಣರಿಂದ ಅನಾಯಾಸವಾಗಿ ದೊರೆತ ಅಪೂರ್ವ ಕಾಣಿಕೆ.

ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಸರ್ವವಿಧ ಪರಿವರ್ತನೆಗೆ. ಅವರಿಗೆ ಸಾಹಿತ್ಯದ ಶುಷ್ಕ ನಿಯಮಗಳು ಬೇಕಾಗಿರಲಿಲ್ಲ. ಅವರಿಗೆ ಭಾಷಾ ಪಾಂಡಿತ್ಯವೂ ಬೇಕಾಗಿರಲಿಲ್ಲ. ಛಂಧೋನಿಯಮಗಳು ಅಧ್ಯಯನವೂ ಅವರಿಗೆ ಬೇಕಾಗಿರಲಿಲ್ಲ. ಇದರರ್ಥ ಅವರಿಗೆ ಇವೆಲ್ಲ ಗೊತ್ತಿರಲಿಲ್ಲ ಎಂದಲ್ಲ. ಆದರೆ, ಅವರು ಅದನ್ನು ಮೀರಿ ನಿಂತವರು ಅವರಿಗಿದ್ದ ಅಂದಿನ ತುರ್ತು ಅವರ ಸಾಮಾಜಿಕ ಪರಿವರ್ತನೆ ಅದಕ್ಕಾಗಿ ಸಾಮಾಜಿಕ ಕಳಕಳಿ ನಿಜವಾದ ಕಳಕಳಿ ಉಕ್ಕಿ ಹರಿದು ವಚನವಾಹಿನಿಯಾಗಿ ಪ್ರವಹಿಸಿತು.

೧೨ ನೆಯ ಶತಮಾನದ ಶರಣರ ಸಮಾಜೋಧಾರ್ಮಿಕ ಚಳುವಳಿ ಜಾಗತಿಕ ಇತಿಹಾಸದಲ್ಲಿ ಒಂದು ಅಪೂರ್ವ ಘಟನೆ. ಅವರ 'ವಚನ' ಸೃಷ್ಟಿ ಅನನ್ಯ ವರ್ಣಲಿಂಗ ಭೇದ ಮರೆತು ಸಮಾಜದ ಎಲ್ಲ ವರ್ಗ-ವರ್ಣಗಳ ಜನ ಬೆರೆತು. ಈ ಭುವಿಯ ಮೇಲೆ ದಿವಿಯನ್ನು ತಂದಿಡುವ, ಕಾಯಕದ ಮೇಲೆ ಕೈಲಾಸಕಟ್ಟುವ ಕಲ್ಯಾಣ ಕಾರ್ಯದಲ್ಲಿ ಕಲ್ಯಾಣದಲ್ಲಿ ಬಸವಣ್ಣನ ನೇತೃತ್ವದಲ್ಲಿ ಸಮಸ್ತರೂ ಒಂದಾದರು ಒಂದು ಕಡೆ ಆಳುವ ದೊರೆಗಳು ಇನ್ನೊಂದೆಡೆ ಪುರೋಹಿತಶಾಹಿ ಇವುಗಳ ಮಧ್ಯದಲ್ಲಿ ಜನಸಾಮಾನ್ಯರು ಜರ್ಜರಿತರಾಗಿದ್ದರು. ಮೌಢ್ಯಗಳ ಕತ್ತಲ ಕೂಪದಲ್ಲಿ ತೊಳಲಾಡುತ್ತಿದ್ದರು. ಆಳುವಜನ ಜನರಾಡುವ ಭಾಷೆಯಿಂದ ದೂರನಿಂತು ಅನ್ಯಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡಿಕೊಂಡು ಜನರನ್ನು ಒಡೆದು,

ಆಳುತ್ತಾರೆ. ತಿಳಿಯದ ಪುರಾಣವನ್ನು ಸೃಷ್ಟಿಸಿ, ತಿಳಿಯದ ಭಾಷೆಯಲ್ಲಿ ಗಟ್ಟಿಸಿ, ತಿಳಿಸಿಕೊಡಲು ಜನಭಾಷೆಗೆ ಮತ್ತೋಬ್ಬರನ್ನು ನಿಲ್ಲಿಸಿ, 'ನಾವೇ ಬೇರೆ ನಮ್ಮದೇ ಬೇರೆ' ಎನುವಂತೆ ವರ್ತಿಸುತ್ತಾರೆ. ಇವೆಲ್ಲವುಗಳ ಮೂಲಸತ್ವವನ್ನು ಶರಣರಿಗೆ ಅಲ್ಲಾಡಿಸಿ ನೋಡಬೇಕಾಗಿತ್ತು ಹೀಗಾಗಿ, ಜನಸಾಮಾನ್ಯರ ಬಳಿಗೆ ಶರಣರು ಹೋದರು. ಜನಸಾಮಾನ್ಯರಿಂದಲೇ ಶರಣರು ಹುಟ್ಟಿಬಂದರು. ಅಚ್ಚಕನ್ನಡದಲ್ಲಿ ಮೇಲ್ವರ್ಗದ ಹುಚ್ಚು ಬಿಡಿಸಿದರು.

ವಚನಸಾಹಿತ್ಯ ಪರಿಭಾಷೆಯಾಗಿ ಒಂದು ಪ್ರಕಾರದ ಕಾವ್ಯ, ಹಾಡಿದರೆ ಹಾಡಾಗುವ ಓದಿದರೆ ಗದ್ಯವಾಗುವ ಕನ್ನಡದ ವಿಶಿಷ್ಟ ಕಾವ್ಯ ಪ್ರಕಾರ. ಇದು ಶರಣರ ಆಂದೋಲನ ಮತ್ತು ಅಭಿವ್ಯಕ್ತಿಗೆ ಸಂಗಾತಿಯಾಯಿತು. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ೧೨ನೇ ಶತಮಾನ ಒಂದು ಪ್ರಮುಖ ಘಟ್ಟ ಈ ಶತಮಾನದಲ್ಲಿ 'ವಚನ' ಎಂಬ ಹೊಸ ಸಾಹಿತ್ಯ ಉದಯವಾಯಿತು. ವಚನ ಸಾಹಿತ್ಯ ಕನ್ನಡ ಸಾಹಿತ್ಯದಲ್ಲಿ ಪ್ರಭಾವಶಾಲಿ ಆತ್ಮವಿಮರ್ಶೆಯ ಮಾಧ್ಯಮವಾಗಿ ಸ್ವಂತಂತ್ರವಾಗಿ ಬೆಳೆದು ವಿಜೃಂಭಿಸಿ ಮುಂದಿನ ಸಾಹಿತ್ಯ ಪರಂಪರೆಗಳ ಮೇಲೆ ಪ್ರಭಾವ ಬೀರಿ ಕನ್ನಡ ಸಾಹಿತ್ಯದಲ್ಲಿ ಮಾತ್ರವಲ್ಲದೆ ವಿಶ್ವಸಾಹಿತ್ಯದಲ್ಲಿ ಒಂದು ಅವಿಭಾಜ್ಯ ಅಂಗವಾಗಿದೆ. ಸ್ವಂತಿಕೆಯಿಂದ ಮೆರೆದ ವಚನಸಾಹಿತ್ಯವನ್ನು ದೇವರ ದಾಸಿಮಯ್ಯ. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ, ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ನುಲಿಯ ಚಂದಯ್ಯ, ಸೂಳೆ ಸಂಕವ್ವೆ, ಹಡಪದ ಅಪ್ಪಣ್ಣ, ಒಕ್ಕಲು ಮುದ್ದಯ್ಯ, ಏಕಾಂತ ರಾಮಯ್ಯ, ಮಡಿವಾಳ ಮಾಚಯ್ಯ, ಹೆಂಡದ ಮಾರಯ್ಯ ಮುಂತಾದ ೧೧೫ ಕ್ಕೂ ಹೆಚ್ಚು ಜನ ಶರಣರು ೪೫ಕ್ಕೂ ಹೆಚ್ಚು ವಿವಿಧ ಕಸುಬುಗಳಲ್ಲಿ ತೊಡಗಿದವರಾಗಿದ್ದರು. ಇವರು ತಮ್ಮ ಅಭಿವೃದ್ಧಿಗೆ ವಚನವನ್ನು ಮುಖ್ಯ ಮಾಧ್ಯಮವನ್ನಾಗಿ ಮಾಡಿಕೊಂಡರು. ಸಮಾಜದ ಎಲ್ಲಾ ಜಾತಿಯವರೂ ವಚನವನ್ನು ಮುಖ್ಯ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಂಡರು ಸಮಾಜದ ಎಲ್ಲಾ ಜಾತಿಯವರೂ ವಚನವನ್ನು ಬಳಸಿ ತಮ್ಮ ಅನುಭವಗಳನ್ನು ಹೇಳಿಕೊಳ್ಳತೊಡಗಿದ್ದರಿಂದ ವಚನ ನಾಡಿನಲ್ಲಿ ವಚನ ಒಂದು ಚಳವಳಿಯ ಮುಖವಾಣಿಯಾಗಿತ್ತೆಂದರೆ ಅದರ ಸಾಮಾಜಿಕ ವ್ಯಾಪಕತೆ ಅಪಾರ ವಾದುದೆಂಬುದು ಅರಿವಿಗೆ ಬರದೆ ಇರದು. ಬಸವಣ್ಣನ ಒಂದು ವಚನ.

ಹಾವು ತಿಂದವರ ನುಡಿಸಬಹುದು!
ಗರ ಹೊಡೆದವರ ನುಡಿಸಬಹುದು!
ಸಿರಗರ ಹೊಡೆದವರ ನುಡಿಸಲು ಬಾರದು ನೋಡಯ್ಯ!
ಬಡತನವೆಂಬ ಮಂತ್ರವಾದಿ ಹೊಗಲು
ಒಡನೆ ನುಡಿವರಯ್ಯ ಕೂಡಲಸಂಗಮದೇವ!

ವಚನ ಸಾಹಿತ್ಯ :

ಮಧ್ಯಕಾಲಿನ ಸಾಹಿತ್ಯದ ವೈಶಿಷ್ಟ್ಯವಿರುವುದೇ 'ವಚನ' ಸಾಹಿತ್ಯ ರೂಪದ

ಉದಯದಲ್ಲಿ ವಚನ ವಾಂಙ್ಮಯದ ಉದಯ ಧರ್ಮಜೀವನದ ಮೂಲವಾದಲ್ಲಿ ತಾವು ಭೋಧಿಸುವುದು ಸಾಮಾನ್ಯ ಜನರಿಗೂ ತಲುಪಬೇಕು ಎಂಬ ಆಶಯ ಹೊಂದಿದ ವೀರಶೈವ ಶರಣರು ಜನ ಭಾಷೆಯಲ್ಲಿಯೇ ತಮ್ಮ ಭಾವಗಳನ್ನು ತತ್ವಗಳನ್ನು ನಿರೂಪಿಸಿದರು. ಅವರ ಆತ್ಮ ನೀರಿಕ್ಷಣೆ ಆತ್ಮಾನುಭವಗಳೇ 'ವಚನ' ರೂಪದಲ್ಲಿ ಅಭಿವ್ಯಕ್ತಿ ಪಡೆದಿದೆ ವಿಶ್ವಸಾಹಿತ್ಯಕ್ಕೆ ಕನ್ನಡದ ವಿಶಿಷ್ಠ ಕೊಡುಗೆಯೆನಿಸಿವೆ.

ವಚನದ ಮೂಲಸ್ವರೂಪ :

ವಚನದ ಮೂಲ ಸ್ವರೂಪವನ್ನು ಕುರಿತು ಸಾಕಷ್ಟು ಚರ್ಚೆಗಳು ನಡೆದಿವೆ ತಮಿಳಿನ 'ತೇವಾರಂ' ಎಂಬ ಕಾಡುಗಳೇ ಕನ್ನಡ ವಚನಗಳಿಗೆ ಮೂಲವೆಂದು ಡಿ.ಎಲ್. ನರಸಿಂಹಾಚಾರ್ ಹೇಳುತ್ತಾರೆ. ವೇದ ಉಪನಿಷತ್ತು ಆಖ್ಯಾನಗಳ ಗದ್ಯದ ಸರಣಿಯನ್ನು ಕಸಿಕಟ್ಟಿ ತಮ್ಮ ವಚನ ಪ್ರಕಾರವನ್ನು ಶರಣರು ನಿಷ್ಪನ್ನ ಮಾಡಿಕೊಂಡರೆಂದು ಎಲ್. ಬಸವರಾಜು ಹೇಳುತ್ತಾರೆ.

ಎಂ. ಚಿದಾನಂದ ಮೂರ್ತಿ:- ಅವರ ಪ್ರಕಾರ ವಚನಗಳು ಯಾವುದೇ ಹೊರಗಿನ ಮಾದರಿಯನ್ನು ಅನುಸರಿಸಿ ಅಥವಾ ಅನುಕರಿಸಿ ಹುಟ್ಟಿದವಲ್ಲ ಪರಿಸರದ ಒತ್ತಡ ಅಥವಾ ಅಗತ್ಯದ ಅನಿವಾರ್ಯತೆಯಿಂದಾಗಿ ಸಾಮಾನ್ಯ ಜನತೆಗೆ ಸಮೀಪವಾದ ಮತ್ತು ಪ್ರೀಯವಾದ ತ್ರಿಪದಿ, ಚೌಪದಿ ಮುಂತಾದ ಪದ್ಯಬಂದಗಳ ಒಗಟು ಗಾದೆಗಳ ಪ್ರಭಾವಗಳಿಂದ ಆ ಪ್ರಕಾರ ಒಂದು ರೂಪವನ್ನು ಪಡೆದುಕೊಂಡಿತು ಹೀಗಾಗಿ ವಚನಕಾರರೇ ವಚನ ಸಾಹಿತ್ಯದ ಮೊದಲಿಗರು.

ವಚನಗಳು ಹೇಗೆ ಹುಟ್ಟಿದವು ಎನ್ನುವಷ್ಟೇ ಜಟಿಲ. ಅವು ಯಾವಾಗ ಹುಟ್ಟಿದುವು ಎಂಬ ಪ್ರಶ್ನೆ ಬಸವಣ್ಣನ ಕಾಲದಲ್ಲಿ ಪ್ರಮುಖ ಪ್ರಕಾರವಾಗಿ ಮೆರೆದ ಈ ವಚನ ರೂಪ ಅವನಿಗಿಂತ ಮೊದಲೇ ಜನ್ಮ ತಾಳಿತ್ತು ಎನ್ನಲು ಆದಾರಗಳಿವೆ.

ಸು.೧೧೫೦ ರಲ್ಲಿದ್ದ ಜೇಡರ ದಾಸಿಮಯ್ಯನೇ ಇದರ ಮೊದಲ ಹರಿಕಾರನೆಂದು ತಿಳಿದಿದ್ದ ಅಭಿಪ್ರಾಯ ಈಗ ಬದಲಾಗಿದೆ. ಈಗ ಆತನ ಕಾಲ ೧೧೪೦ ಎಂದಾಗದೆ! ಅವನ ವಚನಗಳೆಲ್ಲೆ ಆದ್ಯರ ವಚನಗಳ ಉಲ್ಲೇಖ ದೊರಕುತ್ತದೆ ನಿಮ್ಮ ಶರಣರ ಸೂಳ್ನುಡಿಯ ಬಂದೆರಗಳಿಗೆ ಇತ್ತಡೆ ನಿಮ್ಮನಿತ್ತ ಸುಮಾರು ೧೧೩೦ ರಲ್ಲಿದ್ದರು. ಎಂದು ತಿಳಿಯಲಾಗಿರುವ ಮಾದರಚನ್ನಯ್ಯ ಡೊಹರ ಕಕ್ಕಯ್ಯ ಇವರಿಗಿಂತ ಸ್ವಲ್ಪ ಮುಂಚೆ ವಚನ ರಚನೆಯಾಗಿರಬಹುದೆಂದು ತಿಳಿಯಲಾಗಿದೆ. ಪಂಪ ಪೂರ್ವದಲ್ಲಿಯೇ ವಚನದ ಉಗಮವನ್ನು ಕೆಲವು ಪಂಡಿತರು ಊಹಿಸುತ್ತಾರೆ.

ವಚನದ ರೂಪ :

"ವಚನಗಳ ದಾಟಿ ಪದ್ಯದಷ್ಟು ಜಿಗಿಯಲ್ಲ ಸಾಮಾನ್ಯ ಗದ್ಯದಷ್ಟು ಸಡಿಲವೂ ಅಲ್ಲ" ಸೂಕ್ಷ್ಮವಾಗಿ ವಿಚಾರಿಸಿದರೆ ಗದ್ಯ ಪದ್ಯದ ನಡುವಿನ ಒಂದು ಮಾದರಿ

ಇಷ್ಟೇ ಪದ ಇಂಥದ್ದೇ ಗಣವೆಂಬ ನಿಯಮವಿಲ್ಲದೆ ಅಂಶಗಣ ಅಥವಾ ಮಾತ್ರಾಗಣ ಭಾವಕ್ಕೆ ತಕ್ಕಂತೆ ಹಿರಿದಾಗಿ ಕಿರಿದಾಗಿ ಒದಗುತ್ತದೆ. ಈ ವಚನಗಳನ್ನು ಹಾಡುವ ದಾಟಿಯಲ್ಲಿ ಬರೆದರೆ? ಹಾಡುತ್ತಿದ್ದರೆ? ಎಂಬ ಊಹೆಗೆ ಅವಕಾಶವಿದೆ. ಬಸವಣ್ಣನು ಆನು ಒಲಿದಂತೆ ಹಾಡುವೆ ಎಂದಿದ್ದಾನೆ. "ಅರವತ್ತೆಂಟು ಸಹಸ್ರ ವಚನಗಳ ಹಾಡಿಹಾಡಿ ಸೋತಿತೆನ್ನ ಮನ ನೋಡಯ್ಯ" ಎಂದು ಸಿದ್ಧರಾಮ ಹೇಳುತ್ತಾರೆ. 'ಗೀತಮಂ ಪಾಡೆ' ಎಂದು ಹರಿಹರ ಬಸವರಾಜ ದೇವರ ರಗಳೆಯಲ್ಲಿ ಬರೆಯುತ್ತಾನೆ. ಆದರೆ ವಚನಗಳು ಗೀತ ಜಾತಿಗೆ ಸೇರಿದವುಗಳಲ್ಲಿ ಅವು ಸೂಕ್ಷ್ಮ ಸ್ವಚ್ಛಂದ ಲಯದ ಗದ್ಯಕವನಗಳು ಶರಣರ ಈ ಅನುಭಾವಗದ್ಯದಲ್ಲಿ ಭಾವಗೀತೆಯ ಮೂಲ ಪ್ರೇರಣೆಯಿದೆ ಆದರೆ ನಿಯತ ಛಂದಸ್ಸಿನ ಇಲ್ಲವೆ ತಾಳಲಯದ ಯೋಚನೆ ಇಲ್ಲ ಪದ್ಯದ ಸೊಗಸನ್ನೂ ಗದ್ಯದ ವಿಚಾರ ಸರಣಿಯನ್ನು ತುಂಬಿಕೊಂಡು ಲಯಬದ್ಧಪಟಸ್ಥಲ ಸ್ಪಟಿಕ ಶಲಾಕೆಗಳು ಈ ವಚನಗಳು ಶರಣರು ತಮ್ಮ ಪರಿಸರದೊಂದಿಗೆ ಸ್ಪಂದಿಸಿದ ಕ್ರೀಯೆಯ ಫಲವೇ ವಚನಗಳು ಅವು ಮೂಲತಃ ಪ್ರತಿಭಟನಾತ್ಮಕವಾಗಿವೆ. ಅವುಗಳ ಒಟ್ಟು ಉದ್ದೇಶವೇ ನವ ಸಮಾಜವೊಂದರ ನಿರ್ಮಾಣ ವಚನಗಳ ಮೂಲಕ ಇವರು ಆ ಕಾಲದ ಇಡಿ ಜನಜೀವನವ ಸಿಳಿ ಕಲುಕಿದರು ಅವರಿಗೆ ತಿಂದೋಲನ ವೆಂದರೆ ಹೊಸ ಜೀವನ; ಹೊಸ ಜೀವನವೆಂದರೆ ಜನ ಆಲೋಚಿಸುವಂತೆ ಮಾಡಬೇಕಾದರೆ ಆತ್ಮ ವಿಶ್ವಾಸ ಮೂಡಿಸಬೇಕು ದೇವಸ್ಥಾನಗಳ ನಿರಾಕರಣೆ ಎಲ್ಲಾ ಜಾತಿ ಒಂದೇ ಎಂಬ ಅರಿವು ಸಮಯ ಬಂದರೆ ಪ್ರಭುತ್ವವನ್ನು ಧಿಕ್ಕರಿಸುವುದು ಇಂಥ ವಿಚಾರಗಳು ಹಳೆಯ ಪರಂಪರೆಗೆ ಸಿಡಿಮದ್ದಾಗಿ ಪರಿಣಮಿಸಿದವು ಇಡೀ ವ್ಯವಸ್ಥೆಯೇ ಬೇರುಸಹಿತ ಅಲುಗಾಡುವಂತಾಯಿತು. ಹೊಸ ಚೈತನ್ಯ ಮೂಡಿತು ಈ ಆತ್ಮ ವಿಶ್ವಾಸದ ಫಲವಾಗಿಯೇ ಅತ್ಯಂತ ಸಾಮಾನ್ಯ ವರ್ಗದ ಜನ ನಾನಾ ಬಗೆಯ ಕೆಲಸಗಾರರು ನೂರಾರು ಪುರಷರು ಸ್ತ್ರೀಯರು ಸಾಮೂಹಿಕವಾಗಿ ವಚನ ಪ್ರಕ್ರಿಯೆಯಲ್ಲಿ ಪಾಲುಗೊಂಡರು. ಒಂದು ವಿಧದಲ್ಲಿ ವಚನವೂ ಸಾಮೂಹಿಕ ಅಭಿವ್ಯಕ್ತಿ.

ವಚನವು ಒಂದು ಆದ್ಯಾತ್ಮಶಾಸ್ತ್ರ ಸಂಸ್ಕೃತದಲ್ಲಿದ್ದ ಈ ಶಾಸ್ತ್ರಕ್ಕೆ ಜನವಾಣಿಯನ್ನು ಕೊಟ್ಟವರು ವಚನಕಾರರು. ಆದ್ಯಾತ್ಮ, ಧರ್ಮ, ನೀತಿ, ದೇವರು ಮುಂತಾದ ತತ್ವಗಳನ್ನು ಸುಲಭ ನುಡಿಗಳಲ್ಲಿ ನಿರೂಪಿಸಿ ಕನ್ನಡದ ಉಪನಿಷತ್ತುಗಳೆಂದು ವಚನಗಳನ್ನು ಸಾರ್ಥಕಗೊಳಿಸಿದರು. ಮಾನವ ಪ್ರೇಮ, ನೀತಿ ನಿಷ್ಠೆ, ಶಿವಭಕ್ತಿ ಸಮಾನಭಾವ ಆತ್ಮ ಪರಿವಿಕ್ಷಣೆ ಮುಂತಾದ ಭಾವಗಳಿಂದ ತುಂಬಿದ ಹೊಸ ಸಮಾಜವನ್ನು ವ್ಯವಸ್ಥೆಗೊಳಿಸುವುದು ಅದರ ಉದ್ದೇಶವಾಗಿತ್ತು. ಇದಕ್ಕೆ ಮಾದರಿಯಾಗಿ ಅನುಭವ ಮಂಟಪ ನಿರ್ಮಿಸಿ ನುಡಿದಂತೆ ನಡೆದರು. ಎಂದೇ ವಚನಗಳು ನಡೆದು ತೋರಿದ ನುಡಿಗಳು.

– ಡಾ. ಅಕ್ಕನಾಗಮ್ಮ ಎನ್. ಕಪೂರ

ಸೇಡಂ

ಚಂದ್ರಪ್ಪ ಹೆಬ್ಬಾಳಕರವರ ಸಾಹಿತ್ಯಿಕ ಕೊಡುಗೆ

ಕರ್ನಾಟಕದ ಮುಕುಟವಾಗಿರುವ ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನ ಬೇಮಳಖೇಡ ಗ್ರಾಮದಲ್ಲಿ ಅತ್ಯಂತ ಕಡುಬಡುತನದ ದಲಿತ ಕುಟುಂಬದಲ್ಲಿ ಜನಿಸಿ ಉರಿಲಿಂಗಪೆದ್ದಿ ಮಠದ ಪ್ರಭಾವಳಿಯಲ್ಲಿ ಬೆಳೆದು ಕನ್ನಡ ಸಾರಸ್ವತ ಲೋಕಕ್ಕೆ ತನ್ನದೆಯಾದ ಕೊಡುಗೆಯನ್ನು ಕೊಡುವುದಲ್ಲದೆ, ಜಾನಪದ ಸಂಸ್ಕೃತಿಯಲ್ಲಿ ಆಸಕ್ತಿಹೊಂದಿ ಜಾನಪದದ ಅನೇಕ ಕ್ಷೇತ್ರಗಳಿಗೆ ಮಹತ್ವವಾದ ಸೇವೆ ಸಲ್ಲಿಸುವುದರ ಮೂಲಕ ಚಂದ್ರಪ್ಪ ಹೆಬ್ಬಾಳಕರವರು ಈ ಭಾಗದ ಜಾನಪದ ವಿದ್ವಾಂಸರೆಂದೇ ಗುರುತಿಸಿಕೊಂಡಿದಾರೆ.

ಶಿಕ್ಷಣ ಇಲಾಖೆಯಲ್ಲಿ ಶಾಲಾಶಿಕ್ಷಕರಿಂದ ಕ್ಷೇತ್ರ ಶಿಕ್ಷಣಾಧಿಕಾರಿಯವರೆಗೆ ವಿವಿದ ಹುದ್ದೆಗಳನ್ನು ಅಲಂಕರಿಸಿ ಸೇವೆಗೈದ ಇವರು ದೇಶಿ ಸಂಸ್ಕೃತಿಯ ಆರಾಧಕರು, ವಿಚಾರವಾದಿಗಳು, ಸಾಮಾಜಿಕ ವೈಜ್ಞಾನಿಕ ಕ್ಷೇತ್ರಗಳಿಗೆ ತನ್ನದೆಯಾದ ವಿಶಿಷ್ಟ ಸೇವೆ ಸಲ್ಲಿಸಿರುವಂತದ್ದು.

ಅಪಾರ ಶಿಷ್ಯ ಬಳಗ ಹೊಂದಿದ ಚಂದ್ರಪ್ಪ ಹೆಬ್ಬಾಳಕರವರು ತಾವು ಬರವಣಿಗೆಯಲ್ಲಿ ತೊಡಗಿಕೊಂಡಿದಲ್ಲದೆ ಯುವ ಕವಿಗಳನ್ನು, ಸಾಹಿತಿಗಳನ್ನು ಪ್ರೋತ್ಸಾಹಿಸಿ ಬೆನ್ನುತಟ್ಟಿ ಬೆಳೆಸುವ ಕಾರ್ಯವು ಇವರಿಂದ ಅನಾವರತ ನಡೆದೆಯಿದೆ. ಸಾಹಿತ್ಯಿಕವಾಗಿ, ಶೈಕ್ಷಣಿಕವಾಗಿ ತುಂಬಾ ಹಿಂದುಳಿದ ಹೈದ್ರಾಬಾದ್ ಕರ್ನಾಟಕದ ಜಿಲ್ಲೆಗಳಲ್ಲಿ ಒಂದಾದ "ಬೀದರನಲ್ಲಿ ಸಾಹಿತ್ಯಿಕ ಕಂಪು ಹರಡಿರುವುದರಲ್ಲಿ ಚಂದ್ರಪ್ಪ ಹೆಬ್ಬಾಳಕರವರ ಪಾತ್ರ ಹಿರಿಯದು" ಎಂದು ಸಾಹಿತಿಗಳಾದ ಜಗನ್ನಾಥ ಹೆಬ್ಬಾಳೆ ಹೇಳಿರುವ ಮಾತು, ಸಾಹಿತ್ಯಕ್ಕೆ ಇವರು ನೀಡಿರುವ ಸೇವೆಯ ಮಹತ್ವವನ್ನು ಸಾರುವಂತಿದೆ.

'ಮಾಡುವಂತಿರಬೇಕು, ಮಾಡದಂತಿರಬೇಕು
ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು'

ಎಂಬ ಮನೋಭಾವದಂತೆ ಅವರ ಬದುಕು ಕೂಡ. ನಿಸ್ವಾರ್ಥ ಸೇವೆ, ನಿಗರ್ವ ವ್ಯಕ್ತಿತ್ವ, ನಿಶ್ಚಲ ಮನಸ್ಸು ಮಾಡಿಯು ಮಾಡದಂತೆ, ಇದ್ದೂ ಇಲ್ಲದಂತೆ ಸ್ಥಿತಪ್ರಜ್ಞರಾಗಿರುವ ಚಂದ್ರಪ್ಪ ಹೆಬ್ಬಾಳಕರವರ ಸಾಹಿತ್ಯಿಕ ಕೊಡುಗೆಯೂ ಅಷ್ಟೇ ವೈವಿಧ್ಯಮಯವಾಗಿದೆ.

ಲೇಖಕರು ತುಂಬಾ ವಿಳಂಬವಾಗಿ ತಮ್ಮನ್ನು ಬರವಣಿಗೆಯಲ್ಲಿ

ತೊಡಗಿಸಿಕೊಂಡಿರುವ ಕಾರಣದಿಂದಾಗಿ ಕೃತಿಗಳ ಸಂಖ್ಯೆ ಕಡಿಮೆಯಾದರೂ ಸತ್ವದಲ್ಲಿ ಘನತೆಯನ್ನು ಗಳಿಸಿರುವುದು ಗಮನಾರ್ಹ ವಿಷಯವಾಗಿದೆ. ೨೦೦೬ರಲ್ಲಿ ತೀರಾ ಇತ್ತೀಚಿಗೆ ತಮ್ಮ ಚೊಚ್ಚಲ ಕೃತಿ 'ಚಿಂತನ ಲಹರಿ' ಪ್ರಕಟವಾಗಿರುವಂತಹದ್ದು.

ಕನ್ನಡದಲ್ಲಿ ವೈಚಾರಿಕ ಸಾಹಿತ್ಯ ತಲೆಯತ್ತಿದ್ದು ಇತ್ತೀಚಿಗೆ ಓದುಗನ ಮನಸ್ಸಿಗೆ ವೈಚಾರಿಕ ಸ್ಫೂರ್ತಿ ನೀಡುವ ಚಿಂತನಾಬರಹಗಳು ಮಾನವನ ಭಾವವಿಕಾಸಕ್ಕೆ ಏಣಿಯಾಗಬಲ್ಲವು. ಆಧುನಿಕ ಅವಸರದ ಬದುಕಿನಲ್ಲಿ ಬಹುಜನರಿಗೆ ದೀರ್ಘ ಪ್ರಬಂಧಗಳನ್ನು ಓದಿ ಅವುಗಳ ಸಾರ ಸಂಗ್ರಹಿಸುವ ವ್ಯವಧಾನವಿಲ್ಲ. ಇಂತಹ ಸಂದರ್ಭದಲ್ಲಿ ವೈಚಾರಿಕ ಕಿರು ಚಿಂತನೆಗಳು, ಪ್ರಬಂಧಗಳು, ಕ್ಯಾಪ್ಸೂಲದಂತೆ ಕೆಲಸಮಾಡಬಲ್ಲವು. ಲೇಖಕರ ಈ ಕೃತಿಯಲ್ಲಿನ ಪ್ರಬಂಧಗಳು ಒಳ್ಳೆಯ ಬದುಕಿಗೆ ಇಟ್ಟ ಏಣಿಯ ಮೆಟ್ಟಿಲುಗಳು ಇವು ಮೌಲಿಕ ಮತ್ತು ವೈಚಾರಿಕತೆಯ ಸ್ಪರ್ಶ ನೀಡಿವೆ. ಇದು ಇವರ ಚೊಚ್ಚಲ ಕೃತಿಯಾದರೂ ಅನುಭವ ಮೂಸೆಯಿಂದ ಬಂದ ಪರಿಪಕ್ವ ರಸಪಾಕದಂತಿದೆ.

ಒದು ಬರಹದ ಶಿಕ್ಷಣಕ್ಕಿಂತಲೂ ಜೀವನದಲ್ಲಿ ನೈತಿಕ ಮೌಲ್ಯ ಮುಖ್ಯವೆಂದು ಹೇಳಿದ ಲೇಖಕರು ಶಿಸ್ತು, ಸಂಯಮ, ಸಮಯ ಪಾಲನೆ, ಕರ್ತವ್ಯ ಪ್ರಜ್ಞೆ, ನಿಷ್ಠೆ, ದೇಶಭಕ್ತಿ ಮತ್ತು ಸಮಾನತೆ ಈ ಮುಂತಾದ ಮಾನವೀಯತೆಯನ್ನು ಕಲಿಸಲಾರದ ಶಿಕ್ಷಣ ಪರಿಪೂರ್ಣ ಶಿಕ್ಷಣವಲ್ಲವೆನ್ನುವದು ಸತ್ಯ ಬಹುಶ: ಇಂದಿನ ಸಮಾಜದಲ್ಲಿ ತಾಂಡವಾಡುತ್ತಿರುವ ಭ್ರಷ್ಟಾಚಾರ, ಮೋಸ, ವಂಚನೆ, ಅಧರ್ಮ, ಅನ್ಯಾಯ, ಅನೀತಿಯಂತಹ ಕ್ರೌರ್ಯಗಳು ಕಂಡ ಲೇಖಕರು ಈ ಮಾತಾಡಿದಂತೆ ವೇದ್ಯವಾಗುತ್ತದೆ. ಈ ಕೃತಿಯಲ್ಲಿ 'ಕಾಯಕವೇ ಜೀವನ–ಆಲಸ್ಯವೇ ಮೃತ್ಯು', ಕುವೆಂಪುರವರ 'ಪಂಚಮಂತ್ರಗಳು–ಸಪ್ತ ಸೂತ್ರಗಳು', ವಿಚಾರ ಲಹರಿ, ಕುಟುಂಬ ಶಿಕ್ಷಣ, ಮೌಲ್ಯ ಶಿಕ್ಷಣ, ಮತ್ತು ಮಕ್ಕಳು ಸಾಹಿತ್ಯದ ಸೃಷ್ಟಿ ಹಾಗೂ ದೃಷ್ಟಿ ವಚನ ಮತ್ತು ದಲಿತ ಸಾಹಿತ್ಯದಲ್ಲಿ ಬಂಡಾಯ ಮುಂತಾದ ೧೪ ಪ್ರಬಂಧಗಳು ವಿಶಿಷ್ಟ ವೈವಿಧ್ಯಮಯ ವಿಷಯ ಹೊಂದಿ ಮಾನವೀಯ ಮೌಲ್ಯಗಳು ಉದ್ದೀಪನಗೊಳಿಸುವಂತಹ ರಸಪಾಕದಂತೆ ತೋರುತ್ತವೆ

ಜೀವನ ಮೌಲ್ಯ ದೀಪಿಕೆ:

ಆದರ್ಶ ಪ್ರಿಯರಾದ ಅನೇಕಾನೇಕ ಮಹಾಪುರುಷರು, ಧರ್ಮಗುರುಗಳು, ಜ್ಞಾನಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವ ಮಹತ್ತರವಾದ ಮೌಲ್ಯಗಳನ್ನು ಈ ಶತಮಾನದ

ನಾಗರೀಕರು ದಿಕ್ಕರಿಸೋದು ಉತ್ತಮ ಮಾರ್ಗದರ್ಶನದ ಕೊರತೆ ಟಿ.ವಿ. ಮತ್ತು ಮೊಬೈಲ್ ಸಂಸ್ಕೃತಿಯ ಹಾವಳಿಯಿಂದಾಗಿ ಮಕ್ಕಳು. ಯುವಕರೂ ದಾರಿ ತಪ್ಪುತ್ತಿರುವುದನ್ನು ಸೂಕ್ಷ್ಮವಾಗಿ ಅವಲೋಕಿಸಿ ಖೇದಗೊಂಡು ಅಂತಹ ಮೌಲ್ಯಗಳ ಹಿನ್ನೆಲೆಯಲ್ಲಿ ಪತ್ಯಕ್ರಮ ಅಳವಡಿಸದೆ ಇರುವುದನ್ನು ಗಮನಿಸಿ ಲೇಖಕರು ಬೋಧನೆಗೆ

ಪೂರಕವಾದ ಮತ್ತು ಶಿಕ್ಷಕನಿಗೆ ಅನುಕೂಲವಾಗುವ ರೀತಿಯಲ್ಲಿ ಸತ್ಯ, ಅಹಿಂಸೆ, ತ್ಯಾಗ, ಶಾಂತಿ, ದಾನ, ತಾಳ್ಮೆ, ಕೃತಜ್ಞತೆ, ಅನುಕಂಪ ಆತ್ಮವಿಶ್ವಾಸ, ಪ್ರಜ್ಞೆ, ಶೀಲ, ಕರುಣೆ, ಅಭಯದಾನ, ಸತ್ಸಂಗ ಇತ್ಯಾದಿಯಾಗಿ ಮೂವತ್ತು ಜೀವನ ಮೌಲ್ಯಗಳನ್ನು ಆಯ್ದು ಪ್ರತಿ ಮೌಲ್ಯಗಳಿಗೂ ಮಹಾಪುರುಷರ, ಮಹನೀಯರ, ವಿಜ್ಞಾನಿಗಳ, ದೇಶಭಕ್ತರ ಉದಾಹರಣೆ, ಅವರ ಜೀವನದಲ್ಲಿ ಘಟಿಸಿರುವ ಘಟನೆಗಳನ್ನು ಆಧರಿಸಿ ಅದಕ್ಕೆ ಕಥಾರೂಪವನ್ನು ತೋಡಿಸಿದ ಈ ಕೃತಿ ಮೌಲ್ಯಗಳನ್ನು ಹೊಂದಿದ ಅತ್ಯಮುಲ್ಯ ಕೃತಿಯಾಗಿ ಯುವಕರಿಗೆ, ಮಕ್ಕಳಿಗೆ ದಾರಿದೀಪವಾಗುವ ಸತ್ವಯುತ ಕೃತಿಯಾಗಿದೆ.

ಪ್ರೀತಿ:

ಪ್ರೀತಿ ಕವನ ಸಂಕಲನವು ಚಂದ್ರಪ್ಪ ಹೆಬ್ಬಾಳಕರವರು ತಮ್ಮ ಮಗಳು ಸುಮನ್ ಹೆಬ್ಬಾಳಕರರೊಂದಿಗೆ ಸೇರಿ ಸಂಕಲಿಸಿದ ೬೩ ಕಾವ್ಯ ಮತ್ತು ೩೪ ವಚನಗಳ ಗುಚ್ಛವಾಗಿದೆ. ಇದು ಕವಿ ಅನುಭವದ ಭಾವಸಂಗಮ. ಇಲ್ಲಿ ಕನ್ನಡಪ್ರೇಮ, ದೇಶಭಕ್ತಿ, ರಾಜಕೀಯ ವಿಡಂಬನೆ, ಸಮಾನತೆ, ಪರಿಸರ ಪ್ರಜ್ಞೆ ಚಿತ್ರಗೊಂಡು ತಮ್ಮ ಅನುಭವಗಳನ್ನು, ಆಶಾವಾದಿತ್ವವನ್ನು ಅತ್ಯಂತ ಸರಳವಾಗಿ ಕಾವ್ಯದಲ್ಲಿ ಎರಕಹೊಯ್ದು ಸಂಗತಿ ಪ್ರತಿ ಕಾವ್ಯವನ್ನು ಓದಿದಾಗ ವೇದ್ಯವಾಗುವಂತಹುದು. ತಮ್ಮ ಸುತ್ತಲಿನ ವಿಕೃತ ಮನಸ್ಸುಗಳು, ಭ್ರಷ್ಟಾಚಾರದ ತಕಧಿಮ ತಾ ಎಂದು ನರ್ತಿಸುವ ಸಂದರ್ಭವನ್ನು 'ಮರೆತುಹೋಯಿತು ನಿನ್ನ ರಾಮರಾಜ್ಯ ನಡೆದಿದೆ ಲಂಚದ ಸಾಮ್ರಾಜ್ಯ' ಎಂದು ('ನಿನ್ನ ಭಕ್ತರ ಗಾಂಧಿ ನೋಡೋ') ಕವಿತೆಯಲ್ಲಿ ವಿಡಂಬಿಸುವುದನ್ನು ಕಾಣುತ್ತೇವೆ. ನಿಯಮವೇ ಹಾಗೆಯೂ ಏನೋ, ಶಬ್ಬಕ್ಕೆ ರೆಕ್ಕೆಗಳುಳ್ಳ ಹಕ್ಕಿಗಳು ಹಾರಿ ಹೋಗಿ ರೆಕ್ಕೆಯಿಲ್ಲದ ಮೀನುಗಳು ಸತ್ತಂತೆ. 'ಎಲ್ಲೆಲ್ಲೂ ಸತ್ತವರು ಬಡವರು' (ಎಚ್ಚರ) ರಾಜಾರೋಷವಾಗಿ ಮೆರೆಯುತ್ತಿರುವ ಇಂದಿನ ರಾಜಕೀಯ ಅರಾಜಕತೆಯ ತುಳಿತಕ್ಕೆ ಬಡವರ ಬದುಕು ಮುರುಟಿ ಹೋಗುವುದನ್ನು ಈ ಕೃತಿಯ ಕವನವೊಂದು ಎಚ್ಚರಗೊಳ್ಳಲು ಪ್ರೇರಣೆ ನೀಡುತ್ತದೆ. ಈ ರೀತಿಯಾಗಿ ಉತ್ತಮವಾದ ಅನೇಕ ವಸ್ತುಗಳು ಹೊಂದಿದ ಕವಿತೆಗಳು ಇವರಲ್ಲಿ ಅಡಕಗೊಂಡು ಈ ಸಂಕಲನದ ಮೌಲ್ಯವನ್ನು ಹೆಚ್ಚಿಸಿವೆ.

ಬೀದರ ಜಿಲ್ಲೆಯ ದಲಿತ ಕವಿ ಕಾವ್ಯ:

ತತ್ವಪದಕಾರರು, ರಂಗಕಲಾವಿದರು, ಸಂಗೀತಗಾರರಿಂದ ಹಿಡಿದು ಇಂದಿನ ಕವಿ, ಸಾಹಿತಿ, ಪಿಹೆಚ್.ಡಿ ಪದವೀಧರರವರೆಗಿನ ನೂರಾರು ಜನ ದಲಿತಚಿಂತಕರ ವ್ಯಕ್ತಿ ಚಿತ್ರಗಳ ಸಂಕಲನವಾಗಿದೆ. ಬಹುಶ: ಈ ರೀತಿಯ ಪ್ರಯತ್ನ ಯಾವ ಜಿಲ್ಲೆಯಲ್ಲೂ ನಡೆದಿರಲಿಕ್ಕಿಲ್ಲ ಎಂಬುದು ನನ್ನ ಭಾವನೆ. ಇಂತಹ ಒಂದು ಮಹತ್ವದ ವಿಚಾರವುಳ್ಳ ಕೃತಿ ಲೇಖಕರ ಬಹು ಪರಿಶ್ರಮದ ಫಲ ಎಂದೇ ಹೇಳಬೇಕಾಗುತ್ತದೆ.

ಬೀದರ ಜಿಲ್ಲೆಯ ಮೋಹರಂ ಪದಗಳು:

ಚಂದ್ರಪ್ಪ ಹೆಬ್ಬಾಳಕರವರು ಕೇವಲ ಶಿಕ್ಷಣ ತಜ್ಞರಾಗಿ ಸಾಹಿತಿಯಾಗಿ

ಗುರುತಿಸಿಕೊಳ್ಳದೆ ಅಪ್ಪಟ ಜನಪದ ಜೀವಿಗಳು ಹೌದು. ಬೀದರ ಜಿಲ್ಲೆಯಲ್ಲಿ ಮಾತ್ರ ಕಂಡಬರುವ 'ಬುಲಾಯಿ ಹಾಡುಗಳು' ಇವರ ಮಧುರ ಕಂಠದಲ್ಲಿ ಕೇಳಿದರೆ ಎಂತಹವರು ತಲೆತೂಗದೆ ಇರಲು ಸಾಧ್ಯವಾಗಲಾರದು. ಅಷ್ಟೇ ಅಲ್ಲ ಕೋಲಾಟ, ಮದುವೆ, ಸೋಬಾನ ಪದಗಳು ಹಾಡಲು ನಿಂತರೆ ಕೇಳುವರು ಮೈಮರೆತು ನಿಲ್ಲುವಂತಾಗುವಷ್ಟು ಇಂಪಾಗಿ ಹಾಡುವ ಕಲೆ ಇವರಿಗೆ ಒಲಿದು ಬಂದಿರುವಂತಹದ್ದು. ಮೋಹರಂ ಪದಗಳು ಹಾಡುವಲ್ಲಿ ಜೊತೆಗೆ ಅದಕ್ಕೆ ತಕ್ಕಂತೆ ನೃತ್ಯ ಮಾಡುವಲ್ಲಿಯೂ ಎತ್ತಿದ ಕೈ. ಇಂತಹ ಹವ್ಯಾಸಿ ಹಾಡುಗಾರಿಕೆ ರೂಡಿಸಿಕೊಂಡಿದ್ದರಿಂದ ಅದರ ಮೇಲಿನ ಆಸಕ್ತಿಯಿಂದಾಗಿ ಅವರು ಬೀದರ ಜಿಲ್ಲೆಯ 'ಮೋಹರಂ' ಪದಗಳನ್ನು ಸಂಗ್ರಹಿಸಿ ಗ್ರಂಥರೂಪದಲ್ಲಿ ಹೊರತಂದಿದ್ದಾರೆ. ಇದರಲ್ಲಿ ಹಲವಾರು ಚರಿತ್ರೆ ಸಾರುವ ಕಥಾನಕ ಹೇಳಿದ 'ಸವಾಲ್-ಜವಾಬ' ನೀಡುವ ಹಾಡುಗಳು ವೈಜ್ಞಾನಿಕ ರೀತಿಯಲ್ಲಿ ಅಳವಟ್ಟಿವೆ. ಇದು ಹೆಬ್ಬಾಳಕರರು ಜಾನಪದ ಸಾಹಿತ್ಯಕ್ಕೆ ಕೊಟ್ಟ ಅತ್ಯಮುಲ್ಯ ಕೊಡುಗೆಯಾಗಿದೆ.

ಸತ್ಯ ಕಥಾನಕಗಳು:

ಕಥೆಗಾರರು ಸಾಮಾನ್ಯವಾಗಿ ಕಲ್ಪಿತಕಥೆ ಅಥವಾ ನೈಜ ಘಟನೆಗೆ ಒಂದಿಷ್ಟು ಕಲ್ಪನೆ ಸೇರಿಸಿ ಹದವಾಗಿ ಕಥೆ ಹೆಣೆದು ಓದುಗರ ಮನಸೆಳೆದರೆ, ಚಂದ್ರಪ್ಪ ಹೆಬ್ಬಾಳಕರವರು ತಮ್ಮೆದುರಿಗೆ ಘಟಿಸಿ ಹೋದ ಘಟನೆಗಳನ್ನು ಯಥಾರೀತಿಯಾಗಿ ಕಥೆಯ ರೂಪದಲ್ಲಿ ಹೆಣೆದಿಟ್ಟ ಈ ಸತ್ಯ ಕಥಾನಕ ಸಾರಸ್ವತ ಲೋಕಕ್ಕೆ ವಿನೂತನ ಪ್ರಯತ್ನವನ್ನು ಮಾಡಿರುವುದು ಪ್ರಶಂಸನಿಯವಾಗಿದೆ. ಇದರಲ್ಲಿನ ಕತೆಗಳ ನಾಯಕರೆಲ್ಲರು ಸಮಾಜದ ಕೆಳವರ್ಗಕ್ಕೆ ಸೇರಿದ್ದು ಪ್ರೀತಿ, ಪ್ರೇಮ, ನೋವು, ನಲಿವು ಏಳುಬೀಳುಗಳು, ಜಾತಿ ತಾರತಮ್ಯ ಇತ್ಯಾದಿ ಸಾರುವ ಕಥೆಗಳು ಕೆಳವರ್ಗದ ಬದುಕಿನ

ಚಿತ್ರಣವನ್ನು ತೆರೆದಿಡುತ್ತದೆ. ಅದರಲ್ಲೂ ಅಗಸಿ ಬಂಡಿಗಲ್ಲು, ಬಾಣಂತಿ ಬುರಜಿನಂತ ಕಥೆಗಳು ಓದುಗನ ಹೃದಯ ಆದ್ರಗೊಳ್ಳುವಂತೆ ಮೂಡಿಬಂದಿವೆ.

ಭೀಮಕವಿ ಶ್ರೀ ಮಾಣಿಕರಾವ ಜ್ಯೋತಿ:

ಶರಣ ನಾಡಿನ ಬೀದರಿನಲ್ಲಿ ಶರಣರ ಪ್ರಭಾವದಿಂದಾಗಿ ಮುಂದೆ ಹುಟ್ಟಿಬಂದ ತತ್ತ್ವಪದಕಾರರು ಅದೇ ಶರಣರ ಆಶಯವನ್ನು ಮುಂದುವರೆಸುತ್ತ, ಸಮಾಜದ ಓರೆ-ಕೋರೆಗಳನ್ನು ತಿದ್ದಲು ತಮ್ಮದೆಯಾದ ತಾತ್ವಿಕ ವಿಚಾರಗಳನ್ನು ಹಾಡಿನ ಮೂಲಕ ಹಾಡುತ್ತ ಜನಮಾನಸದಲ್ಲಿ ಭಕ್ತಿರಸ ತುಂಬುವ ಕಾರ್ಯ ಮಾಡುತ್ತ ಬಂದಿರುವ ಒಂದು ದೊಡ್ಡ ಪರಂಪರೆಯೇ ಇದೆ. ಅಂತಹ ತತ್ತ್ವಪದಕಾರರಲ್ಲಿ ಒಬ್ಬರಾದ ಮಾಗಿದ ಕವಿ ಬೀದರಿನ 'ಶ್ರೀ ಮಾಣಿಕರಾವ ಜ್ಯೋತಿ'ಯವರು. ಕಡು ಬಡತನದಲ್ಲಿ ಹುಟ್ಟಿದ 'ಭೀಮಕವಿ' ಎಂದೇ ಹೆಸರುವಾಸಿಯಾದ ಮಾಣಿಕರಾವ್ ಜ್ಯೋತಿಯವರು ಜೀದರ ಜಿಲ್ಲೆಯ ದಲಿತ ಸಮುದಾಯದ ತಾತ್ವಿಕ ಕವಿಗಳಲ್ಲಿ

ಒಬ್ಬರು. ಹಲವಾರು ತತ್ತ್ವಪದಗಳಲ್ಲದೆ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಕುರಿತು ದಲಿತವಾದದ ಕ್ರಾಂತಿಗೀತೆಗಳು ಬರೆಯುವುದರ ಜೊತೆಗೆ ಮಧುರ ಕಂಠದಿಂದ ಹಾಡುವ ಗಾಯಕರು ಹೌದು ತನ್ನ ಬದುಕಿನುದ್ದಕ್ಕೂ ಸರಳತೆ ಹಾಗೂ ತಾತ್ವಿಕತೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಈ ಭಾಗದ ಜನರಿಗೆ ಪ್ರಜ್ಞೆಯ ಬೆಳೆಸಿದ ಭೀಮಕವಿಯಂತವರ ಜೀವನ ಚರಿತ್ರೆ ಮತ್ತು ಅವರ ಹಾಡುಗಳು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿರುವುದು ಮತ್ತು ಅಂತಹ ಕವಿಗಳ ಬರವಣಿಗೆಯನ್ನು ಶಾಶ್ವತವಾಗಿ ಉಳಿಸಲು ಪ್ರಯತ್ನಿಸಿದ ಚಂದ್ರಪ್ಪ ಹೆಬ್ಬಾಳಕರವರ ಕಾರ್ಯ ಗಮನಾರ್ಹವಾದದ್ದು.

ಇದೇ ರೀತಿಯ 'ಶೇರ್-ಎ-ದಖನ್', 'ಬಿ.ಶ್ಯಾಮಸುಂದರ' ಎಂಬ ಕೃತಿಯೂ ಕೂಡ ದಲಿತರ ಏಳಿಗೆಗಾಗಿ ಶ್ರಮಿಸಿದ್ದ ದಲಿತರ ಮೇಲಾಗುವ ದೌರ್ಜನ್ಯವನ್ನು ಖಂಡಿಸಿ ಅದರ ವಿರುದ್ಧ ಹೋರಾಡಿ ನ್ಯಾಯವೊದಗಿಸಿದ ವ್ಯಕ್ತಿ ಬಿ.ಶ್ಯಾಮಸುಂದರ. ಇಂತಹ ಒಂದು ಮಹತ್ವದ ವ್ಯಕ್ತಿಯ ಜೀವನಗಾಥೆ ಸಾರಸ್ವತ ಲೋಕಕ್ಕೆ ಕೊಡುಗೆಯಾಗಿ ನೀಡಿದ್ದಾರೆ. 'ಬೀದರ ಜಿಲ್ಲೆಯ ಜಾನಪದ ಸೊಗಡು', 'ಉರಿಲಿಂಗಪೆದ್ದಿ ಪರಂಪರೆ', 'ಗೆಳೆತನ', 'ವೃಧ್ಯಾಪ', 'ದಲಿತೋದ್ಧಾರಕರು', 'ಬೀದರ ತಾಲೂಕಿನ ಪರಿಚಯ', 'ವಯೋವೃದ್ಧ' ಮುಂತಾದ ಇಪ್ಪತ್ತಕ್ಕೂ ಹೆಚ್ಚು ಕೃತಿಗಳು ಬರೆದಿದ್ದಾರೆ.

ಅಷ್ಟೇ ಅಲ್ಲದೆ ಲೇಖಕರು ಶರಣರ ಪ್ರಭಾವಕ್ಕೆ ಒಳಗಾಗಿ ವಚನಸಾಹಿತ್ಯದ ತಾತ್ವಿಕತೆಗೆ ತಲೆಬಾಗಿ ಅದರಂತೆ ಬದುಕಿ ಸ್ವತ: ವಚನ ರಚನೆಮಾಡಿ ಆಧುನಿಕ ವಚನಕಾರರ ಪಟ್ಟಿಯಲ್ಲಿ ಒಬ್ಬರಾಗಿ ತೋರುವಂತ ಮೇರು ವ್ಯಕ್ತಿತ್ವ ಹೊಂದಿದ ವ್ಯಕ್ತಿಯಾಗಿದ್ದಾರೆ.

ಇವರ ಶಿಕ್ಷಕ ಸೇವೆಯನ್ನರಸಿ ಸಾಹಿತ್ಯಿಕ ಕೊಡುಗೆಯನ್ನು ಗಮನಿಸಿ ಅನೇಕ ಪ್ರಶಸ್ತಿ ಬಂದಿವೆ. ಅವುಗಳಲ್ಲಿ ರಾಜ್ಯೋತ್ಸವ ಪ್ರಶಸ್ತಿ, ಶಿಕ್ಷಣ ಶ್ರೀ ಪ್ರಶಸ್ತಿ, ರಂಗಸನ್ಮಾನ ಪ್ರಶಸ್ತಿ, ಜಾನಪದ ಕಲಾ ಪ್ರಶಸ್ತಿ, ಕನ್ನಡ ಜಾಗೃತಿ ಪ್ರಶಸ್ತಿ, ಉರಿಲಿಂಗಪೆದ್ದಿ ಪ್ರಶಸ್ತಿ, ಸಾಹಿತ್ಯ ಪ್ರಶಸ್ತಿ, ರಾಜ್ಯಮಟ್ಟದ ಅನೇಕ ಜನಸೇವಾ ಸಾಹಿತ್ಯ ಪ್ರಶಸ್ತಿಗಳು ಮತ್ತು ರಾಷ್ಟ್ರಮಟ್ಟದ ಸನ್ಮಾನ ಹಾಗೂ ಅಭಿನಂದನೆಗಳು ದೊರೆತಿರುತ್ತವೆ.

ಹೀಗೆ ಚಂದ್ರಪ್ಪ ಹೆಬ್ಬಾಳಕರವರ ಪಕ್ವವಾದ ಜೀವನದಲ್ಲಿ ವೈವಿಧ್ಯಮಯವಾದ ವೃತ್ತಿಯಲ್ಲಿ ನಿರತರಾದಾಗ ಸಂಭವಿಸಿದ ಅನೇಕ ಕಹಿ ಅನುಭವಗಳ ಹಿನ್ನೆಲೆಯಲ್ಲಿ ಸಾಹಿತ್ಯ ರಚನೆಗೊಂಡಿರುವುದು ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ ತಿಳಿದು ಬರುತ್ತದೆ. ಮತ್ತು ಸಮಗ್ರ ಸಾಹಿತ್ಯ ಸಾರಸ್ವತ ಲೋಕಕ್ಕೆ ತನ್ನದೆಯಾದ ವಿಶಿಷ್ಟ ಕೊಡುಗೆ ನೀಡಿ ಚಿರಸ್ಮರಣೀಯವಾಗಿದೆ.

–ಜಗನಾಥ ಎ.ಮುತ್ತಂಗಿ, ಸಂಶೋಧನಾ ವಿದ್ಯಾರ್ಥಿ,
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಒಂಟಿಹಕ್ಕಿ

ನಾನೊಂದು ಒಂಟಿಹಕ್ಕಿ
ಆಗಿಹೆನು ಒಬ್ಬಂಟಿ
ಸಹೋದರತ್ವ ಕಂಡಿಲ್ಲ
ಹಂಚಿತಿನ್ನುವುದು ತಿಳಿದಿಲ್ಲ

ಅಪ್ಪ ಅಮ್ಮ ನನಗೆ ರೆಕ್ಕೆ
ಹಾರುತಿಹೆನು ಮನೆಯಲ್ಲೆ
ಅಜ್ಜಿತಾತ ಇಲ್ಲಿಲ್ಲ
ಒಂದೂರ ಕಥೆಯ ಕೇಳಿಲ್ಲ

ನಿಯಂತ್ರಿತ ಆಗಸದಿ ಹಾರುವಾಗ
ಪೂರ್ವಸೆಳೆವುದೊಂದು ರೆಕ್ಕೆ
ಪಶ್ಚಿಮ ಆಕರ್ಷಿಸುವುದಿನ್ನೊಂದು ರೆಕ್ಕೆ
ಕೊನೆಗೆ ಕಳಚಿತೊಂದು ರೆಕ್ಕೆ

ನೆತ್ತರದ ನೆರಳಿನಲ್ಲಿ
ಮನಸು ಬಿಕ್ಕಳಿಸುತಿದೆ
ಬಾನೆತ್ತರ ತಾಕುವಾಸೆ
ನುಚ್ಚುನೂರಾಗಿದೆ

ಹೊಸ ರೆಕ್ಕೆ ಆಗಮನದಿ
ಇದ್ದ ರೆಕ್ಕೆ ಮುಟಿಯುತಿದೆ
ಅದ ಅಪ್ಪಿಹಾರಲು
ಮನಸು ಒಪ್ಪದಾಗಿದೆ

ಕಳಚಿದ ರಕ್ಕೆ ಸೇರಲು
ಮನವು ಹಾತೊರೆಯುತಿದೆ
ಕಳೆದುಕೊಂಡ ಭಾವದಲ್ಲಿ
ಬದುಕು ಬೇರೆದಾರಿ ಹಿಡಿದಿದೆ

– ಕವಿತಾ ಗೋಪಿಕುಂಟೆ
ಬೆಂಗಳೂರು

ವಚನ ಸಾಹಿತ್ಯದಲ್ಲಿ ಕಾಯಕ ಮತ್ತು ದಾಸೋಹದ ಪರಿಕಲ್ಪನೆ

ಪೀಠಿಕೆ :

ವರ್ಣಾಶ್ರಮ ವ್ಯವಸ್ಥೆಯಲ್ಲಿ ವೇದ-ಪುರಾಣಗಳ ಅಧ್ಯಯನ, ಯಜ್ಞ, ಹೋಮ, ಹವನ ಮುಂತಾದ ಕಾರ್ಯಗಳು ಬ್ರಾಹ್ಮಣರಿಗೆ, ರಾಜಾಡಳಿತ, ಯುದ್ಧ, ದೇಶದ ರಕ್ಷಣಾ ಕಾರ್ಯ ಮುಂತಾದವುಗಳು ಕ್ಷತ್ರೀಯನಿಗೆ, ಕೃಷಿ, ಪಶುಪಾಲನೆ, ವ್ಯಾಪಾರ ವಹಿವಾಟು ಮುಂತಾದವುಗಳು ವೈಶ್ಯನಿಗೆ, ಇನ್ನು ಸತ್ತ ಪ್ರಾಣಿಗಳನ್ನು ಎಳೆಯುವುದು, ಸತ್ತ ಸುದ್ದಿಗಳನ್ನು ತಲುಪಿಸುವುದು, ಗೋರಿ ತೋಡುವುದು ಮುಂತಾದ ಹೀನಾಯ ಕನಿಷ್ಠತಮವಾದ ಕಾರ್ಯಗಳು ಶೂದ್ರನ ಪಾಲಿನವುಗಳಾಗಿದ್ದವು. ಹೀಗೆ ಆಯಾ ವರ್ಗದವರಿಗೆ ವರ್ಗೀಕರಿಸಲಾಗಿರುವ ಕೆಲಸಗಳನ್ನು ಅವು ತಮ್ಮ ಜವಾಬ್ದಾರಿ ಎಂದು, ಇವುಗಳನ್ನು ತಪ್ಪಿದರೆ ಶಿಕ್ಷೆಗೆ ಗುರಿಪಡಿಸಲಾಗುವುದು, ನರಕ ಪ್ರಾಪ್ತಿಯಾಗುತ್ತದೆ ಎಂಬಂತಹ ಅಂಧಶ್ರದ್ಧೆಯಲ್ಲಿ ಜೀವಿಸಬೇಕಾದ ಕಾಲ ಅದಾಗಿತ್ತು.

ಈ ವರ್ಣಾಶ್ರಮ ವ್ಯವಸ್ಥೆಯಲ್ಲಿ ದುಡಿಯುವವನಿಗಿಂತ ದುಡಿಸಿಕೊಳ್ಳುವವನೇ ಶ್ರೇಷ್ಠ ಎನಿಸಿಕೊಂಡಿದ್ದ. ದೇಹ ದಂಡಿಸಿ ಕಠೀಣ ಪರಿಶ್ರಮದಿಂದ ಎಷ್ಟೇ ಸಂಪತ್ತು ಸಂಪಾದಿಸಿದರೂ ಕೂಡ ಅದರ ಸುಖ ಅನುಭವಿಸುವ ಭಾಗ್ಯವಿಲ್ಲದೆ ನರಕಯಾತನೆ ಅನುಭವಿಸಬೇಕಾಗಿತ್ತು. ಪರಿಶ್ರಮ, ಪ್ರಮಾಣೀಕತೆ, ನಿಷ್ಠೆಗಳಿಗೆ ಯಾವ ಸ್ಥಾನ ಮಾನಗಳು ಇಲ್ಲದೇ ಹೋಗಿ ದುಡಿಯುವ ವರ್ಗದವರು(ಶೂದ್ರರು) ಎಂದರೆ ಅತ್ಯಂತ ಕನಿಷ್ಠರು ಎಂಬ ಸಂಪ್ರದಾಯ ವರ್ಣಾಶ್ರಮ ವ್ಯವಸ್ಥೆಯ ಸಮಾಜದಲ್ಲಿ ಬೇರೂರಿದ್ದವು. ಹೀಗಾಗಿ ಕೆಳವರ್ಗದವರ ದುಡಿಮೆಯ ಪ್ರತಿಫಲವನ್ನು ಮೇಲ್ವರ್ಗದವರು ದೇವರು, ಧರ್ಮ, ಭೂತ ಪಿಶಾಚಿಗಳು ಎಂಬ ಭಯ ಭಕ್ತಿಯ ಹೆಸರಿನಲ್ಲಿಯೂ, ರೂಢಿ-ಸಂಪ್ರದಾಯಗಳು, ಅಂಧಶ್ರದ್ಧೆಯಲ್ಲಿ ಮೋಸ ವಂಚನೆಗಳ ಮೂಲಕ ಕಸಿದುಕೊಂಡು ಯಾವುದೇ ಪರಿಶ್ರಮವಿಲ್ಲದೆ ತಿಂದು, ಉಂಡು-ಉಟ್ಟು ಸುಖಭೋಗ ಜೀವನ ನಡೆಸುತ್ತ ಬಡವರನ್ನು ಶೋಷಣೆಗೆ, ಅನ್ಯಾಯಕ್ಕೆ ಗುರಿಪಡಿಸುತ್ತಿದ್ದರು. ಹೀಗೆ ವೇದ-ಆಗಮಗಳ ಕಾಲ ಸಂದರ್ಭದಲ್ಲಿ ವರ್ಣವ್ಯವಸ್ಥೆಯ ಈ ಅನಿಷ್ಟ, ಅಮಾನವೀಯ ಕೊಳಕು ವ್ಯವಸ್ಥೆಯನ್ನು ಧಿಕ್ಕರಿಸಿ, ಕಾಯಕ ಮತ್ತು ದಾಸೋಹ ಎಂಬ ಪರಿಕಲ್ಪನೆಯ ಮೂಲಕವಾಗಿ ಸರ್ವರಿಗೂ ಸಮಾನ ಹಕ್ಕು, ಸರ್ವರಿಗೂ ಸಮಪಾಲು ಒದಗಿಸಿದ ಕೀರ್ತಿ ೧೨ನೇ ಶತಮಾನದ ಬಸವಾದಿ ಶಿವಶರಣರಿಗೆ ಸಲ್ಲುತ್ತದೆ.

ಬಸವಾದಿ ಶರಣರು ಈ ವರ್ಣ ವ್ಯವಸ್ಥೆಯ ಕರ್ಮಗಳನ್ನು ಮುರಿದು ತನು-ಮನ-ಭಾವಗಳು ಪ್ರತಿಯೊಬ್ಬರಿಗುಂಟು. ಆದ್ದರಿಂದ ಪ್ರತಿಯೊಬ್ಬ ಮನುಷ್ಯನು ತನುವಿನ ಪೋಷಣೆಗಾಗಿ ಕಾಯಕ, ಮನದ ವಿಕಾಸಕ್ಕಾಗಿ ಹಾಗೂ ಜ್ಞಾನಾರ್ಜನೆಗಾಗಿ ಅಧ್ಯಯನ, ಅನುಭಾವಿಗಳ ಸಂಗ; ಭಾವದ ತೃಪ್ತಿಗಾಗಿ ಭಕ್ತಿ, ಧ್ಯಾನ ಪೂಜೆಗಳು ಆಚರಿಸಲೇಬೇಕು ಎಂದು ಹೇಳಿ ಸರ್ವರಿಗೂ ಸಮಾನವಾದ ನ್ಯಾಯಯುತವಾದ ಆಚರಣೆಗಳನ್ನು ತಂದರು. ಹೀಗೆ ಕಾಯಕ ತತ್ವದ ಮೂಲಕ ಸಮಾಜದಲ್ಲಿನ ಕೆಲವೇ ಶ್ರೀಮಂತರಲ್ಲಿ ಮಾತ್ರ ಸಂಗ್ರಹಗೊಂಡಿರುವ ಸಂಪತ್ತಿನ ವಿಭಜನೆ ಮಾಡುವ ಮೂಲಕ ಆರ್ಥಿಕ ಸಮಾನತೆ, ಕಾಯಕವೊಂದು ಪರಿಶುದ್ಧವಾದ ವೃತ್ತಿಯಾಗಿದ್ದು, ಅದರಲ್ಲಿನ ಮೇಲು-ಕೀಳಿನ ಭೇದ ಭಾವ ಹೋಗಲಾಡಿಸುವ ಮೂಲಕ ಸಾಮಾಜಿಕ, ಧಾರ್ಮಿಕ ಸಮಾನತೆ ಹಾಗೂ ಪ್ರತಿಯೊಬ್ಬರಿಗೂ ಕಾಯಕ ಕಡ್ಡಾಯ ಎಂದು ಹೇಳುವ ಮೂಲಕ ರಾಜಕೀಯ ಸಮಾನತೆಯನ್ನು ತಂದು ಜಾತಿ, ವರ್ಣ, ವರ್ಗರಹಿತ ಸುಂದರ ಸಮಾಜ ನಿರ್ಮಿಸಿದವರು ಬಸವಾದಿ ಶಿವಶರಣರು.

ಕಾಯಕದ ಸ್ವರೂಪ ಮತ್ತು ಮಹತ್ವ :

ಕಾಯಕ ಎಂಬುದು ಅತ್ಯಂತ ಪರಿಶುದ್ಧವೂ ಪವಿತ್ರವೂ ಆದದ್ದಾಗಿದೆ. ಭಕ್ತಿ, ನಿಷ್ಠೆ, ಪ್ರಮಾಣಿಕತೆ, ಶ್ರದ್ಧೆ, ಕರ್ತವ್ಯ ಪ್ರಜ್ಞೆಯಿಂದ ತನು-ಮನ-ಭಾವ ಶುದ್ಧವಾಗಿರಿಸಿ ಮಾಡುವ ಯಾವುದೇ ಉತ್ತಮ ಹಾಗೂ ಜೀವಪರವಾದ ಕೆಲಸವನ್ನು ಕಾಯಕ ಎಂದು ಕರೆಯಲಾಗುತ್ತದೆ.

ಸೋಮಾರಿತನ, ಸಮಯ ವಂಚನೆ, ಕಳ್ಳತನ, ಮೋಸ, ವಂಚನೆ, ಕಡಿಮೆ ಕೆಲಸ ಅಧಿಕ ಪ್ರತಿಫಲದ ನಿರೀಕ್ಷೆ ಇಂತಹ ಯಾವ ಗುಣಗಳು ಕಾಯಕದಲ್ಲಿ ಸುಳಿಯಲಾರವು. ಮನುಷ್ಯ ತಾನು ಕೈಗೊಂಡ ಎಲ್ಲಾ ಕೆಲಸದಲ್ಲಿ ಇಂತಹ ಗುಣಗಳು ಇದ್ದೇ ಇರುತ್ತವೆ ಎಂದಾಗಲಿ, ಅಥವಾ ಇರುವುದೇ ಇಲ್ಲ ಎಂದಾಗಲಿ ಹೇಳಲಾಗುವುದಿಲ್ಲ. ಇಂತಹ ಕೆಟ್ಟ ಗುಣಗಳಿಲ್ಲದೆ ಪರಿಶುದ್ಧ, ಸತ್ಯ, ನಿಷ್ಠೆ, ಪ್ರಮಾಣಿಕತೆ ಗುಣಗಳಿಂದ ಕೂಡಿರುವುದು ಮಾತ್ರ ಕಾಯಕ ಎನಿಸಿಕೊಳ್ಳುತ್ತದೆ. ಆದ್ದರಿಂದ ಕಾಯಕ ಎಂಬುವುದು ಕೆಲಸ ಕರ್ತವ್ಯಗಳಿಂದ ಭಿನ್ನವಾಗಿದ್ದು, ಅತ್ಯಂತ ಉನ್ನತ ಸ್ಥಾನದಲ್ಲಿ ನಿಲ್ಲುತ್ತದೆ.

ಮನುಷ್ಯ ತನ್ನ ಜೀವನ ನಿರ್ವಹಣೆಗಾಗಿ ಯಾವುದಾದರೊಂದು ಕೆಲಸ ಮಾಡಲೇಬೇಕು. ಪ್ರಜೆಯಿಂದ ಪ್ರಧಾನಿಯವರೆಗೆ, ಸಾಮಾನ್ಯನಿಂದ ಅಸಮಾನ್ಯನವರೆಗೆ, ಸರಕಾರಿ, ಅರೆ ಸರಕಾರಿ, ಸಂಘ, ಸಂಸ್ಥೆ, ಕೃಷಿ, ಕೂಲಿಕಾರ್ಮಿಕ, ರಾಜಕೀಯ, ಧಾರ್ಮಿಕ, ಸಮಾಜಿಕ ಹೀಗೆ ಎಲ್ಲಾ ಕ್ಷೇತ್ರದವರು ಮಾಡುವುದು ಕೆಲಸ ಅಥವಾ ಕರ್ತವ್ಯ ಎಂದು ಕರೆಯಬಹುದೇ ಹೊರತು ಕಾಯಕ ಎಂದು ಹೇಳಲಾಗುವುದಿಲ್ಲ. ಕಾರಣ ಇಲ್ಲೆಲ್ಲಾ ತಮ್ಮ ವೃತ್ತಿಯ ಬಗ್ಗೆ ಭೇದ-ಭಾವಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಆದರೆ ಬಸವಾದಿ ಶರಣರಲ್ಲಿ ಕಾಯಕ ಯಾವುದೇ ಇರಲಿ ಅಲ್ಲಿ ಮೇಲು-ಕೀಳು, ಜಾತಿ-ಮತ-ಪಂಥ, ಹಿರಿಯ-ಕಿರಿಯ ಎಂಬ ಭೇಧಭಾವ

ಕಾಣುವುದಿಲ್ಲ. ಅನ್ಯರ ಶ್ರಮದ ಫಲವನ್ನು ಉಣ್ಣುವ ಪರಾವಲಂಬಿ ಬದುಕು ಒಳ್ಳೆಯದಲ್ಲ, ವ್ಯಕ್ತಿ ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಇನ್ನಿತರ ಯಾವುದೇ ಕ್ಷೇತ್ರದಲ್ಲಿ ಅವನು ಎಷ್ಟೇ ಎತ್ತರಕ್ಕೆ ಬೆಳೆದಿದ್ದರೂ ಸಹ ಗುರು-ಲಿಂಗ-ಜಂಗಮ ಎಲ್ಲರಿಗೂ ಕಾಯಕ ಕಡ್ಡಾಯವಾಗಿತ್ತು. ಅದಕ್ಕೆ ನಿದರ್ಶನವಾಗಿ ಶಿವಶರಣರು ಒಂದು ವಚನವನ್ನು ಇಲ್ಲಿ ಗಮನಿಸಬಹುದು.

ಕಾಯಕ ಕಡ್ಡಾಯ :

ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ
ಲಿಂಗವಾದರೂ ಕಾಯಕದಿಂದಲೇ ತನ್ನ ಶಿಲೆಯ ಕುರುಹು ಹರಿವುದು
ಜಂಗಮವಾದರೂ ಚರಸೇವೆ ಮಾಡಬೇಕು
ಲಿಂಗವಾದರೂ ಚರಸೇವೆ ಮಾಡಬೇಕು
ಜಂಗಮವಾದರೂ ಚರಸೇವೆ ಮಾಡಬೇಕು
ಇದು ಚಂದೇಶ್ವರ ಲಿಂಗದ ಅರಿವು ಕೇಳಾ ಪ್ರಭುವೆ

– ನುಲಿಯ ಚಂದಯ್ಯ

ಎಂದು ನುಲಿಯ ಚಂದಯ್ಯನವರು ಕಾಯಕ ಎಂಬುದು ಎಲ್ಲರಿಗೂ ಕಡ್ಡಾಯ ಎಂದು ಹೇಳಿರುವುದು ಗಮನಾರ್ಹವಾಗಿದೆ.

ಕಾಯಕ ನಿತ್ಯ ನೇಮ :

ಶಿವಶರಣರು ಕಾಯಕ ಎನ್ನುವುದು ಒಂದು ವ್ರತದಂತೆಯೂ, ನಿತ್ಯ ನೇಮದಂತೆಯೂ, ಯೋಗದಂತೆಯೂ ಸ್ವೀಕರಿಸಿದರು. ಕಾಯಕವಿಲ್ಲದ ದಿನವಂದು ಗುರು ಪೂಜೆ, ಲಿಂಗಪೂಜೆ, ಜಂಗಮ ಸೇವೆ, ದಾಸೋಹ ಯಾವವೂ ಸಲ್ಲುವುದಿಲ್ಲ. ಒಂದು ದಿನ ಕೆಲಸ ಮಾಡಿ ಅಧಿಕ ಕೂಲಿ ಸಂಪಾದಿಸಿ, ಅದರಿಂದ ಮುಂದಿನ ದಿನಗಳಲ್ಲಿ ನಡೆಸುವ ಜೀವನ ನಿರ್ವಹಣೆ, ಪೂಜೆ, ದಾಸೋಹ ಇವು ಯಾವವು ಒಪ್ಪುವುದಿಲ್ಲ. ಅಂದಂದಿನ ಕಾಯಕದಿಂದ ಅಂದಂದಿಗೆ ಬೇಕಾದಷ್ಟು ಸಂಪಾದಿಸಿ, ಅಂದಿನ ದಿನದ ಪೂಜೆ, ದಾಸೋಹ, ಪ್ರಸಾದಗಳು ನಡೆಯಬೇಕು. ಇದೇ ದೇವರಿಗೆ ಮೆಚ್ಚಿಕೆಯಾಗುತ್ತದೆ ಎಂಬ ಪರಿಕಲ್ಪನೆ ಶರಣರಲ್ಲಿ ಕಾಣುತ್ತೇವೆ. ಅನುಭಾವ ಮಂಟಪದಲ್ಲಿ ಶಿವಾನುಭವ ಗೋಷ್ಠಿಯಲ್ಲಿ ತೊಡಗಿದ ಮಾರಯ್ಯ ಶರಣರಿಗೆ ಸತಿ ಲಕ್ಕಮ್ಮನವರು ತಮ್ಮ ವಚನವೊಂದರಲ್ಲಿ ಹೀಗೆ ಎಚ್ಚರಿಸುತ್ತಾಳೆ;

ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ
ಭಾವ ಶುದ್ಧವಾಗಿ ಮಹಾಶರಣರ ತಿಪ್ಪೆಯ ತಪ್ಪಲ ಅಕ್ಕಿಯ ತಂದು
ನಿಶ್ಚಯಿಸಿ ಮಾಡಬೇಕು ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ
ಬೇಗ ಹೋಗು ಮಾರಯ್ಯ —ಆಯ್ದಕ್ಕಿ ಲಕ್ಕಮ್ಮ

ಕಾಯಕ ಎಂಬುದು ನಿತ್ಯ ನಿರಂತರ ನಡೆಯುವ ಕ್ರಿಯೆಯಾಗಿತ್ತು ಎಂಬುದು.

ಅಲ್ಲದೆ ಕಾಯಕದಲ್ಲಿ ನಿರತನಾದೊಡೆ ಲಿಂಗಪೂಜೆಯಾದರೂ ಮರೆಯಬೇಕು ಎಂಬ ಇನ್ನೊಂದು ವಚನ ಗಮನಿಸಿದಾಗ ಅನುಭಾವ ಗೋಷ್ಠಿ, ಪೂಜೆ ಪುನಸ್ಕಾರ ಮುಂತಾದವುಗಳಿಗಿಂತ ಕಾಯಕಕ್ಕೆ ಪ್ರಥಮ ಪ್ರಾಶ್ಯಸ್ತ್ಯ ನೀಡಿರುವುದು ಗಮನಾರ್ಹವಾಗಿದೆ.

ಕಾಯಕದಲ್ಲಿ ಸಂಗ್ರಹಣಾ ಬುದ್ಧಿ ಸಲ್ಲದ್ದು :

ಕಾಯಕ ಜೀವಿಗಳು ದಿನನಿತ್ಯದಲ್ಲಿ ಪರಿಶ್ರಮದಿಂದ ದುಡಿಯಬೇಕು, ದುಡಿಮೆಗೆ ತಕ್ಕಷ್ಟು ಮಾತ್ರ ಪ್ರತಿಫಲ ಪಡೆಯಬೇಕು. ದುಡಿಮೆಗಿಂತ ಹೆಚ್ಚಿನ ಪ್ರತಿಫಲ ನಿರೀಕ್ಷಿಸುವುದು ಶರಣ ಕಾಯಕ ಜೀವಿಗಳಿಗೆ ಸಲ್ಲದ ಮಾತು. ಅಲ್ಲದೆ ಅವರಲ್ಲಿ ದುರಾಸೆಗಳು ಕೂಡ ಇರಕೂಡದದ್ದು. ಈ ಕುರಿತು ಆಯ್ದಕ್ಕಿ ಲಕ್ಕಮ್ಮ ತನ್ನ ವಚನದಲ್ಲಿ ಹೀಗೆ ಅಭಿಪ್ರಾಯಪಟ್ಟಿದ್ದಾರೆ ;

ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ ?
ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ಅಯ್ಯಾ ?
ಈಸಕ್ಕಿಯಾಸೆ ನಿಮಗೇಕೆ ? ಈಶ್ವರನೊಪ್ಪ
ಮಾರಯ್ಯಾಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯಾ

– ಆಯ್ದಕ್ಕಿ ಲಕ್ಕಮ್ಮ

ಶಿವಭಕ್ತರಲ್ಲಿ ಆಸೆ, ರೋಷ ಇರಕೂಡದದ್ದು. ಹೆಚ್ಚಿಗೆ ತಂದಿರುವ ಅಕ್ಕಿಯಿಂದ ನಾಳೆಯ ಕಾಯಕಕ್ಕೆ ಅಡ್ಡಿಯಾಗುತ್ತದೆ. ಆದ್ದರಿಂದ ಜಂಗಮಕ್ಕೆ ದಾಸೋಹ, ಲಿಂಗಕ್ಕೆ ಪೂಜೆ ಸಲ್ಲವುದಿಲ್ಲ ಎಂದು ತನ್ನ ಗಂಡ ಮಾರಯ್ಯನಿಗೆ ಉಪದೇಶಿಸುತ್ತಾಳೆ. ಮುಂದುವದರೆದು ಮತ್ತೊಂದು ವಚನದಲ್ಲಿ ಹೀಗೆ ಅಭಿವ್ಯಕ್ತಿಸುತ್ತಾಳೆ;

ಒಮ್ಮನವ ಮೀರಿ ಇಮ್ಮನವ ತಂದೀರಿ, ಇದು ನಿಮ್ಮ ಮನವೋ
ಬಸವಣ್ಣನ ಅನುಮಾನದ ಚಿತ್ತವೋ? ಈ ಮಾತು ಮಾರಯ್ಯ ಪ್ರಿಯ
ಅಮರೇಶ್ವರ ಲಿಂಗಕ್ಕೆ ಸಲ್ಲದ ಬೋನ, ಅಲ್ಲಿಯೇ ಸುರಿದು ಬನ್ನಿ
ಮಾರಯ್ಯ

– ಲಕ್ಕಮ್ಮ

ಹೀಗೆ ಹೇಳುವ ಮೂಲಕ ದಂಪತಿಗಳು ತಮ್ಮ ಜೀವನದಲ್ಲಿ ಕಾಯಕ ತತ್ವವನ್ನು ಪಾಲಿಸಿಕೊಂಡು ಬಂದಿರುವುದು ವ್ಯಕ್ತವಾಗುತ್ತದೆ.

ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ ಚಿತ್ತ ವಿಚ್ಚಿಂದವಾಗದಂತಿರಬೇಕು
ನೇಮದ ಕೂಲಿ ಎಂದಿನ ನಿತ್ಯ ನೇಮದಲ್ಲಿ ಸಂದಿರಬೇಕು
ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದಡೆ
ತಾ ಮಾಡುವ ಸೇವೆ ನಷ್ಟವಯ್ಯ !
ನಿನ್ನಾಸೆಯ ವೇಷದ ಪಾಶಕ್ಕೆ ನೀನೇ ಹೋಗು

ನನಗೆ ನನ್ನ ಜಂಗಮದ ಪ್ರಸಾದದಾಸೆ ಚಂದೇಶ್ವರ ಲಿಂಗಕ್ಕೆ ಪ್ರಾಣವಯ್ಯ
– ನುಲಿಯ ಚಂದಯ್ಯ

ಕಾಯಕವೆಂಬುದು ಸತ್ಯ ಶುದ್ದವಾಗಿರಬೇಕು. ಅಲ್ಲದೆ ಅದರಿಂದ ಬಂದ ಸಂಪಾದನೆಯಲ್ಲಿ ಮನಸ್ಸು ಚಂಚಲಗೊಂಡಿರಬಾರದ್ದು. ಸಂಗ್ರಹಿಸುವ ಮನಸ್ಸು ಇರಕೂಡದ್ದು. ಒಂದು ವೇಳೆ ಮನಸ್ಸು ಪರಿಶುದ್ದವಿಲ್ಲದಿದ್ದಾಗ ಅದು ಲಿಂಗ ಪೂಜೆಗೆ ಜಂಗಮ ದಾಸೋಹಕ್ಕೆ ನಷ್ಟವಾಗುತ್ತದೆ ಎಂದು ನುಲಿಯ ಚಂದಯ್ಯನವರು ದಾಸೋಹ ಸೇವೆ ಮಾಡುವಾಗ ಮನಸ್ಸಿನ ಪರಿಶುದ್ದತೆಯೂ ಅಷ್ಟೇ ಪ್ರಮುಖವಾಗಿರುತ್ತದೆ ಎಂದಿದ್ದಾರೆ.

ಸತ್ಯಶುದ್ದ ಕಾಯಕ ಮಾಡಿ ಅಂದಂದಿನ ಗುರು–ಲಿಂಗ–ಜಂಗಮ ಸೇವೆ ಸಲ್ಲಿಸಬೇಕು. ಸಂಗ್ರಹಿಸುವ ಗುಣವು ಕುಟುಂಭದಲ್ಲಿನ ಹೆಂಡತಿ ಮಕ್ಕಳ ಮೇಲೆಯೂ ದುಷ್ಪರಿಣಾಮ ಬೀರಬಹುದು. ಹೆಂಡತಿ ಮಕ್ಕಳು ಸೋಮಾರಿಗಳಾಗಬಹುದು, ದುರ್ವ್ಯಸನಿಗಳಾಗಬಹುದು. ಕಾರಣ ಅವರಿಗೆ ಸಂಪತ್ತಿನ ಮೌಲ್ಯ ಗೊತ್ತಾಗುವುದಿಲ್ಲ. ಅಷ್ಟೆ ಅಲ್ಲದೆ ಅದು ಮನುಷ್ಯನಿಗೆ ಶಾರೀರಿಕವಾಗಿಯೂ, ಮಾನಸಿಕವಾಗಿಯು ಹಾಳುಗೆಡಿಸಬಹುದು. ಮೈಗಳ್ಳತನದಿಂದಾಗಿ ದೇಹಕ್ಕೆ ಕೆಲಸವಿಲ್ಲದಿದ್ದಾಗ ಆರೋಗ್ಯ ಕೆಡುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಹೀಗೆ ಕಾಯಕವು ಮಾನಸಿಕವಾಗಿ, ಶಾರೀರಿಕವಾಗಿಯೂ ಸದೃಢಗೊಳಿಸುತ್ತದೆ. ಸಾಮಾಜಿಕ, ರಾಜಕೀಯ, ಆರ್ಥಿಕವಾಗಿಯೂ ಸಮಾನತೆಯನ್ನು ತಂದುಕೊಡಬಲ್ಲ ವಿಶಿಷ್ಟ ಶಕ್ತಿ ಕಾಯಕ ತತ್ವದಲ್ಲಿ ಅಡಗಿರುವುದು ಕಂಡುಬರುತ್ತದೆ.

ಕಾಯಕದಲ್ಲಿ ವಂಚನೆ ಸಲ್ಲದ್ದು :

ಕಾಯಕ ಯಾವುದೇ ಸ್ವರೂಪದ್ದಾಗಿರಲಿ ಅದರಲ್ಲಿ ಕಾಲ ವಂಚನೆ, ಹಣ ವಂಚನೆ, ಶ್ರಮ ವಂಚನೆ ಸಲ್ಲದ್ದು. ಅಲ್ಪ ಶ್ರಮವಹಿಸಿ ಅಧಿಕ ಸಂಪಾದನೆ ಮಾಡುವುದು, ಸೋಮಾರಿತನದಿಂದ ಕಾಲಹರಣಗೈದು ಕೂಲಿ ಪಡೆಯುವುದು ಕಾಯಕ ತತ್ವಕ್ಕೆ ಸಲ್ಲುವುದಿಲ್ಲ. ಆಯ್ದಕ್ಕಿ ಮಾರಯ್ಯನವರು ವಂಚನೆಯುಕ್ತ ಕಾಯಕ ಮಾಡುವವರ ಕುರಿತು ಹೀಗೆ ಹೇಳುತ್ತಾರೆ;

ಹಾಗದ ಕಾಯಕವ ಮಾಡಿಕೊಂಡು ಹಣವಡ್ಡವ
ತಾ ಎಂಬಲ್ಲಿ ಸತ್ಯ ಕಾಯಕವುಂಟೇ ?
ಭಕ್ತರಲ್ಲಿ ಕಾಯಕಕ್ಕೆ ಕಡಿಮೆಯಾಗಿ ತಾ ಎಂಬುದು
ಅಮರೇಶ್ವರ ಲಿಂಗಕ್ಕೆ ಚಿತ್ತಶುದ್ದ ಕಾಯಕ.

ಕಡಿಮೆ ಬೆಲೆಯ ಕೆಲಸ ಮಾಡಿ ಅಧಿಕ ಹಣ ಪಡೆಯುವುದು ಸತ್ಯಶುದ್ದ ಕಾಯಕವಲ್ಲ, ಕೆಲಸಕ್ಕಿಂತ ಕಡಿಮೆ ಬೆಲೆ ಪಡೆದು ಅದರಲ್ಲಿಯೇ ಸಂತೃಪ್ತಿ ಹೊಂದುವುದು ಕಾಯಕ.

ಕಾಯಕದಲ್ಲಿ ಮೇಲು-ಕೀಳಿಲ್ಲ :

ಆಳಿನಿಂದ ಅರಸನವರೆಗೆ, ಮೀಣೆ, ಮೆಟ್ಟು ಮಾಡುವವರವರೆಗೆ ಯಾವುದೇ ಕಾಯಕವಿರಲಿ ಅದರಲ್ಲಿ ಮೇಲು-ಕೀಳಿಲ್ಲ. ಎಲ್ಲ ಕಾಯಕವೂ ಸಮಾನವಾದದ್ದು. ಹಗ್ಗ ಹೆಣೆಯುವ ಚಂದಯ್ಯ, ಬುಟ್ಟಿ ಹೆಣೆಯುವ ಕೇತಯ್ಯ, ಮೆಟ್ಟು ಮಾಡುವ ಹರಳಯ್ಯ, ಚರ್ಮ ಹದ ಮಾಡುವ ಕಕ್ಕಯ್ಯ, ಕುರಿ ಕಾಯುವ ಗೊಲ್ಲಾಳ, ದನ ಕಾಯುವ ರಾಮಣ್ಣ, ಬಟ್ಟೆ ತೊಳೆಯುವ ಮಾಚಯ್ಯ ಮೊದಲಾದ ಎಲ್ಲಾ ಕಾಯಕಜೀವಿ ಶರಣರಲ್ಲಿ ಶಿವರೂಪವನ್ನು ಕಂಡಿದ್ದಾರೆ ಬಸವಣ್ಣನವರು. ಇವರೆಲ್ಲರೂ ಕಾಯಕ ತಾರತಮ್ಯವಿಲ್ಲದೆ ಸಮಾನವಾಗಿ ಬದುಕಿದರು.

ವ್ಯಕ್ತಿಗಿಂತ ವ್ಯಕ್ತಿತ್ವಕ್ಕೆ, ಕೆಲಸಕ್ಕಿಂತ ಕರ್ತವ್ಯ ನಿಷ್ಠೆಗೆ, ಪರಿಮಾಣಕ್ಕಿಂತಲೂ ಪ್ರಮಾಣಕ್ಕೆ ಮಹತ್ವ ಕೊಟ್ಟವರು ಬಸವಾದಿ ಶರಣರು. ವ್ಯಕ್ತಿ ಯಾರೇ ಇರಲಿ ವೃತಿ ಯಾವುದೇ ಇರಲಿ ಮಾಡುವ ಕೆಲಸದಲ್ಲಿ ಭಕ್ತಿ, ನಿಷ್ಠೆ, ಪ್ರಮಾಣಿಕತೆ, ಶ್ರದ್ಧೆಯಿಂದ ಕೂಡಿದ್ದು ಕಾಯಕ ಎನಿಸಿಕೊಳ್ಳುತ್ತದೆ. ತಾನು ಮಾಡುವ ಕಾಯಕವು ಸಮಾಜಕ್ಕೆ ಪೂರಕವಾಗಿರಬೇಕೇ ಹೊರತು ಮಾರಕವಾಗಿರಕೂಡದ್ದು. ಅದು ಸದಾಕಾಲ ಜೀವಪರ ಕೆಲಸವಾಗಿರಬೇಕು. ಅಂಥ ಕಾಯಕದಿಂದ ಮುಕ್ತಿಪಥ ಕಂಡುಕೊಳ್ಳಲು ಸಾಧ್ಯ.

ಕೃಷಿ, ಕೃತ್ಯ ಆವ ಕಾಯಕವಾದಡೇನು ? ತನುಮನ ಬಳಲಿಸಿ
ಗಳಿಗೆ ತಂದು ಗುರು-ಲಿಂಗ-ಜಂಗಮಕ್ಕೆ ವೆಚ್ಚಿಸಿ
ದಾಸೋಹ ಮಾಡುವ ಪರಮ ಭಕ್ತನ ಪಾದವ ತೋರಯ್ಯ ಎನಗೆ
ಅದೆಂತೆದೊಡೆ ಆತನ ತನುಶೂದ್ಧ, ಆತನ ಮನ ಶೂದ್ಧ,
ಆತನ ಭಾವ ಶುದ್ಧ
ಆತನ ನಡೆ ಶುದ್ಧ, ನುಡಿಯೆಲ್ಲವೂ ಪಾವನವೂ ಆತಂಗೆ
ಉಪದೇಶವ ಮಾಡಿದಾತನೇ ಪರಮ ಸದ್ಗುರು
ಅಂತಪ್ಪ ಸದ್ಭಕ್ತನ ಮನೆಯು ಕೈಲಾಸವೆಂದು ಹೊಕ್ಕು ಲಿಂಗಾರ್ಚನೆಯ
ಮಾಡುವ ಜಂಗಮವೇ ಜಗತ್ ಪಾವನ
ಇಂತಪ್ಪ ಗುರು ಶಿಷ್ಯ ಜಂಗಮಕ್ಕೆ ನಾನು ನಮೋ ನಮೋ
ಎಂಬೆನಯ್ಯ ಕೂಡಲ ಚೆನ್ನ ಸಂಗಮದೇವ. **– ಚೆನ್ನಬಸವಣ್ಣ**

ತನು-ಮನ-ಭಾವ ಶುದ್ಧವಾಗಿ ತನ್ನ ಕಾಯಕದಲ್ಲಿ ನಿರತನಾದ ಸದ್ಭಕ್ತನೇ ಶ್ರೇಷ್ಠ. ಕಾಯಕ ಜೀವಿಗಳಲ್ಲಿ ತಾನು ಕೈಗೊಂಡ ಕೆಲಸವು ಹಿರಿದು-ಕಿರಿದು, ಶ್ರೇಷ್ಠ-ಕನಿಷ್ಠ, ಜಾತಿ ಮತ ಎಂಬ ಯಾವುದೇ ಭಾವಕ್ಕೆ ಒಳಗಾಗದೇ ತಾವು ಕೈಕೊಂಡ ಕೆಲಸದಲ್ಲಿಯೇ ದೇವರನ್ನು ಕಂಡುಕೊಂಡ ಮಹಾಶರಣ ಜೀವಿಗಳು. ಅವರ ನಡೆನುಡಿ, ಮನ, ಭಾವ ಸರ್ವಾಂಗವೆಲ್ಲವೂ ಪರಿಶುದ್ಧವಾಗಿರುತ್ತದೆ ಎಂದು ಶರಣರ ಅಭಿಪ್ರಾಯವಾಗಿದೆ.

ಹೀಗೆ ಕಾಯಕ ತತ್ವದ ಮೂಲಕವಾಗಿ ೧೨ನೇ ಶತಮಾನದ ಶಿವಶರಣರು

ಸಮಾಜದಲ್ಲಿನ ರಾಜಕೀಯ, ಆರ್ಥಿಕ, ಸಮಾಜಿಕ, ಧಾರ್ಮಿಕ ಸಮಾನತೆಯನ್ನು ಸಾರಿದರು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ವರ್ಣ ವ್ಯವಸ್ಥೆಯಲ್ಲಿನ ಅವೈಜ್ಞಾನಿಕವಾದ ಪದ್ಧತಿಯನ್ನು ಹೋಗಲಾಡಿಸಲು ಬಸವಣ್ಣನವರ ಕಾಯಕ ತತ್ವವು ಮಹತ್ವಪೂರ್ಣವೆನಿಸುತ್ತದೆ.

ಆಕರ ಗ್ರಂಥಗಳು:

೧) ವಚನ ಸಂಪುಟಗಳು
೨) ವಚನ ತತ್ವಸಾರ
೩) ವಚನ ತತ್ವಾನುಭವ

– ರಾಜಕುಮಾರ್ ಸಿಂಧೆ
ಉಪನ್ಯಾಸಕರು,
ಸಿದ್ಧಾರ್ಥ ಪದವಿ ಮಹಾವಿದ್ಯಾಲಯ
ಬೀದರ

ತೆಕ್ಕಿಯೊಳಗ ರಿಕ್ಕ ಆಗಿ

ಬಿಗಿದ ಹೊರಸಿನ ಸದ್ದು ನೀ
ತೊಡಕ ಬೀಳುತ್ತವೆ ತಲಿ ಕೂದಲು
ಹನಿ ಬೆವರು
ಅದಲು ಬದಲಾಗಿ

ನಿಟ್ಟುಸಿರಿನ ನಿಟ್ಟು
ಗೋಡೆಗುಂಟ ಏರಿ ಎರಿ
ಅಂಟಿಸಿದ ಪತಂಗಗಳು, ಪೋಟೊಗಳು
ನೆಲಕ್ಕುದುರುತ್ತವೆ

ಕ್ಯಾಲೆಂಡರ್ ತಾರಿಖಿನ ಮೇಲೆ ಬರೆದ
ಗುಣಾಕಾರ ಚಿನ್ಹೆಯ ಬಣ್ಣ ಸೋರುತ್ತದೆ ಹಸಿಯಾಗಿ
ಚಾಪೇಯ ತುಂಬ ತೊಟ್ಟಿಕ್ಕುವ ಹರೇಯದ ನಾತ
ಮೈ ಕೂದಲು ಖಡ್ಗಗಳಾಗಿ,ಕೊಂಬುಗಳಾಗಿ

ಕವಿತೆಯಂತ ನಿನ್ನೊಳು ಛೇದಿಸುತ್ತ,ಕತ್ತರಿಸುತ್ತ ಹಾದಿ ಮಾಡುತ್ತವೆ
ಕಲ್ಲು ಕತ್ತರಿಸುತ್ತಿದ್ದೆನೆ
ಅರ್ರೇ...
ಮತ್ತೇ ಚಿಗುರುತಿದೆ.....

– ಬಸವಣ್ಣೆಪ್ಪ ಕಂಬಾರ

ನಡುಗನ್ನಡ ಕಾವ್ಯಪರಂಪರೆ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹನ್ನೆರಡನೆಯ ಶತಮಾನ ಬಹಳ ಮುಖ್ಯವಾದದ್ದು. ಪಂಪ ಹುಟ್ಟಿದ ಹತ್ತನೆಯ ಶತಮಾನವನ್ನು ಕನ್ನಡ ಸಾಹಿತ್ಯದ ಸುವರ್ಣಯುಗವೆಂದು ಕರೆದರೆ, ಈ ಶತಮಾನವನ್ನು ಸಮೃದ್ಧಿಯುಗವೆಂದು ಕರೆಯಬಹುದು. ೧೨ನೆಯ ಶತಮಾನದಿಂದ ೧೯ನೆಯ ಶತಮಾನದವರೆಗಿನ ಕನ್ನಡ ಸಾಹಿತ್ಯಾವಧಿಗೆ ನಡುಗನ್ನಡ ಕಾಲ ಅಥವಾ ಮಧ್ಯಕಾಲೀನ ಕಾಲ ಎಂದು ಕರೆಯಲಾಗುತ್ತದೆ. ವಚನ ಸಾಹಿತ್ಯದಿಂದ ನೊರೆಬಂದ ತೊರೆಯಂತೆ ಉಕ್ಕಿ ಹರಿದ ಸಾಹಿತ್ಯ ಸಾಗರೋಪಾದಿಯಲ್ಲಿ ಬೆಳೆದು, ನೂರಾರು ಜನ ವಚನಕಾರರು ವಿವಿಧ ಅನುಭವಗಳನ್ನು ವಚನಗಳಲ್ಲಿ ಅಭಿವ್ಯಕ್ತಿಸಿದರು. ಹರಿಹರ, ರಾಘವಾಂಕರು ತಮ್ಮ ಕೃತಿಗಳಲ್ಲಿ ವಚನಕಾರರು, ಶಿವಭಕ್ತರನ್ನು ಒಳಗೊಂಡಂತೆ ಹರಿಶ್ಚಂದ್ರನಂಥ ರಾಜನನ್ನು ಕುರಿತು ಬರೆದರು. ದಾಸರು ತಮ್ಮ ಕೀರ್ತನೆಗಳಲ್ಲಿ, ತತ್ವಪದಕಾರರು ತಮ್ಮ ತತ್ವಪದಗಳಲ್ಲಿ ಮನುಷ್ಯ ಮತ್ತು ಅವನ ಬಂಧನ, ಬಿಡುಗಡೆಗಳ ಕುರಿತು ಅಭಿವ್ಯಕ್ತಿಸಿದ್ದಾರೆ. ಚಂಪೂ ಕೃತಿಗಳಿಂದ ಹಿಡಿದು ತತ್ವಪದಗಳ ದೇಶಿ ರಚನೆಗಳವರೆಗೆ ಹಲವು ಬಗೆಯ ಸಾಹಿತ್ಯ ಈ ಕಾಲದಲ್ಲಿ ಸೃಷ್ಟಿಯಾಗಿದೆ.

ಹನ್ನೆರಡು, ಹದಿಮೂರನೆಯ ಶತಮಾನ ವಚನ, ರಗಳೆ, ಷಟ್ಪದಿಗಳ ಕಾಲ. ಈ ಕಾಲದ ಕಾವ್ಯಧೋರಣೆ ನಿಜವಾಗಿಯೂ ತತ್ಪೂರ್ವದ ಸಾಹಿತ್ಯ ಪರಂಪರೆಯೊಂದಿಗೆ ಸವಾಲಾಗಿ ನಿಲ್ಲುವ ಮತ್ತು ಸ್ಪಷ್ಟವಾಗಿ ಗುರುತಿಸಬಹುದಾದಂತಹ ಬದಲಾವಣೆಗಳನ್ನು ಅಭಿವ್ಯಕ್ತಿಯಲ್ಲಿ ಸಾಧಿಸಿದ್ದರಿಂದ, ಇದನ್ನು ಕನ್ನಡ ಸಾಹಿತ್ಯದಲ್ಲಿ ಮೊದಲಿಗೆ ಗುರುತಿಸಬಹುದಾದ ಕ್ರಾಂತಿಘಟ್ಟವೆಂದು ಹೇಳಬಹುದಾಗಿದೆ. ಈ ಕಾಲದ ಮುಖ್ಯ ಲಕ್ಷಣವೆಂದರೆ, ಸಾಹಿತ್ಯವು ರಾಜಾಶ್ರಯದ ಹಂಗನ್ನು ತೊರೆದು, ಅದುವರೆಗೂ ಕನ್ನಡದ ಮೇಲೆ ಕವಿದುಕೊಂಡಿದ್ದ ಸಂಸ್ಕೃತದ ದಟ್ಟವಾದ ಪ್ರಭಾವದಿಂದ ದೂರವಾಗಿ, ಸರಳವಾದ, ಸುಲಭವಾದ ಆಡು ಮಾತಿನ ಶೈಲಿಯಲ್ಲಿ 'ವಚನ'ಗಳನ್ನು ರಚಿಸಿದ್ದು.

'ವಚನ' ಎಂದರೆ ಭಾಷೆ, ಪ್ರಮಾಣ, ಆಣೆ, ಪ್ರತಿಜ್ಞೆ ಮುಂತಾದ ಅರ್ಥಗಳಿವೆ. ಶರಣರ ನುಡಿಗಡಣ, ಆದ್ಯರ ಸೂಳ್ನುಡಿ, ಅನುಭಾವಪದ ಇತ್ಯಾದಿ ಪದ ಪ್ರಭೇದಗಳಿವೆ.

ಕರಿಯನಿತ್ತಡೆ ಒಲ್ಲೆ ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯನಿತ್ತಡೆ ಒಲ್ಲೆ ನಿಮ್ಮ ಶರಣರ

ಸೂಳ್ನುಡಿಯ ಒಂದರಗಳಿಗೆಯಿತ್ತಡೆ ನಿಮ್ಮನಿತ್ತೆ
ಕಾಣಾ ರಾಮನಾಥ

ಇಲ್ಲಿ 'ಸೂಳ್ನುಡಿ' ಎಂದರೆ ಸತ್ಯದ ನುಡಿ, ಹುಸಿ ಹೊದ್ದದ ನುಡಿ ಎಂದರ್ಥ. ಅದರಂತೆ ಬಸವಣ್ಣನವರ ಒಂದು ವಚನ 'ಅದರಕ್ಕೆ ಕಹಿ ಉದರಕ್ಕೆ ಸಿಹಿ ನಮ್ಮ ಕೂಡಲ ಸಂಗನ ಶರಣರ ವಚನಗಳು ಬೇವು ಸವಿದಂತೆ' ಎನ್ನುವುದು ವಚನ ಎನ್ನುವ ಅರ್ಥವನ್ನು ಸ್ಪಷ್ಟಪಡಿಸುತ್ತದೆ.

ವಚನವು ಭಾಷೆಯ ಬಳಕೆಯಲ್ಲಿ ಸರಳವಾಗಿರುತ್ತದೆ. ರೂಪದಲ್ಲಿ ಸಂಕ್ಷಿಪ್ತತೆ ಮತ್ತು ಗೇಯತೆಯ ಗುಣ ಹೊಂದಿರುತ್ತದೆ. ಪ್ರತಿಯೊಂದು ವಚನವು ತನ್ನದೇ ಆದ ವಿಶಿಷ್ಟ ಅಂಕಿತವನ್ನು ಪಡೆದಿರುತ್ತದೆ. ವಚನದಲ್ಲಿ ತನ್ನನ್ನು ತಾನೇ ಆತ್ಮಾವಲೋಕನ ಮಾಡಿಕೊಳ್ಳುವ ರೀತಿ, ಸಂಭಾಷಣೆ, ತನ್ನ ಆರಾಧ್ಯ ದೈವನೊಂದಿಗೆ ಸಂವಾದವು ಕಾಣಬಹುದು. ಮನುಷ್ಯನಲ್ಲಿ ತಲತಲಾಂತರದಿಂದಲೂ ಸಂಕೀರ್ಣವಾಗಿ, ಸಂಘರ್ಷಮಯವಾಗಿ ಕಾಡಿದ ಪ್ರಶ್ನೆಗಳಿಗೆ ವಚನಗಳು ಪ್ರತ್ಯುತ್ತರ ನೀಡಿವೆ. ಪರಿಹಾರೋಪಾಯಗಳನ್ನು ಸಹ ನೀಡಿವೆ. ಮಾನವೀಯ ನೆಲೆಗಟ್ಟಿನ ಮೇಲೆ ಶರಣಮಾರ್ಗವನ್ನು ವಚನಗಳು ನಿರ್ಮಿಸಿವೆ.

ಬಸವಣ್ಣನವರ ನೇತೃತ್ವದಲ್ಲಿ ನಡೆದ ಅಂದಿನ ಸಾಮಾಜಿಕ-ಧಾರ್ಮಿಕ ಕ್ರಾಂತಿಯ ಸಂದರ್ಭದಲ್ಲಿ ಕನ್ನಡ ಸಾಹಿತ್ಯದಲ್ಲಿ 'ವಚನ' ಎಂಬ ರೂಪವೊಂದು ಹುಟ್ಟಿಕೊಂಡು ಕ್ರಾಂತಿಗೈದದ್ದು ವಿಶೇಷವಾದದ್ದು. ಈ ಬಗೆಯ 'ವಚನ' ರಚನೆ ಬಸವಣ್ಣನವರಿಗಿಂತ ಹಿಂದೆಯೆ ಜೇಡರದಾಸಿಮಯ್ಯನಂಥವರಿಂದ ಪ್ರಾರಂಭವಾಗಿತ್ತಾದರೂ, ಅದು ಸಮೃದ್ಧವಾಗಿ ಬೆಳೆದದ್ದು, ವೈವಿಧ್ಯತೆಯನ್ನು ಪಡೆದದ್ದು ಬಸವಣ್ಣನವರ ಕಾಲದಲ್ಲಿಯೆ. ಬಸವಣ್ಣನ ಸಮಕಾಲೀನರಾದ ಅಲ್ಲಮಪ್ರಭು, ಸಿದ್ಧರಾಮ, ಚನ್ನಬಸವ, ಅಕ್ಕಮಹಾದೇವಿ ಇವರು ಪ್ರಮುಖರಾದ ವಚನಕಾರರೆನ್ನಬಹುದು. ಇವರಲ್ಲದೆ ಇನ್ನೂ ಅನೇಕರು 'ವಚನ'ಗಳನ್ನು ಬರೆದಿದ್ದಾರೆ. ವಚನ ಕ್ರಾಂತಿಯಲ್ಲಿ ಅನೇಕರು ಅಂದಿನ ಸಮಾಜದ ವಿವಿಧಸ್ತರಗಳಿಂದ ಬಂದವರು. ಅಂಬಿಗರ ಚೌಡಯ್ಯ, ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಮಡಿವಾಳ ಮಾಚಯ್ಯ, ನುಲಿಯ ಚಂದಯ್ಯ ಮುಂತಾದವರ ಹೆಸರುಗಳು ಅವರು ಮಾಡುವ ವೃತ್ತಿಯನ್ನೂ ಮತ್ತು ಅವರು ಬಂದ ಸಾಮಾಜಿಕ ಸ್ತರಗಳನ್ನು ಸೂಚಿಸುತ್ತವೆ.

ಇವರ ಜೊತೆಗೆ ಅನೇಕ ಸ್ತ್ರೀ ವಚನಕಾರ್ತಿಯರೂ ಇದ್ದರು. ಲಿಂಗ ಭೇದವಿಲ್ಲದೆ, ಸಾಮಾನ್ಯ ಜನ ಸಾಹಿತ್ಯಾಭಿವ್ಯಕ್ತಿಯಲ್ಲಿ ಪಾಲ್ಗೊಂಡರು. ಅಲ್ಲದೆ ಮೊಟ್ಟಮೊದಲ ಬಾರಿಗೆ ಮಹಿಳೆ ಮನೆಯಿಂದಾಚೆ ಬಂದು, ಸ್ವತಂತ್ರಳಾಗಿ, ವೈಚಾರಿಕವಾಗಿ ಮಾತನಾಡಿದ್ದು ಈ ಕಾಲದಲ್ಲಿಯೆ. ತನ್ನ ಅರಿವಿಗೆ ಬಂದದ್ದು, ತಿಳಿದದ್ದು ಎಲ್ಲವೂ ಸರಳವಾಗಿ, ಆಡುಭಾಷೆಯಲ್ಲಿ ವಚನಕಾರರು ಸಾಧನೆಯ ಮಾರ್ಗವಾಗಿ ವಚನಗಳನ್ನು ರಚಿಸಿದರು. ಇದು ಎಲ್ಲರಿಗೂ ತಿಳಿಯುವಂಥದು. ಅಂತರಂಗದ ಆಧ್ಯಾತ್ಮಿಕ ಅನುಭಾವಗಳ ಸಾರವೇ ವಚನವಾಯಿತು. ಜಾತಿ-ಅಸಹನೆ, ಸ್ಪೃಶ್ಯ- ಅಸ್ಪೃಶ್ಯ,

ಅಸಮಾನತೆ, ಅಂಧಶ್ರದ್ಧೆ, ಮಡಿ–ಮೈಲಿಗೆ, ಜನ್ಮ–ಪುನರ್‌ಜನ್ಮ, ಸ್ವರ್ಗ–ನರಕ, ತಿಥಿ–ನಕ್ಷತ್ರ, ಬಲಿ–ಯಜ್ಞ–ಯಾಗಾದಿಗಳನ್ನು ತಿರಸ್ಕರಿಸಿ, ವೈಚಾರಿಕ, ಸ್ವತಂತ್ರ, ಸಮಾನ, ಸರಳ ಜೀವನ ಪ್ರೀತಿಗೆ ಮಹತ್ವ ಸಾರಿರುವುದು ವಚನಕಾರರ ಜಾಗತಿಕ ಕೊಡುಗೆಯಾಗಿದೆ.

ಈ ವಚನಗಳ ರೂಪ ಕನ್ನಡ ಸಾಹಿತ್ಯದಲ್ಲಿಯೇ ವಿಶಿಷ್ಟವಾದದ್ದು. ಇವು ನೋಡುವುದಕ್ಕೆ ಬಿಡಿಬಿಡಿಯಾದ ಗದ್ಯರೂಪದ ಮುಕ್ತಕಗಳಂತಿವೆ. ಆದರೆ ಓದಿದರೆ ಪದ್ಯದ ಲಯವನ್ನು ಒಳಗೊಂಡಿರುವುದು ತಿಳಿಯುತ್ತದೆ.

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗಮೆಚ್ಚಿ ಅಹುದಹುದೆನ್ನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲ ಸಂಗಮದೇವನೆಂತೊಲಿವನಯ್ಯ?

ಈ ವಚನದಲ್ಲಿ ಒಂದು ರೂಪವಿದೆ, ಕ್ರಮಬದ್ಧತೆ, ಲಯ, ವಿನ್ಯಾಸ ಕಾಣಬಹುದು. ಮಾತು ಹೇಗಿರಬೇಕೆಂಬ ಸಂಗತಿಯನ್ನು ತಿಳಿಸುತ್ತದೆ. ನಮ್ಮನ್ನು ಚಿಂತನೆಗೆ ಹಚ್ಚುತ್ತದೆ. ಈ ರೀತಿಯಾಗಿ 'ವಚನ'ವು ಜನಸಾಮಾನ್ಯರೊಂದಿಗೆ ತುಂಬ ವಿಶ್ವಾಸದಿಂದ, ಹಿಂದಿನ ಪರಂಪರೆಯೊಂದಿಗೆ, ಸಂಬಂಧವೇ ಇಲ್ಲವೆಂಬಂತೆ, ಹಿಂದಿನ ಬರಹದ ರೀತಿಯನ್ನೆ ತಿರಸ್ಕರಿಸುತ್ತದೆ. ವಚನದಲ್ಲಿಯ ಭಾವ ಮತ್ತು ಭಾಷೆಯ ಶೈಲಿಯನ್ನು ಮುಂದೆ ಬಂದ ಯಾವ ಸಾಹಿತ್ಯ ರೂಪದಲ್ಲಿಯೂ ಹೋಲುವುದಿಲ್ಲ.

ಹದಿಮೂರನೆಯ ಶತಮಾನದ ಕಡೆಯ ಭಾಗದಲ್ಲಿ ಮಹಮ್ಮದೀಯರ ದಾಳಿಯಿಂದ ಇಡೀ ದಕ್ಷಿಣ ಭಾಗವೇ ಅಲ್ಲೋಲಕಲ್ಲೋಲವಾಯಿತು. ಮುಂದೆ ಹದಿನೈದನೆಯ ಶತಮಾನದ ಪ್ರೌಢದೇವರಾಯನ ಕಾಲದಲ್ಲಿ ನೂರೊಂದು ವಿರಕ್ತರು ಮತ್ತು ಅವರ ಸಮಕಾಲೀನ ವಿದ್ವಾಂಸರು ದಿಕ್ಕುಪಾಲಾಗಿದ್ದ ವಚನಗಳನ್ನೆಲ್ಲ ಸಂಗ್ರಹಿಸುವ, ಸಂಕಲಿಸುವ ಹಾಗೂ ವ್ಯಾಖ್ಯಾನಿಸುವ ಕಾರ್ಯವನ್ನು ಕೈಕೊಂಡು, ಒಂದು ರೀತಿಯಲ್ಲಿ ವಚನ ಸಾಹಿತ್ಯವನ್ನು ಉಳಿಸಿ, ವ್ಯವಸ್ಥೆಗೊಳಿಸಿದರು.

ಕನ್ನಡ ಗದ್ಯಕ್ಕೆ ಪದ್ಯದ ಸತ್ವವನ್ನು ತುಂಬಿ, ಸಮೃದ್ಧವಾದ ವಚನ ಸಾಹಿತ್ಯ ರಚಿತವಾದ ನಂತರ ಕನ್ನಡ ಪರಂಪರೆಯಲ್ಲಿ ಹುಟ್ಟಿಕೊಂಡದ್ದು 'ರಗಳೆ' 'ಷಟ್ಪದಿಗಳೆಂಬ ಪದ್ಯರೂಪಗಳು, ರಗಳೆ ಕವಿ' ಎಂದೆ ಪ್ರಸಿದ್ಧನಾದ ಕವಿ ಹರಿಹರನು ತನ್ನ ಕಥನ ಕಾವ್ಯಗಳಿಗೆ 'ರಗಳೆ'ಯನ್ನು ಮಾಧ್ಯಮವನ್ನಾಗಿ ಮಾಡಿಕೊಂಡನು. ಇದು ಒಂದು ಛಂದಸ್ಸಿನ ರೂಪ. ಮೂಲತಃ ಮಾತ್ರಾ ನಿಯತವಾದ ಈ ಛಂದೋಬಂಧ ಹರಿಹರನಿಂದಾಗಿ ಒಂದು ಸಾಹಿತ್ಯ ರೂಪವಾಗಿ ಪರಿಣಮಿಸಿತು. ಉಳಿದ ಪದ್ಯ ಬಂಧಗಳನ್ನು ಸಾಮಾನ್ಯವಾಗಿ ನಾಲ್ಕು ಸಾಲಿನ ಒಂದು ಘಟಕವಾಗಿ ನಿಲ್ಲುತ್ತವೆ.

ಆದರೆ 'ರಗಳೆ' ಹೀಗೆ ನಿಲ್ಲದೆ ಪಂಕ್ತಿಯಿಂದ ಪಂಕ್ತಿಗೆ ಸರಾಗವಾಗಿ ಪ್ರವಹಿಸುತ್ತಾ ಭಾವನಿರೂಪಣೆ ಮಾಡುತ್ತದೆ.

ಹರಿಹರ ಕನ್ನಡ ಕಾವ್ಯ ಪರಂಪರೆಯಲ್ಲಿ ಮಹತ್ವದ ಕವಿಯಾಗಿದ್ದಾನೆ. ವೀರಶೈವ ಕವಿಗಳಲ್ಲಿ ಯುಗಪ್ರವರ್ತಕ, ಋಷಿಕವಿ ಎಂದು ಹೆಸರುವಾಸಿಯಾಗಿದ್ದಾನೆ. 'ಹರಿಹರನು ಗಿರಿಜಾಕಲ್ಯಾಣ' ಎಂಬ ಚಂಪೂಕಾವ್ಯವನ್ನು ಪಂಪಾಶತಕ, ರಕ್ಷಾಶತಕ ಎಂಬ ಎರಡು ಶತಕಗಳನ್ನು, ಮುಡಿಗೆಯ ಅಷ್ಟಕ ಎಂಬ ಅಷ್ಟಕವನ್ನು ಮತ್ತು ಶಿವಭಕ್ತರು-ಶಿವಶರಣರ ಕುರಿತು ೧೦೮ ರಗಳೆ ಕೃತಿಗಳನ್ನು ರಚಿಸಿದ್ದಾನೆ. ತಮಿಳುನಾಡಿನ ಅರವತ್ತುಮೂರು ಪುರಾತನರ ಬಗೆಗೆ ರಗಳೆಗಳನ್ನು ಬರೆಯುವಲ್ಲಿ ಹರಿಹರನಿಗೆ ಶೇಕ್ಕಿಳಾರನ 'ಪೆರಿಯಪುರಾಣ' ಪ್ರೇರಣೆಯಾಗಿದೆ. ಮೂಲತಃ ಶಿವಭಕ್ತನಾದ ಹರಿಹರನು, ಶಿವಶರಣರ ಜೀವನ ಸಾಧನೆ ಕುರಿತಾದ ರಗಳೆಗಳನ್ನು ರಚಿಸಿದನು. ಪ್ರತಿಯೊಂದು ರಗಳೆಯ ಆದಿ ಮತ್ತು ಅಂತ್ಯದಲ್ಲಿ ತಪ್ಪದೇ 'ವಿರೂಪಾಕ್ಷ' ಅಂಕಿತದ ಕಂದಪದ್ಯಗಳ ಬಳಕೆ. ದೊಡ್ಡ ಕೃತಿ ಇದ್ದಾಗ, ಅದರ ಒಂದು ಸ್ಥಲ (ರಗಳೆ) ಪದ್ಯ. ಮತ್ತೊಂದು ಸ್ಥಲ ಗದ್ಯದಂತೆ ಮಾರ್ಪಡಿಸುವುದು ಹರಿಹರನ ನಿರೂಪಣಾ-ತಂತ್ರ-ಕೌಶಲ್ಯವೇ ಆಗಿದೆ. ಕಾವ್ಯ ವಾಚನದಿಂದ ಓದುಗರಿಗೆ ತತ್‌ಕ್ಷಣವೇ ಹೃದಯ ತುಂಬಿಬರುತ್ತದೆ. ಆತನ ಭಕ್ತಿ, ಶ್ರದ್ಧೆ, ಅರ್ಚನೆ, ಅರ್ಪಣೆ, ಅನುಭಾವವು ಸಮೃದ್ಧ ಶಬ್ದಸಂಪತ್ತಿನಿಂದ ಹೊರಹೊಮ್ಮಿ ಶಿವಶರಣರ ಜೀವನ ಸಾಧನೆಯ ದಿವ್ಯ ದರ್ಶನವಾಗುತ್ತದೆ.

ಕುಂಬಾರ ಗುಂಡಯ್ಯನ ಶಿವಭಕ್ತಿ, ನರ್ತಿಸಿದ ಪರಿಯನ್ನು ಹರಿಹರ ಈ ರೀತಿಯಾಗಿ ತನ್ನ ರಗಳೆಯಲ್ಲಿ ನಿದರ್ಶಿಸಿದ್ದಾನೆ.

ಕುಣಿದಾಡುತೆ ಮಡಕೆಗಳಂ ಬಾರಿಸಿ
ಕುಣಿದಾಡುತೆ ಕುಡಿಕೆಗಳಂ ಬಾರಿಸಿ
ಶಿವನಂ ಸುತ್ತಿ ಬರುತ್ತುಂ ಬಾರಿಸಿ
ಕುಣಿವುತೆ ಕೊರಲೆತ್ತುತೆ ನೆರೆಕೂಗುತೆ
ತೊನೆವುತೆ ತೂಗಾಡೂತೆ ಸುಖಿಯಾಗುತೆ
....
ಆಡುವ ಗುಂಡಯ್ಯನ ಹೊಸ ನೃತ್ಯಂ
ನೋಡುವ ಶಿವನ ಮುಟ್ಟಿತು ಸತ್ಯಂ.

ಇಲ್ಲಿ ಕುಂಬಾರ ಗುಂಡಯ್ಯನು ಕುಣಿದಾಡಿದ ಬಗೆ, ಭಾವ-ಭಂಗಿಗಳನ್ನು ಅದ್ಭುತವಾಗಿ ಚಿತ್ರಿಸಿದ್ದಾನೆ. ಭಕ್ತಿಯ ಆವೇಶದಿಂದ ತುಂಬಿದ ವ್ಯಕ್ತಿತ್ವವೊಂದನ್ನು ಕಾವ್ಯದಲ್ಲಿ ಹರಿಹರ ಅದ್ಭುತವಾಗಿ ಕಟ್ಟಿಕೊಟ್ಟಿದ್ದಾನೆ.

ಹರಿಹರನು ರಗಳೆಗಳನ್ನು ಬರೆಯುತ್ತಿದ್ದ ಸಂದರ್ಭದಲ್ಲಿಯೇ ಅವನ ಸೋದರಳಿಯನಾದ ರಾಘವಾಂಕನಿಂದ 'ಷಟ್ಪದಿ' ರೂಪ ಮುಂದಿನ ಕಾವ್ಯ

ಮಾಧ್ಯಮವಾಗಿ ಮೂಡಿಬಂದಿತು. ತನ್ನ ಮಾವನೂ, ಕಾವ್ಯಗುರುವೂ ಆದ ಹರಿಹರನ ಪ್ರಭಾವ ವಲಯದಲ್ಲಿ ಬೆಳೆದ ರಾಘವಾಂಕ, ತನ್ನ ಕಾವ್ಯ ಮಾರ್ಗಕ್ಕೆ ಹರಿಹರನ ರಗಳೆಯ ರೂಪಕ್ಕೆ ಒಲಿಯದೆ ಷಟ್ಪದಿಯ ರೂಪಕ್ಕೆ ಒಲಿದದ್ದು ಆತನ ಸ್ವತಂತ್ರ ಮನೋಧರ್ಮವನ್ನೂ, ವಿವೇಚನಾಶೀಲತೆಯನ್ನು ಸೂಚಿಸುತ್ತದೆ. ಹರಿಹರನ ನಂತರ ಹರಿಹರ ನಿರ್ಮಿತವಾದ ರಗಳೆ ಒಂದು ಪರಂಪರೆಯಾಗಿ ಮುಂದುವರಿಯದೆ, ಅದು ಏಕವ್ಯಕ್ತಿ ಪರಂಪರೆಯಾಗಿ ಮಾತ್ರ ನಿಂತು ಹೋಯಿತು. ರಾಘವಾಂಕನಿಂದ ಆರಂಭವಾದ ಷಟ್ಪದಿ ಪರಂಪರೆ ಮುಂದಿನ ಕವಿಗಳಿಂದ ಅಂಗೀಕೃತವಾಗಿ ಕನ್ನಡ ಸಾಹಿತ್ಯದಲ್ಲಿ ಷಟ್ಪದಿ ಯುಗವೊಂದನ್ನು ನಿರ್ಮಾಣ ಮಾಡಿತು.

ಚಂಪುವಿಗೆ ಪಂಪನು ಹೆಸರಾದಂತೆ, ರಗಳೆಗೆ ಹರಿಹರನು ಹೆಸರಾದಂತೆ, ಷಟ್ಪದಿಗೆ ರಾಘವಾಂಕನು ಹೆಸರಾಗಿದ್ದಾನೆ. ಷಟ್ಪದಿ ರೂಪ ರಾಘವಾಂಕನ ನಂತರ ಅತ್ಯಂತ ಆಕರ್ಷಣೀಯ ಮಾಧ್ಯಮವಾಯಿತು. ಕವಿಗಳಿಗೆ ಮತ್ತು ಓದುಗರಿಗೆ ಹದಿನಾಲ್ಕನೆಯ ಶತಮಾನದಿಂದ ಹದಿನೇಳನೆಯ ಶತಮಾನದವರೆಗೆ ತನ್ನ ಅಧಿಪತ್ಯವನ್ನು ಸ್ಥಾಪಿಸಿಕೊಂಡ ಈ ಪ್ರಕಾರದಿಂದಾಗಿ, ಇದನ್ನು ಷಟ್ಪದಿಯುಗವೆಂದು ಕರೆಯಬಹುದು.

'ಷಟ್ಪದಿ' ಎಂದರೆ ಆರು ಪಂಕ್ತಿಗಳ ಒಂದು ರಚನೆ. ಹರಿಹರನ ರಗಳೆಯನ್ನು ಬಿಟ್ಟರೆ, ಹಿಂದಿನ ಉಳಿದ ಪದ್ಯ ಬಂಧಗಳಲ್ಲಿ ಹೆಚ್ಚು ಪಾದಗಳನ್ನುಳದ್ದು. ಕಂದ-ವೃತ್ತಗಳು ನಾಲ್ಕು ಪಾದದವು. ಸಾಂಗತ್ಯದ್ದೂ ನಾಲ್ಕು ಪಾದ. ತ್ರಿಪದಿಯದು ಸ್ಥೂಲವಾಗಿ ಮೂರು, ಷಟ್ಪದಿಯದು ಆರು. 'ಷಟ್ಪದಿ' ಎಂಬ ಈ ರೂಪ ರಾಘವಾಂಕನ ನಿರ್ಮಿತಿಯೇನೂ ಅಲ್ಲ. ಹಿಂದಿನ ಕಾವ್ಯಗಳಲ್ಲಿ ಮತ್ತು ಲಕ್ಷಣ ಗ್ರಂಥಗಳಲ್ಲಿ ಅದರ ಪ್ರಯೋಗ ನಿರೂಪಣೆ ಸ್ವಲ್ಪ ಮಟ್ಟಿಗೆ ಕಾಣಬಹುದು. ರಾಘವಾಂಕನು ಬಳಸಿದ್ದು ವಿಶೇಷವಾಗಿ ವಾರ್ಧಕ ಷಟ್ಪದಿಯನ್ನೆ. ಕಥೆಯೊಂದನ್ನು ಸರಾಗವಾಗಿ ನಿರೂಪಿಸಲು ಷಟ್ಪದಿ ಎಂಬುದು ಅತ್ಯಂತ ಸೊಗಸಾದ ಮಾಧ್ಯಮ ಎಂಬುದನ್ನು ಮೊದಲಿಗೆ ತೋರಿಸಿ ಕೊಟ್ಟವನು ರಾಘವಾಂಕ. 'ಹರಿಶ್ಚಂದ್ರಕಾವ್ಯ', 'ಸಿದ್ಧರಾಮ ಚರಿತೆ', 'ಸೋಮನಾಥ ಚರಿತೆ'ಗಳು ಕನ್ನಡದ ಮೊಟ್ಟಮೊದಲ ಷಟ್ಪದಿ ಕಾವ್ಯಗಳಾಗಿವೆ. ಹರಿಶ್ಚಂದ್ರ ಕಾವ್ಯ ಅದ್ಭುತ ಕೃತಿ ಕಾವ್ಯವಾದರೂ ನಾಟಕೀಯ ಗುಣ ಇಲ್ಲಿದೆ.

ಉದಾಹರಣೆಗಾಗಿ- ವಿಶ್ವಾಮಿತ್ರನಿಗೆ, ತನ್ನದೆಲ್ಲವನ್ನೂ ಧಾರೆಯೆರೆದ ನಂತರ, ಹರಿಶ್ಚಂದ್ರನನ್ನು ರಾಜಧಾನಿಗೆ ಕರೆದುಕೊಂಡು ಹೋಗಿ ಅಲ್ಲಿನ ಸಮಸ್ತ ಅಧಿಕಾರವನ್ನು ವಹಿಸಿಕೊಳ್ಳುವ ಉಪಾಯಕ್ಕಾಗಿ ವಿಶ್ವಾಮಿತ್ರ ಹರಿಶ್ಚಂದ್ರನನ್ನು ತನ್ನ ಜತೆಗೆ ರಥವನ್ನೇರಿ ಬಾ ಎಂದು ಕರೆಯುವ ಪ್ರಸಂಗ ಹೀಗಿದೆ.

ನಡೆ ರಥವನೇರಿಕೊಳ್, ಒಲ್ಲೆ, ಏಕೊಲ್ಲೆ, ಪರ
ರೊಡವೆ ಎನಗಾಗದು, ಏಕಾಗದು, ಆನ್ ಇತ್ತೆನ್, ಇ
ತ್ತಡೆಕೊಳಲು ಬಾರದು, ಅದೇಂ ಕಾರಣಂ ಬಾರದು, ಎಮಗಂ –

....

.... (ಪ್ರತಿಗ್ರಹಂ ಸಲ್ಲದು)

ಈ ಪದ್ಯದ ರಚನೆಯನ್ನು ಗಮನಿಸಿದರೆ, ಮಾತಿಗೆ ಮಾತು ಕೊಡುವ ನಾಟಕೀಯ ಗುಣ ಕಾಣಿಸುತ್ತದೆ.

ರಾಘವಾಂಕನ ನಂತರ ಭೀಮಕವಿ, ವಿರೂಪಾಕ್ಷ ಪಂಡಿತ ಮೊದಲಾದವರು ಷಟ್ಪದಿ ಪರಂಪರೆಯನ್ನು ಮುಂದುವರೆಸಿದರೂ ಕುಮಾರವ್ಯಾಸ, ಚಾಮರಸ ಮತ್ತು ಲಕ್ಷ್ಮೀಶ ಈ ಮೂವರೇ ಷಟ್ಪದಿ ಪರಂಪರೆಯ ಶಿಖರಗಳೆಂದು ಗುರುತಿಸಬಹುದಾಗಿದೆ. ಇವರಲ್ಲಿ ಕುಮಾರವ್ಯಾಸ ಯುಗ ಪ್ರವರ್ತಕನಾದ ಮಹಾಕವಿಯಾಗಿದ್ದಾನೆ. ಕುಮಾರವ್ಯಾಸ ಭಾರತ, 'ಕಲಿಯದವರಿಗೂ ಕಾಮಧೇನು'ವಾಗಿ ಕನ್ನಡ ಜನಮನವನ್ನು ಸೂರೆಗೊಂಡಿದೆ. ಚಾಮರಸನ ಷಟ್ಪದಿಯಲ್ಲಿ ಕಂಡುಬರುವ ಹೊಳಪು, ಲಕ್ಷ್ಮೀಶನ ಷಟ್ಪದಿಗಳಲ್ಲಿ ಕಂಡುಬರುವ ನಾದಲೋಲತೆ ವಿಶೇಷ ರೀತಿಯದಾಗಿದೆ. ಹತ್ತೊಂಭತ್ತನೆಯ ಶತಮಾನದ ಷಟ್ಪದಿಯಲ್ಲಿ ಕಾವ್ಯಗಳು ರಚನೆಗೊಂಡಿವೆ. ಅವುಗಳ ಸಂಖ್ಯೆ ನೂರಾಮೂವತ್ತರವರೆಗೆ ಆಗುತ್ತದೆ. ಇದರರ್ಥ ಷಟ್ಪದಿ ಪರಂಪರೆ ಎಷ್ಟೊಂದು ಜನಪ್ರಿಯ ಕಾವ್ಯ ರೂಪ ಎಂಬುದು ತಿಳಿಯುತ್ತದೆ. ಆಧುನಿಕ ಕಾಲದಲ್ಲಿ ಡಿ.ವಿ.ಜಿ. ಗೋವಿಂದ ಪೈ, ಬೇಂದ್ರೆ, ಕುವೆಂಪು ಮತ್ತು ಅಡಿಗರಲ್ಲಿಯೂ ಷಟ್ಪದಿಯ ಪ್ರಯೋಗಗಳನ್ನು ಕಾಣಬಹುದು. ಇದು ಓದಲು, ವಾಚಿಸಲೂ ತುಂಬಾ ಅನುಕೂಲವಾಗಿದೆ.

ನಡುಗನ್ನಡ ಸಾಹಿತ್ಯ ಪರಂಪರೆಯಲ್ಲಿ ರಗಳೆ–ಷಟ್ಪದಿಗಳ ನಂತರದ ಘಟ್ಟ ಕೀರ್ತನೆ–ಸಾಂಗತ್ಯ–ತ್ರಿಪದಿಗಳದು. ಈ ಮೂರು ರೂಪಗಳೂ ಉಳಿದೆಲ್ಲವುಗಳಿಗಿಂತ ಸುಲಭವಾಗಿ ಹಾಡಲು ತಕ್ಕವು. ಪ್ರೌಢವಾದ, ಗಂಭೀರವಾದ ವಸ್ತುಗಳನ್ನು ನಿರ್ವಹಿಸುವುದಕ್ಕಿಂತ ಅಂತರಂಗದ ಮಿದುವಾದ ಹದವಾದ ಭಾವನೆಗಳನ್ನು ವ್ಯಕ್ತಪಡಿಸಲು ಹೆಚ್ಚು ಅನುಕೂಲವಾದ ಮಾಧ್ಯಮಗಳಾಗಿವೆ. ಹದಿನಾಲ್ಕು, ಹದಿನೈದು ಮತ್ತು ಹದಿನಾರನೆಯ ಶತಮಾನಗಳು ಈ ರೂಪಗಳ ಸಮೃದ್ಧಿಯ ಕಾಲ.

'ಕೀರ್ತನೆ' ಎಂದರೆ ಭಗವಂತನನ್ನು ಕುರಿತು ಸ್ಮರಿಸುವುದು, ಹಾಡುವುದು, ಹೊಗಳುವುದು. ಸಂಸ್ಕೃತಗಳಲ್ಲಿ ಇಂಥ ಸ್ತೋತ್ರ ಸಾಹಿತ್ಯ ವಿಫುಲವಾಗಿದೆ. ಇಂಥ ಸ್ತೋತ್ರಗಳಲ್ಲಿ ಕೆಲವು ಕನ್ನಡದ ಚಂಪೂ ಪರಂಪರೆಯ ಕವಿಗಳಲ್ಲಿ, ಮುಖ್ಯವಾಗಿ ಜೈನಪುರಾಣಗಳಲ್ಲಿ ಜಿನನನ್ನು ಕುರಿತು ಸ್ತುತಿ ಪದ್ಯಗಳಾಗಿ ಕಾಣಿಸಿಕೊಳ್ಳುತ್ತವೆ. ಪಂಪನ ಆದಿಪುರಾಣದಲ್ಲಿ ಭರತ ಚಕ್ರವರ್ತಿಯು ಪರಮೇಶ್ವರನನ್ನು ಕುರಿತು ಮಾಡುವ ಸ್ತೋತ್ರ ಪದ್ಯಗಳು ಇದಕ್ಕೆ ಉದಾಹರಣೆಗಳು 'ಕೀರ್ತನೆ'ಗಳೆಂಬ ಈ ಸಾಹಿತ್ಯ ರೂಪ, ವೈಷ್ಣವ ಭಕ್ತಿಯು ಕನ್ನಡ ನಾಡಿನಲ್ಲಿ ಪ್ರವಹಿಸಿದ ಸಂದರ್ಭದಲ್ಲಿ ಹುಟ್ಟಿಕೊಂಡಿತು. ವೀರಶೈವ ಧರ್ಮದ ಉತ್ಕರ್ಷದ ಕಾಲದಲ್ಲಿ ಹೇಗೆ ವಚನಗಳು ನಿರ್ಮಿತಿಯಾದವೋ ಅದೇ ರೀತಿ ಭಾಗವತ ಸಂಪ್ರದಾಯದ ಉತ್ಕರ್ಷದ ಕಾಲದಲ್ಲಿ

ಕೀರ್ತನೆಗಳು ಹುಟ್ಟಿಕೊಂಡವು. ಒಂದು ಶ್ರೀರಾಮಾನುಜರಿಂದ ಕರ್ನಾಟಕಕ್ಕೆ ಬಂದ ಶ್ರೀವೈಷ್ಣವ, ಮತ್ತೊಂದು ಮಧ್ವಾಚಾರ್ಯರಿಂದ ಪ್ರಚಲಿತವಾದ ದ್ವೈತಮತ. ಮಧ್ವಾಚಾರ್ಯರ ಅನುಯಾಯಿಗಳಾದ ಹರಿದಾಸರಿಂದ ಕನ್ನಡದಲ್ಲಿ ವೈಷ್ಣವ ಸಾಹಿತ್ಯದ ಕೀರ್ತನೆಗಳು ರಚನೆಗೊಂಡವು. ಹದಿಮೂರನೇ ಶತಮಾನದ ಕೊನೆಗಿದ್ದ ನರಹರಿ ತೀರ್ಥರೇ ಈ ಪರಂಪರೆಗೆ ಮೊದಲಿಗರೆನ್ನಬಹುದು. ಇಲ್ಲಿಂದ ಹದಿನೈದನೆಯ ಶತಮಾನದೊಳಗಿನ ಅವಧಿಯಲ್ಲಿ ರಚಿತವಾದ ಕುಮಾರವ್ಯಾಸ ಭಾರತವು ಈ ಕಾಲದ ಭಾಗವತ ಪರಂಪರೆಯ ಉತ್ಕರ್ಷಕ್ಕೆ ಸಾಕ್ಷಿಯಾಗಿದೆ.

ಹದಿನೈದನೆಯ ಸತಮಾನದ ಶ್ರೀಪಾದರಾಯರು, ಹದಿನಾರನೆಯ ಶತಮಾನದ ಮೊದಲರ್ಧದಲ್ಲಿ ವ್ಯಾಸರಾಯರು ಮತ್ತು ಅವರ ಶಿಷ್ಯಂದಿರಾದ ಪುರಂದರದಾಸರು, ಕನಕದಾಸರು; ಇವರ ಕೀರ್ತನೆಗಳಲ್ಲಿ 'ದಾಸವಾಙ್ಮಯ'ವು ಶಿಖರಕ್ಕೇರಿತು. ಅವರ ತರುವಾಯ ವಾದಿರಾಜ, ವಿಜಯದಾಸ, ಜಗನ್ನಾಥದಾಸ, ಪ್ರಸನ್ನ ವೆಂಕಟದಾಸ ಮೊದಲಾದವರು ಈ ಪರಂಪರೆಯನ್ನು ಮುಂದುವರೆಸಿಕೊಂಡವರಲ್ಲಿ ಪ್ರಮುಖರು.

ಹರಿದಾಸರ ಕೀರ್ತನೆಗಳಿಗೆ ವಚನ ಸಾಹಿತ್ಯ ಸಾಕಷ್ಟು ಪ್ರೇರಣೆಯನ್ನು ನೀಡಿದೆ. ಎಷ್ಟೋ ಕೀರ್ತನೆಗಳು ಶಿವಶರಣರ ವಚನಗಳನ್ನು ಹೋಲುತ್ತವೆ. ಕೀರ್ತನೆಗಳು ಹಾಡಾಗಿ, ಹಾಡುವುದಕ್ಕಾಗಿಯೇ ಹುಟ್ಟಿಕೊಂಡವು. ಮೊದಲು ಪಲ್ಲವಿ, ಅನುಪಲ್ಲವಿ, ಅನಂತರ ನಾಲ್ಕು ಪಾದಗಳ ಕೆಲವು ಪದ್ಯಗಳು ಇದು ಕೀರ್ತನೆಗಳ ರೂಪ. ಕೀರ್ತನೆಗಳ ಮೂಲ ವಸ್ತು ಮಾಧ್ವಮತದ ತತ್ವಜ್ಞಾನ, ದೇವತಾ ಸ್ತುತಿ, ಪರಮಾತ್ಮನ ವಿವಿಧ ಲೀಲೆಗಳ ಉಲ್ಲೇಖ, ವೈಯಕ್ತಿಕವಾದ ಅನಿಸಿಕೆ, ತೊಳಲಾಟಗಳು ಮತ್ತು ಸಮಾಜ ವಿಮರ್ಶೆಯಾಗಿದೆ. ಈ ಕೀರ್ತನೆಗಳಿಂದ ಮುಖ್ಯವಾಗಿ ಪುರಂದರದಾಸರ ಕೀರ್ತನೆಗಳಿಂದ ಕರ್ನಾಟಕ ಸಂಗೀತವು ಉದಯವಾಗಿ, ತೆಲುಗಿನ ಸುಪ್ರಸಿದ್ಧ ವಾಗ್ಗೇಯಕಾರರಾದ ತ್ಯಾಗರಾಜರಿಗೆ ಸ್ಫೂರ್ತಿಯಾಯಿತೆಂಬುದು ತುಂಬ ಮಹತ್ವದ ವಿಷಯವಾಗಿದೆ.

ಕನ್ನಡದಲ್ಲಿ ಕೀರ್ತನೆಗಳನ್ನು ಹರಿದಾಸರಲ್ಲದೆ, ನಿಜಗುಣಶಿವಯೋಗಿಗಳು, ಮುಪ್ಪಿನ ಷಡಕ್ಷರಿ, ಸರ್ಪಭೂಷಣ ಶಿವಯೋಗಿಗಳೂ ವಚನಕಾರರಿಂದ ಸ್ಫೂರ್ತಿ ಪಡೆದು ಕೀರ್ತನೆಗಳನ್ನು ರಚಿಸಿದ್ದಾರೆ.

ನಡುಗನ್ನಡ ಕಾವ್ಯ ಪರಂಪರೆಯಲ್ಲಿ ಶರಣರ ವಚನಗಳು, ದಾಸರ ಕೀರ್ತನೆಗಳಷ್ಟೆ ಜನಪ್ರಿಯವಾಗಿರುವ ಕಾವ್ಯ ರೂಪಗಳೆಂದರೆ 'ತ್ರಿಪದಿಗಳು'. ಅಂದಿನ ಸಂಕೀರ್ಣ ಪ್ರಕ್ಷುಬ್ಧ, ಅತೃಪ್ತ ವ್ಯವಸ್ಥೆಯಲ್ಲಿ ಸರ್ವಜ್ಞನ ಲೋಕನೀತಿಯು ಸರ್ವಜನಾದರಣೀಯಗೊಂಡಿದೆ. ಇದೊಂದು ಛಂದೋ ರೂಪ. ಕ್ರಿ.ಶ. ೭೦೦ರ ಬಾದಾಮಿ ಶಾಸನದಲ್ಲಿ ಇದರ ಮೊದಲ ರೂಪವನ್ನು ಗುರುತಿಸಬಹುದು. ಅನಂತರ ಕವಿರಾಜಮಾರ್ಗದಲ್ಲಿ ಇದರ ಪ್ರಸ್ತಾಪವಿದೆ. ಹಳ್ಳಿಯ ಹಾಡುಗಳೆಂದು ಕರೆಯುವ ಜನಪದ ಸಾಹಿತ್ಯದಲ್ಲಿ ತ್ರಿಪದಿಯದೇ ಪ್ರವಾಹ. 'ತ್ರಿಪದಿ'ಯು. ಅಚ್ಚುಕಟ್ಟಾದ ಅಡಕವಾದ

ಮೂರು ಪಂಕ್ತಿಯ ಈ ಬಂಧ, ನೆನಪಿನಲ್ಲಿಡಲು ಸುಲಭವೂ, ಹಾಡಿಕೊಳ್ಳಲು ಅನುಕೂಲವೂ ಆದ ಕಾರಣ ಜನಸಾಮಾನ್ಯರ ಅಭಿವ್ಯಕ್ತಿಯಾಗಿ ಇದು ವಿಶೇಷವಾಗಿ ಕಾಣಿಸಿಕೊಂಡಿದೆ. ಹಾಡುವಾಗ, ಎರಡನೆಯ ಪಂಕ್ತಿಯನ್ನು ಪುನರಾವರ್ತನೆ ಮಾಡಿ, ಮೂರನೆಯ ಪಂಕ್ತಿಗೆ ತರುವುದರಿಂದ, ತ್ರಿಪದಿಯ ಪಾದಗಳ ಸಂಖ್ಯೆ ನಾಲ್ಕಾಗುತ್ತದೆ.

'ತ್ರಿಪದಿ' ಕೃತಿ ರಚನೆಗೈದವರು ವಿಶೇಷವಾಗಿ ವೀರಶೈವರೇ ಅಕ್ಕಮಹಾದೇವಿ, ಕರಸ್ಥಲದ ನಾಗಿದೇವ, ನಿಜಗುಣ ಶಿವಯೋಗಿ, ಸರ್ವಜ್ಞ ಮತ್ತು ಆಧುನಿಕ ಕಾಲದಲ್ಲಿ 'ಸಿದ್ಧರಾಮೇಶ್ವರ ಪುರಾಣ'ವನ್ನು ಬರೆದ ಜಯದೇವಿ ತಾಯಿ ಲಿಗಾಡೆ. ಸರ್ವಜ್ಞನ ತ್ರಿಪದಿಗಳು ಜನಪ್ರಿಯವಾಗಿವೆ. 'ಹಿಡಿದರೆ ಹಿಡಿತುಂಬ, ಬಿಟ್ಟರೆ ಜಗವೆಲ್ಲ' ಎನ್ನುವಂತೆ ಅತ್ಯಂತ ಸರಳ ಸಂಕ್ಷಿಪ್ತ ಛಂದೋಬಂಧವನ್ನೊಳಗೊಂಡಿವೆ.

ಉದಾ:

೧. ವಿದ್ಯೆ ಕಲಿಸದ ತಂದೆ, ಬುದ್ಧಿ ಹೇಳದ ಗುರು
ಬಿದ್ದಿರಲು ಬಂದು ನೋಡದ ತಾಯಿಯು
ಶುದ್ಧ ವೈರಿಗಳು ಸರ್ವಜ್ಞ

೨. ನಾರಿ ಪರರುಪಕಾರಿ, ನಾರಿ ಸ್ವರ್ಗಕ್ಕೆ ದಾರಿ
ನಾರಿ ಸಕಲರಿಗೆ ಹಿತಕಾರಿ, ಮುನಿದರೆ
ನಾರಿಯೆ ಮಾರಿ ಸರ್ವಜ್ಞ

ತ್ರಿಪದಿಗೆ ಹೋಲಿಸಿದರೆ ಸಾಂಗತ್ಯವು 'ತ್ರಿಪದಿಗಿಂತ ಹೆಚ್ಚು ಕವಿಪ್ರಿಯ ಮತ್ತು ಜನಪ್ರಿಯ'ವಾದ ಸಾಹಿತ್ಯ ರೂಪವಾಗಿದೆ. ಆದರೆ ಇದು ತ್ರಿಪದಿಯಷ್ಟು ಪ್ರಾಚೀನವಾದ ರೂಪವಲ್ಲ. ತ್ರಿಪದಿ ಏಳನೆಯ ಶತಮಾನದಷ್ಟು ಹಳೆಯದಾದರೆ, ಸಾಂಗತ್ಯದ ಮೊದಲ ಕೃತಿ ಹದಿನೈದನೆಯ ಶತಮಾನದಷ್ಟು ಹಳೆಯದು. ಆದರೂ ತ್ರಿಪದಿಯನ್ನು ಕಾವ್ಯ ರೂಪಕ್ಕೆ ಬಳಸಿದ ಕವಿಗಳಿಗಿಂತ, ಸಾಂಗತ್ಯವನ್ನು ಕಾವ್ಯಕ್ಕೆ ಬಳಸಿದ ಕವಿಗಳ ಸಂಖ್ಯೆಯೆ ಮಿಗಿಲಾಗಿದೆ. 'ಸಾಂಗತ್ಯ' ಕೂಡ ತ್ರಿಪದಿಯಂತೆಯೇ 'ಹಾಡುಗಬ್ಬ'. ಕನ್ನಡದಲ್ಲಿ ಇಪ್ಪತ್ತೈದಕ್ಕೂ ಹೆಚ್ಚಿನ ಸಾಂಗತ್ಯದ ಕವಿಗಳು ಕಂಡು ಬರುತ್ತಾರೆ. ಅವರಲ್ಲಿ ಶಿಶುಮಾಯಣ, ನಂಜುಂಡ, ಕನಕದಾಸ ಮತ್ತು ರತ್ನಾಕರವರ್ಣಿ ಇವರು ಪ್ರಮುಖರು. ರತ್ನಾಕರವರ್ಣಿ ಸಾಂಗತ್ಯದಲ್ಲಿ ಶೃಂಗಾರ-ವೈರಾಗ್ಯ ಪ್ರಧಾನವಾದ ಮಹಾಕಾವ್ಯ "ಭರತೇಶ ವೈಭವ'ವನ್ನು ಬರೆದರೆ, ನಂಜುಂಡನು ಐತಿಹಾಸಿಕ ವಸ್ತುವನ್ನಾಧರಿಸಿ ವೀರರಸ ಪ್ರಧಾನವಾದ 'ರಾಮನಾಥ ಚರಿತ' ಅಥವಾ 'ಕುಮಾರರಾಮನ ಸಾಂಗತ್ಯ'ವನ್ನು ಬರೆದಿದ್ದಾನೆ.

ಕನಕದಾಸರು 'ಮೋಹನ ತರಂಗಿಣಿ'ಯಲ್ಲಿ ಪೌರಾಣಿಕ ವಸ್ತುವನ್ನು ಕುರಿತು ಕಾವ್ಯ ಬರೆಯುತ್ತಾ, ತಮ್ಮ ಸಮಕಾಲೀನವಾದ ವಿಜಯನಗರ ಕಾಲದ ವೈಭವವನ್ನೆಲ್ಲಾ ಬಣ್ಣಿಸಿದ್ದಾರೆ. ಸಂಚಿಯ ಹೊನ್ನಮ್ಮ 'ಹದಿಬದೆಯ ಧರ್ಮ'ದಂಥ ನೀತಿ ಕಾವ್ಯವನ್ನು ಸಾಂಗತ್ಯದಲ್ಲಿ ಬರೆದಿದ್ದಾಳೆ. ಹೊಸಗನ್ನಡದ ಕವಿಗಳು ಕೂಡ ಸಾಂಗತ್ಯ ರೂಪದಲ್ಲಿ

ಕೃತಿ ರಚಿಸಿದ್ದಾರೆ. ಎಸ್.ವಿ.ಪರಮೇಶ್ವರಭಟ್ಟರು ತಮ್ಮ 'ಇಂದ್ರ ಚಾಪ' ಮತ್ತು 'ಚಂದ್ರ ವಿಧಿ'ಗಳಲ್ಲಿ ಸಾಂಗತ್ಯವನ್ನು ಯಶಸ್ವಿಯಾಗಿ ಬಳಸಿದ್ದಾರೆ. ಇಲ್ಲಿ ಮಹಿಳೆ ಕೂಡ ಸಾಂಗತ್ಯ ರಚಿಸಿದ್ದು ವಿಶೇಷ.

ಉದಾ: ರತ್ನಾಕರವರ್ಣಿ – ಭರತೇಶ ವೈಭವ ಕಾವ್ಯ ಸಾಲುಗಳು ಹೀಗಿವೆ.

> **"ಭರತೇಶ ಭುಜಬಲಿರಾಜರ ಮಂತ್ರಿ ಮಿ**
> **ತ್ರರು ನಡುನೆಲದೊಳೊಗ್ಗಾಗಿ**
> **ದೊರೆಗಳಿಬ್ಬರ ಕದನಕೆ ಮುಂದೆ ಯೋಚಿಸಿ**
> **ದರು ಮೃದುಕಲೆಯನೇನೆಂಬೆ ॥ ೧ ॥**

ಈ ರೀತಿಯಾಗಿ ನಡುಗನ್ನಡ ಕಾವ್ಯ ಪರಂಪರೆ ಜನಸಾಮಾನ್ಯರ ಮೆಚ್ಚಿನ ಸಾಹಿತ್ಯವಾಗಿ, ನಡೆದು ಬಂದಿರುವುದನ್ನು ಕಾಣುತ್ತೇವೆ.

ಡಾ. ಸಾರಿಕಾದೇವಿ ಕಾಳಗಿ
ಕನ್ನಡ ಪ್ರಾಧ್ಯಾಪಕರು
ಶರಣಬಸವ ವಿಶ್ವವಿದ್ಯಾಲಯ
ಕಲಬುರಗಿ

ನುಡಿ ಮುತ್ತು

ಎಲ್ಲದಕ್ಕೂ ವಿಶ್ರಾಂತಿ ಸಿಗುತ್ತದೆ,
ಆದರೆ 'ಹೃದಯ' ಮಾತ್ರ ಯಾವುದೇ ವಿಶ್ರಾಂತಿಯಿಲ್ಲದೆ
ಸತತವಾಗಿ ಕೆಲಸ ಮಾಡುತ್ತಿರುತ್ತದೆ..
ಆದ್ದರಿಂದ ಆ ಹೃದಯವನ್ನು ಯಾವಾಗಲೂ
ಖುಷಿಯಾಗಿಡಬೇಕು.. ಅದು ನಮ್ಮದಾಗಿರಲಿ
ಅಥವಾ ಬೇರೆಯವರದೇ ಆಗಿರಲಿ...

ನುಡಿ ಮುತ್ತು

ನಿಜ ಬದುಕಿನಲ್ಲಿ ಮಾನವೀಯತೆಗಿಂತ ಮಿಗಿಲಾದುದು ಯಾವುದೂ ಇಲ್ಲ.
ಸೋಲು ಮಾನವೀಯತೆಗಿಂತ ದೊಡ್ಡದಲ್ಲ.
ಬೇರೆಯವರ ಸೋಲುಗಳಲ್ಲಿ ನಮ್ಮ ಗೆಲುವನ್ನು
ನಾವು ಯಾವತ್ತೂ ನೋಡಬಾರದು.
ಬೇರೆಯವರನ್ನು ಸೋಲಿಸಲು ಕಪಟತನಕ್ಕೆ ಇಳಿಯಲೂ ಬಾರದು.
ಆತ್ಮತೃಪ್ತಿಯ ಗೆಲುವು ಮಾತ್ರ ನಿಜವಾದದ್ದು

ನನ್ನೊಳಗಿನ ಹಾಡುಗಾತಿಯ ಹಾಡು–ಪಾಡಿನ ಕಥೆ

ಹಾಡು ಅನ್ನೋದು ಯಾರಿಗ್ತಾನೆ ಇಷ್ಟ ಆಗೋಲ್ಲ ಹೇಳಿ? ಚಿಕ್ಕ ಮಕ್ಕಳಿಂದ ಹಿಡಿದು ದೊಡ್ಡವರು ಕೂಡ ಹಾಡು ಕೇಳುವ ಖಯಾಲಿಯನ್ನ ತಮ್ಮದಾಗಿಸಿ ಕೊಂಡಿದ್ದಾರೆ. ಹಳ್ಳಿಗರು ಸಾಮಾನ್ಯವಾಗಿ ಜಾನಪದ ಹಾಡುಗಳನ್ನು ಕೇಳುತ್ತಾರೆ. ಆದರೆ, ವಯಸ್ಕರು ಸಿನಿಮಾ ಹಾಡುಗಳನ್ನೇ ಉಲಿಯುತ್ತಾರೆ. ಜಾನಪದ ಹಾಡುಗಳನ್ನೇ ಸಿನಿಮಾ ಹಾಡುಗಳನ್ನಾಗಿ ಪರಿವರ್ತಿಸಿ ಕೇಳುವುದು ಈಗಿನ ಹೊಸ ಟ್ರೆಂಡ್ ಆಗಿದೆ.

ಜಾನಪದ ತುಂಬಾ ಇಷ್ಟ: ಪುರಾತನ ಕಾಲದಿಂದಲೂ ಬಂದಿರುವ ಜಾನಪದ ಹಾಡು ಎಲ್ಲರಿಗೂ ಇಷ್ಟ. ಸುಗ್ಗಿಯ ಹಾಡು, ಹಂತಿ ಹಾಡು, ಲಾವಣಿ ಪದಗಳು ಹಳ್ಳಿಜನರೊಂದಿಗೆ ಉಳಿದು, ಬೆಳೆದು ಬಂದಿವೆ. ಇಂದಿನ ಆಧುನಿಕ ಯುಗದಲ್ಲೂ ಜಾನಪದ ಹಾಡುಗಳ ಸೆಳೆತ ಇದೆ. ಈಗಲೇ ಹಳ್ಳಿಗಳಲ್ಲಿ ಹಬ್ಬಹರಿದಿನಗಳ ವೇಳೆಯಲ್ಲಿ ಜಾನಪದ ಹಾಡುಗಳು ಕೇಳುತ್ತವೆ. ರಾಶಿ ಮಾಡುವ ವೇಳೆಯಲ್ಲಿ ಹಂತಿಯ ಪದಗಳು ಕೇಳದೇ ಇದ್ದರೂ ಬೇರೆ ಬೇರೆ ಹಬ್ಬಗಳ ಆಚರಣೆ ವೇಳೆಯಲ್ಲಿ ಜನರು ಜಾನಪದ ಹಾಡುಗಳನ್ನು ಗುಣುಗಿಸುವುದನ್ನು ನೋಡಬಹುದಾಗಿದೆ.

ಹಾಡು ಹಳೆಯದಾದರೂ: ಹಾಡು ಎಷ್ಟೇ ಹಳೆಯದಾದರೂ ರಾಗ, ತಾಳ, ಲಯ, ಸ್ವರ(ನಾದ)ದ ಸೊಬಗು ಸದಾ ಮಾಧುರ್ಯತೆಯಿಂದಲೇ ಕೂಡಿರುತ್ತದೆ. ಜಾನಪದವಿರಲಿ, ಶಾಸ್ತ್ರೀಯ ಸಂಗೀತ, ಸಿನಿಮಾ ಹಾಡು ಯಾವುದಾದರಿರಲಿ ಸಂಗೀತವು ಮನಸ್ಸನ್ನು ಪ್ರಫುಲ್ಲಗೊಳಿಸುತ್ತದೆ. ನಾನು ಸಂಗೀತ ಕಲಿಬೇಕು, ರಾಗ, ತಾಳ, ಲಯದೊಳಗೆ ಬೆರೆಯಬೇಕು, ಹಾಡನ್ನು ಇನ್ನೊಬ್ಬರಿಗೆ ಹೇಳಿಕೊಡಬೇಕು ಅಂತೆಲ್ಲಾ ಚಿಕ್ಕವಳಿದ್ದಾಗಿನಿಂದಲೂ ಕನಸಿದ್ದೆ. ಹೀಗೆ ನನ್ನೊಳಗೆ ಹಾಡು ಬಾಲ್ಯದಿಂದಲೂ ಕಾಡುತ್ತಿದೆ, ಕಾಡಬೇಕು ಅನ್ನುವುದು ನನ್ನ ಬಯಕೆಯೂ ಆಗಿದೆ.

ಅಕ್ಷರಶಃ ಕಲಾವಿದರೆ: ಹಾಡು ಕಿವಿಗೆ ಬಿದ್ದಕೂಡಲೇ ನಾನು ನನ್ನನ್ನೇ ಮರೆಯುತ್ತೇನೆ. ಹಾಡಿನ ಲೋಕದೊಳಗೆ ತೇಲುತ್ತೇನೆ. ನನಗೆ ಗೊತ್ತಿಲ್ಲದೇ ಕೈಕಾಲುಗಳು ಬಡಿಯುತ್ತವೆ. ನನ್ನೀ ಮನಸ್ಥಿತಿಗೆ ಮನೆಯ ಪರಿಸರ ಕೂಡ ಒಂದು ರೀತಿಯಲ್ಲಿ ಪರೋಕ್ಷ ಕಾರಣದಂತಿದೆ. ಮನೆಯ ಬಹುತೇಕ ಸದಸ್ಯರು ಒಂದಲ್ಲಾ ಒಂದು ರೀತಿಯಲ್ಲಿ ಕಲಾವಿದರಂತಿದ್ದಾರೆ. ಆದರೆ, ಅವರ್‍ಯಾರು ಹುಟ್ಟು ಕಲಾವಿದರಲ್ಲ, ಈಗಾಗಲೇ ಕಲಾವಿದರಾಗಿ ಗುರುತಿಸಿಕೊಂಡವರೂ ಅಲ್ಲ. ಆದರೂ ಅವರೆಲ್ಲ ನನ್ನ ಪಾಲಿಗೆ ಅಕ್ಷರಶಃ ಕಲಾವಿದರೆ. ನನ್ನ ತಂಗಿ ಹೀ.ಮಾ.ಜಯಶ್ರೀ ನೃತ್ಯ

ಮಾಡುತ್ತಾಳೆ. ಎಲ್ಲರಿಗಿಂತ ಚಿಕ್ಕವಳಾದರೂ ಮಾತಿನಲ್ಲಿ ತುಂಬಾ ಚುಟಿಯಾಗಿರುವ, ಯಾವುದೇ ಹಾಡು ಕಿವಿಗೆ ಬಿದ್ದರೂ ಕಾಲಿಗೆ ಮಾತ್ರ ವಿರಾಮ ನೀಡುವುದಿಲ್ಲ ಇನ್ನೊಬ್ಬ ತಂಗಿ ಅನುಷಾ ಭರತನಾಟ್ಯದಲ್ಲಿ ಸೈ ಅನಿಸಿಕೊಂಡಿದ್ದಾಳೆ. ಸಹೋದರ ಗಿರೀಶನಿಗೂ ಸಂಗೀತದ ಬಗ್ಗೆ ಅಪಾರ ಒಲವಿದೆ. ಮನೆಯಲ್ಲಿ ಯಾವುದೇ ವಸ್ತು ಸಿಗಲಿ ಅದನ್ನು ಸಂಗೀತದ ಸಾಧನವನ್ನಾಗಿ ಮಾಡಿಕೊಳ್ಳುವಷ್ಟು ಆಸಕ್ತಿ ಗಿರೀಶನಿಗಿದೆ. ಇಳಿ ವಯಸ್ಸಿನ ಅಜ್ಜಿ ಕಸ್ತೂರಿಯು ಆಗಾಗ ಹಳೆಯ ಚಿತ್ರಗೀತೆಗಳನ್ನು ಗುಣುಗುತ್ತಾಳೆ. ನಮ್ಮ ಮಾವನವರಿಗೆ ಕನ್ನಡ, ಹಿಂದಿ ಹಾಡಗಳೆಂದರೆ ಬಹಳ ಪ್ರೀತಿ. ಹೊರಗಿನಿಂದ ಮನೆಯೊಳಗೆ ಬರುತ್ತಲೇ ಟಿವಿ ರಿಮೋಟ್‌ನ್ನು ತಮ್ಮದಾಗಿಸಿಕೊಂಡು ಹಿಂದಿ ಚಾನೆಲ್‌ನಲ್ಲಿ ಹಳೆಯ ಹಿಂದಿ ಗೀತೆಗಳನ್ನು ಕೇಳುತ್ತ ಮೈ ಮರೆಯುತ್ತಾರೆ. ನನ್ನವ್ವ ಲಲಿತಾ ನನ್ನ ತಾಯಿಯನ್ನು ಮೀರಿ ಸಂಗೀತದಲ್ಲಿ ಆಸಕ್ತಿ ಹೊಂದಿದ್ದಾಳೆ. ಹಳೆಯ ಚಿತ್ರಗೀತೆಗೆ ಅಮ್ಮ ದನಿಗೂಡಿಸಿದರೆ. ನನ್ನವ್ವ ಪಕ್ಕಾ ಹಳ್ಳಿಹಾಡುಗಳಾದ ಸೋಬಾನೆ ಪದಗಳನ್ನು ಹಾಡುತ್ತಾಳೆ. ನನ್ನವ್ವನ ಕಂಠ ನಿಜಕ್ಕೂ ಅದ್ಭುತವಾಗಿದೆ. ಸಾಹಿತ್ಯದ ಬಗ್ಗೆ ಸಾಕಷ್ಟು ಆಸಕ್ತಿ ಹೊಂದಿದ ನನ್ನ ಇನ್ನೊಬ್ಬ ಮಾಮಾನಿಗೂ ಹಾಡುಗಳೆಂದರೆ ಅತೀವ ಪ್ರೀತಿ. ಹೀಗೆ ನನ್ನೊಳಗಿನ ಹಾಡುಗಾರ್ತಿ ಬಗ್ಗೆ ಹೇಳಲು ಹೊರಟರೆ ಇದನ್ನೆಲ್ಲ ಹೇಳಲೇಬೇಕು.

ಬೈಸಿಕೊಂಡಿದ್ದೇನೆ: ನಾನು ಗುಂಗಾಡಿ ಹುಳುವಿದ್ದ ಹಾಗೆ. ಮೂರೊತ್ತೂ ಗುಯ್ ಗುಯ್ ಅಂತ ಹಾಡುವ ಚಟದಿಂದಾಗಿ ಎಷ್ಟೋ ಬಾರಿ ಬೈಸಿಕೊಂಡಿದ್ದೇನೆ. ಅಮ್ಮ ಬೈದಳೆಂದು ನಾನ್ಯಾವತ್ತೂ ಹಾಡುವುದನ್ನ ನಿಲ್ಲಿಸಿಲ್ಲ, ನಿಲ್ಲಿಸುವುದೂ ಇಲ್ಲ. ಅವಳು ನಾನು ಹಾಡುವುದಕ್ಕೆ ಬೈಯುತ್ತಿರಲಿಲ್ಲ. ನಾನು ಹಾಡುವಿಕೆಯು ಮನೆಯ ಇತರರಿಗೆ ಕಿರಿಕಿರಿಯಾಗುತ್ತದೆಂದು. ಆದರೆ, ಅವಳಿಗದು ಗೊತ್ತೇ ಇಲ್ಲ. ಮನೆಯ ಬಹುತೇಕ ಎಲ್ಲರೂ ಈ ಸಂಗೀತ ಆಸಕ್ತರೇ, ಹಾಡುಗಾರರೇ ಅಂತ. ಎಷ್ಟೋ ಸಲ ಬೈಸಿಕೊಂಡಿದ್ದರೂ ನನ್ನ ಮನಸ್ಸು ಮಾತ್ರ ಹಾಡಿನ ಗುಂಗಿನಿಂದ ಹೊರ ಬಂದಿಲ್ಲ.

ಸ್ವರ ಬಾರದೇ ಇದ್ದರೂ ತಂಬೂರಿ ನುಡಿಸಲೇಬೇಕು ಎನ್ನುವಂತೆ ಮೊದಲು ನನಗೆ ಹಾಡಲು ಬರುತ್ತಿರಲಿಲ್ಲ. ಹಾಡ್ತಾ ಹಾಡ್ತಾ ರಾಗ ಅಂತ ನನ್ನ ಗುರುಗಳು ಹೇಳಿ ಪ್ರೇರೇಪಿಸಿದ ಕಾರಣ ನಾನೀಗ ಹಾಡುಗಾರ್ತಿಯಾಗಿದ್ದೇನೆ. ಹಾಡೋದನ್ನು ಕಲಿಬೇಕು ಅಂತ ಇನ್ನೂ ಎಳವೆಯಲ್ಲಿಯೇ ನಾನು ಕನಸು ಕಾಣುತ್ತಿರುವಾಗ, ತೊದಲು ಹಾಡುತ್ತಿರುವಾಗ, ನನ್ನೊಳಗಿನ ಹಾಡುಗಾರ್ತಿಯನ್ನು ಗುರುತಿಸಿ, ಪ್ರೇರೇಪಿಸದೇ ಇದ್ದರೆ ನಿಜಕ್ಕೂ ನಾನು ಹಾಡುತ್ತಿರಲಿಲ್ಲ. ನಾನು ಪ್ರೈಮರಿ ಓದುವಾಗಿನ ಆ ದಿನಗಳ ನೆನಪೂ ಈಗಲೂ ಇದೆ. ಅದೊಂದು ದಿನ ಶಾಲೆಯಲ್ಲಿ ನಾನು ಹಾಡುವುದನ್ನು ನೋಡಿ ನಮ್ಮ ಶಾಲೆಯ ಶಿಕ್ಷಕಿ ಹುಂಡೇಕಾರ ಮೇಡಂ ಅವರು ಪುಸ್ತಕವೊಂದನ್ನು ವಿತರಿಸಿ ಪ್ರೋತ್ಸಾಹಿಸಿದ್ದನ್ನು, ಈ ಜನ್ಮವಿರುವವರೆಗೂ ಮರೆಯಲಾದೀತೆ? ಆ ದಿನಗಳಿಂದಲೇ ನಾನು ಹೆಚ್ಚೆಚ್ಚು ಹಾಡುವುದನ್ನ ಪ್ರಾರಂಭ

ಮಾಡಿಕೊಂಡೆ. ಬೆಳೀತಾ ಬೆಳೀತಾ ಈಗ ಹಾಡುಗಳಿಲ್ಲದೇ ನಾನಿಲ್ಲ ಅನ್ನುವ ಮಟ್ಟಿಗೆ ಬಂದು ನಿಂತಿದ್ದೇನೆ. ಜಾನಪದ ಗೀತೆ, ಭಾವಗೀತೆ, ಸಿನಿಮಾ ಗೀತೆ ಹೀಗೆ ನಾನಾ ಪ್ರಕಾರದಲ್ಲಿ ಹಾಡುತ್ತೇನೆ.

ಧ್ವನಿ ಚೆನ್ನಾಗಿದೆ: ನಾನು ಹಾಡುವುದನ್ನು ಕೇಳುವ ಗೆಳತಿಯರು ನಿನ್ನ ಧ್ವನಿ ಚೆನ್ನಾಗಿದೆ. ಚೆನ್ನಾಗಿ ಹಾಡುತ್ತಿಯಾ. ಹಾಡುವುದನ್ನ ಮುಂದುವರಿಸು ಎಂದು ಹೇಳಿದವರು ತುಂಬಾ ಜನ ಇದ್ದಾರೆ.

ಸಂಗೀತವನ್ನು ಶಾಸ್ತ್ರೀಯವಾಗಿ ಕಲಿಯಲ್ಲಿಲ್ಲ ಎನ್ನುವ ಬೇಸರ ನನ್ನಲ್ಲಿದೆ. ಶಾಸ್ತ್ರೀಯವಾಗಿ ಕಲಿಯಲೇಬೇಕು ಎಂದು ಅಂದುಕೊಂಡು ಆ ದಿಶೆಯಲ್ಲಿ ಪ್ರಯತ್ನ ನಡೆಸಿದ್ದೇನೆ.

ಶಾಸ್ತ್ರೀಯ ಸಂಗೀತ ಕಲಿಯುತ್ತ ಹಾಡಿನಲ್ಲಿ ತನ್ಮಯಳಾಗಬೇಕು. ಜೊತೆಗೆ ವೀಣೆ, ಸಿತಾರ ನುಡಿಸುವುದನ್ನು ಕೂಡ ಕಲಿಯಬೇಕು ಅಂದುಕೊಂಡಿದ್ದೇನೆ. ಹಾಗೆಯೇ ನೃತ್ಯ ಮತ್ತು ಭರತನಾಟ್ಯದಲ್ಲೂ ಆಸಕ್ತಿ ಹೊಂದಿದ್ದೇನೆ. ಸಂಗೀತ-ಕಲೆಯ ಬಗೆಗಿನ ನನ್ನ ಆಸೆಗಳಿಗೆ ಮಿತಿನೇ ಇಲ್ಲ. ಹಾಡುತ್ತಿರಬೇಕು ನಾನು. ಕುಣಿಯುತ್ತಿರಬೇಕು ಎಂದು ಸದಾಕಾಲ ಯೋಚಿಸುತ್ತಲೇ ಇರುತ್ತೇನೆ.

ಬಿಸಿಲ ನಾಡಿನ ನನ್ನಂತಹ ಉದಯೋನ್ಮುಖ ಹಾಡುಗಾರ್ತಿಯರಿಗೆ ಅವಕಾಶಗಳು ಸಿಗುವುದು ತುಸು ಕಡಿಮೆ ಎಂದೇ ಹೇಳಬಹುದು. ಆದರೂ ಬಿಡುವುದಿಲ್ಲ. ನನ್ನ ಪ್ರಯತ್ನವನ್ನು ಮುಂದುವರೆಸುತ್ತೇನೆ. ಹಾಡುತ್ತೇನೆ. ಬೇಳೆಯುತ್ತೇನೆ. ಹಾಡಲು ಇತರರಿಗೂ ಪ್ರೇರೇಪಿಸುತ್ತೇನೆ ಹಾಡುವುದನ್ನು ನಿಲ್ಲಿಸಲಾರೆ: ನಾನು ಹಾಡುವುದನ್ನು ನಿಲ್ಲಿಸಿಬಿಡಲೇ. ಎಲ್ಲಿಯೂ ಅವಕಾಶಗಳು ಸಿಗುತ್ತಿಲ್ಲ ಎಂದು ಎಷ್ಟೋ ಸಲ ಅನಿಸುತ್ತದೆ. ಆದರೆ, ಮನಸು ಒಪ್ಪುತ್ತಿಲ್ಲ. ಅದು ಹೇಳುತ್ತದೇ, ಹಾಡುವುದನ್ನು ನಿಲ್ಲಿಸಲಾರೆ.

ಡಾ.ರಾಜಕುಮಾರ, ಎಸ್.ಪಿ.ಬಾಲಸುಬ್ರಮಣ್ಯ, ಕೆ.ಜೆ.ಯೇಸುದಾಸ್, ಅರ್ಜುನ್ ಜನ್ಯ, ರಾಜೇಶ್ ಕೃಷ್ಣ, ವಿಜಯ ಪ್ರಕಾಶ್, ರಘು ದಿಕ್ಷೀತ್, ಎಂ.ಡಿ. ಪಲ್ಲವಿ, ಹೇಮಂತ, ಗುರುಕಿರಣ್ ಇನ್ನು ಕೆಲವರ ಹಾಡು ಕೇಳುವಾಗೆಲ್ಲಾ ನನ್ನ ಮೈ ರೋಮಾಂಚನವಾಗುತ್ತದೆ. ಇವರು ಸೇರಿದಂತೆ ಇನ್ನೂ ಅನೇಕರು ನನಗೆ ಪ್ರೇರಣೆ.

ನಾನು ಹಾಡುವುದನ್ನ ಮುಂದುವರಿಸಬೇಕು. ಮೊದಲಿನಿಂದ ಅಂದುಕೊಂಡದ್ದು ಇದೊಂದೆ. ನನ್ನ ಜೊತೆಗೆ ಯಾರು ಇಲ್ಲದೇ ಇದ್ದರೂ ಪರವಾಗಿಲ್ಲ, ನಾನು ಹಾಡಿನ ಜೊತೆಗಿರಬೇಕು. ಖಾಲಿ ಕುಳಿತು ನನಗೆ ಅಭ್ಯಾಸವಿಲ್ಲ. ಯಾವುದಾದರೂ ಒಂದು ಕೆಲಸದಲ್ಲಿ ನನ್ನನ್ನು ನಾನು ತೊಡಗಿಸಿಕೊಂಡೇ ಇರುತ್ತೇನೆ. ಸುಮ್ಮನೆ ಕುಳಿತರೆ ಹಳೆಯ ಕಹಿ ಘಟನೆಗಳು ನನ್ನನ್ನು ನೆಮ್ಮದಿಯಿಂದ ಇರುವುದಕ್ಕೆ ಬಿಡುವುದಿಲ್ಲ. ಈ ವೇಳೆಯಲ್ಲಿ ಹಾಡುವುದು ನನ್ನ ಮನಸಿಗೆ ತಂಪನ್ನೆರೆಯುತ್ತವೆ.

ತುಂಬಾ ಜನರು ನನ್ನ ಸ್ವಭಾವದ ಬಗ್ಗೆ ದೂರುತ್ತಾರೆ. ಯಾರೊಂದಿಗೂ ಅತೀ ಹೆಚ್ಚು ಬೆರೆಯಲು ನನ್ನ ಮನಸು ಒಪ್ಪುವುದಿಲ್ಲ. ಒಂಟಿಯಾಗಿರಲು ಇಷ್ಟಪಡುತ್ತೇನೆ. ಯಾಕೆಂದರೆ ಅದೇ ನನ್ನೊಳಗಿನ ಹಾಡುಗಾತಿಗೆ ಹಾಡಲು ಅವಕಾಶ ಸಿಗಲೆಂದು, ಅವಳು ಹಾಡುತ್ತಲೇ ಇರಲೆಂದು. ಹೀಗಿದೆ ನನ್ನೊಳಗಿನ ಹಾಡುಗಾತಿಯ ಹಾಡು ಪಾಡಿನ ಕಥೆ.

– ಲಕ್ಷ್ಮೀ ಪೂಜಾರ,
ಎಂ.ಎ. ಪತ್ರಿಕೋದ್ಯಮ,
ಗಜೇಂದ್ರಗಡ

ಕನ್ನಡಾಭಿಮಾನ

ಪುಣ್ಯವಂತರು ನಾವು
ಭಾಗ್ಯವಂತರು ನಾವು
ಇಂಥ ನಾಡನು ಪಡೆದ
ಇಂಥ ನುಡಿಯನು ಪಡೆದ
ಕನ್ನಡ ನಾಡಿನ ಜನರು ನಾವು

ಮಾರು ಹೋದೆನಾ
ಜೀವ ಸಂಕುಲಕೆ
ಚುಮು ಚುಮು ಮಂಜಿನ
ಬೆಳಗಿನ ಕಿರಣಕೆ

ಕಣ್–ಮನ ಸೆಳೆಯುವ
ಅರುಣೋದಯ
ದಿನ–ದಿನ ತಣಿಯುವ
ಈ ಜಗ–ಹೃದಯ.......

– ಡಾ.ಡಿ. ಶ್ರೀಧರ್
ಸಹಾಯಕ ಸಸ್ಯ ಸಂರಕ್ಷಣಾ ಅಧಿಕಾರಿ
ಭಾರತ ಸರ್ಕಾರ, ಚನ್ನೈ– ೨೭

ರಾಯಚೂರು ಜಿಲ್ಲೆಯ ಶೈಕ್ಷಣಿಕ ಮಟ್ಟದ ಕುರಿತು ಒಂದು ಅವಲೋಕನ

ಕರ್ನಾಟಕದ ರಾಯಚೂರು ಜಿಲ್ಲೆಯು ಐತಿಹಾಸಿಕ ಪ್ರಾಮುಖ್ಯತೆಯನ್ನು ಪಡೆದಿದೆ. ಈ ಜಿಲ್ಲೆ ಹೈದ್ರಾಬಾದ ನಿಜಾಮನ ಆಳ್ವಿಕೆಗೆ ಒಳಪಟ್ಟಿತ್ತು. ರಾಯಚೂರನ್ನು ದೋಅಬ್ ಪ್ರದೇಶವೆಂದು ಕರೆಯಲಾಗುತ್ತದೆ. ಇತಿಹಾಸದಲ್ಲಿ ಶ್ರೀಮಂತವಾಗಿರುವ ಈ ಜಿಲ್ಲೆಯಲ್ಲಿ ಅನೇಕ ಸಾಹಿತಿಗಳು, ಶರಣರು, ದಾಸರು, ಸೂಫಿಸಂತರು ನೆಲೆಸಿದ ಪರಂಪರೆಯನ್ನು ಹೊಂದಿದೆ. ೧೨ನೇಯ ಶತಮಾನದಲ್ಲಿ ಬರುವ ಮುಕ್ತಾಯಕ್ಕ ಮತ್ತು ಆಯ್ದಕ್ಕಿ ಲಕ್ಕಮ್ಮನವರ ಗಂಡನಮನೆ ರಾಯಚೂರು ಆಗಿತ್ತು ಎಂದು ಇತಿಹಾಸದ ಕುರುಹುಗಳಿವೆ. ರಾಯಚೂರಿನ ಕೋಟೆಯನ್ನು ರಾಣಿ ರುದ್ರಮ್ಮದೇವಿ ಕಟ್ಟಿಸಿದಳು ಎಂಬ ಐತಿಹ್ಯವನ್ನು ಕಾಣಬಹುದಾಗಿದೆ. ಸಾಹಿತ್ಯ ಪರಂಪರೆಯಲ್ಲಿ ಉನ್ನತ ಇತಿಹಾಸವನ್ನು ಹೊಂದಿದ ಈ ಜಿಲ್ಲೆ ಶೈಕ್ಷಣಿಕವಾಗಿ ಹಿಂದುಳಿದಿದೆ.

ರಾಯಚೂರು ಆಂಧ್ರದ ಗಡಿಗೆ ಹೊಂದಿಕೊಂಡಿದೆ. ರಾಯಚೂರು, ದೇವದುರ್ಗ, ಮಾನ್ವಿ, ಸಿಂಧನೂರ ಮತ್ತು ಲಿಂಗಸೂಗುರು ತಾಲ್ಲೂಕಗಳನ್ನು ಒಳಗೊಂಡಿದೆ. ಜಿಲ್ಲೆಯ ನಗರ ಮತ್ತು ಪಟ್ಟಣಗಳನ್ನು ಬಿಟ್ಟು ೮೧೫ ಗ್ರಾಮಗಳನ್ನು ಹೊಂದಿದೆ. ಈ ಜಿಲ್ಲೆಯಲ್ಲಿ ನೀರಾವರಿ ಮತ್ತು ಖುಷ್ಕಿ ಭೂ ಪ್ರದೇಶಗಳನ್ನು ಕಾಣುತ್ತೇವೆ. ಬಹುಪಾಲು ಜನರು ಕೃಷಿಯನ್ನು ಅವಲಂಬಿಸಿದ್ದಾರೆ. ಜಿಲ್ಲೆಯಲ್ಲಿ ಅನೇಕ ಹಳ್ಳಿಗಳಲ್ಲಿ ಕೃಷಿ ಕಾರ್ಮಿಕರು ಋತುಮಾನ ಕೆಲಸಗಳು ಮುಗಿದ ಮೇಲೆ ದೂರದ ನಗರಗಳಿಗೆ ಗುಳೆ ಹೋಗುತ್ತಾರೆ. ರಾಯಚೂರು ಜಿಲ್ಲೆ ೮.೩೮೮ ಕಿ. ಮೀ. ವಿಸ್ತೀರ್ಣವನ್ನು ಹೊಂದಿದ್ದು ೫ ತಾಲ್ಲೂಕಗಳನ್ನು ಒಳಗೊಂಡಿದೆ.

ಜನಗಣತಿ ೨೦೦೧ ರ ಪ್ರಕಾರ ರಾಯಚೂರು ಜಿಲ್ಲೆಯಲ್ಲಿ ಒಟ್ಟು ೮೩೦ ಹಳ್ಳಿಗಳಲ್ಲಿ ೩೪೬ ಹಳ್ಳಿಗಳನ್ನು ಶೇಕಡ ೪೦ ಕ್ಕಿಂತಲೂ ಕಡಿಮೆ ಸಾಕ್ಷರತೆ ಹೊಂದಿದೆ ಎಂದು ಗುರುತಿಸಲಾಗಿದೆ. ಜಿಲ್ಲೆಯಲ್ಲಿ ಸಾಕ್ಷರ ಮಹಿಳೆಯರ ಸಂಖ್ಯೆಗಿಂತ ಅನಕ್ಷರಸ್ಥ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ. ಅದಕ್ಕಾಗಿ ಇಲ್ಲಿಯ ಮಾನವ ಅಭಿವೃದ್ಧಿ ಸೂಚ್ಯಾಂಕ ರಾಜ್ಯದಲ್ಲಿಯೇ ಕೆಳಮಟ್ಟದಲ್ಲಿರಲು ಸಾಕ್ಷರತೆಯ ಹಿನ್ನಡೆ ಕಾರಣವಾಗಿದೆ. ಮಾನವ ಅಭಿವೃದ್ಧಿಯ ವರದಿ ಧೃಡಪಟ್ಟಿರುವಂತೆ ಜಿಲ್ಲೆಯ ಮಹಿಳೆಯರ ಸ್ಥಿತಿಗತಿಗಳು ತೀರ ಕೆಳಮಟ್ಟದಲ್ಲಿವೆ. ಈ ಜಿಲ್ಲೆಯಲ್ಲಿ ಅಪೌಷ್ಟಿಕ ಮಕ್ಕಳ ಸಂಖ್ಯೆ ತಾಯಿಮರಣ ಪ್ರಮಾಣ ಶಿಶುಮರಣ ಪ್ರಮಾಣ ಹೆಚ್ಚಿದೆ. ಈ ಎಲ್ಲಾ ಸಂಕಷ್ಟಗಳಿಗೆ ಹೆಣ್ಣುಮಕ್ಕಳು ಸುಶೀಕ್ಷಿತರಾದರೆ ಮಾತ್ರ ಪರಿಹಾರ ಕಂಡುಕೊಳ್ಳಲು ಸಾಧ್ಯ.

ಕೋಷ್ಟಕ:೧

ರಾಯಚೂರು ಜಿಲ್ಲೆಯ ಸಾಕ್ಷರತೆಯ ಮಟ್ಟ (ಶೇಕಡಾವಾರುಗಳಲ್ಲಿ)

	ದೇವದುರ್ಗ	ಲಿಂಗಸೂಗೂರು	ಮಾನ್ವಿ	ರಾಯಚೂರು	ಸಿಂಧನೂರು
ಒಟ್ಟು ತಾಲ್ಲೂಕವಾರು ಹೆಣ್ಣುಮಕ್ಕಳ ಶಿಕ್ಷಣ ಮಟ್ಟ	೩೮.೬೭	೪೯.೧೪	೪೪.೦೯	೫೫.೧೬	೫೧.೬
ಒಟ್ಟು ತಾಲ್ಲೂಕವಾರು ಲಿಂಗ ವ್ಯತ್ಯಾಸ	೨೧.೮೫	೨೩.೯೦	೨೧.೪೫	೨೦.೧೦	೨೧.೮೪

ರಾಯಚೂರು ಜಿಲ್ಲಾ ಮಾನವ ಅಭಿವೃದ್ಧಿ ೨೦೧೫

೨೦೧೧ರ ಜನಗಣತಿಯ ಪ್ರಕಾರ ರಾಯಚೂರು ಜಿಲ್ಲೆಯ ಹೆಣ್ಣುಮಕ್ಕಳ ಸಾಕ್ಷರತೆಯ ಪ್ರಮಾಣ ಶೇ.೪೮.೭೩ ರಷ್ಟಿದೆ. ಸಾಕ್ಷರತೆಯ ಸಾಧನೆಯಲ್ಲಿ ಲಿಂಗ ಅಸಮಾನತೆಯನ್ನು ಎಲ್ಲಾ ತಾಲ್ಲೂಕಗಳಲ್ಲಿ ಹೆಚ್ಚಿರುವುದು ಕೋಷ್ಟಕದಿಂದ ತಿಳಿಯಬಹುದಾಗಿದೆ. ಪರಿಶಿಷ್ಟ ಜಾತಿಗೆ ಸೇರಿದ ಹೆಣ್ಣುಮಕ್ಕಳ ಸಾಕ್ಷರತೆಯ ಪ್ರಮಾಣ ಶೇಕಡ ೪೧.೯೧ ರಷ್ಟಿದ್ದರೆ, ಪರಿಶಿಷ್ಟ ಪಂಗಡಕ್ಕೆ ಸೇರಿದ ಹೆಣ್ಣುಮಕ್ಕಳ ಸಾಕ್ಷರತೆಯ ಪ್ರಮಾಣ ಶೇಕಡ ೩೩.೩೨ ರಷ್ಟಿದೆ. ಜಿಲ್ಲೆಯ ಗ್ರಾಮೀಣ ಮಟ್ಟದ ಹಿಂದುಳಿದ ಪ್ರದೇಶಗಳಲ್ಲಿ ಸಾಕ್ಷರತೆ ಶೇಕಡ ೪೦ಕ್ಕಿಂತಲೂ ಕಡಿಮೆಯಿರುವದು ಆತಂಕ ತರುವ ವಿಷಯವಾಗಿದೆ. ದೇವದುರ್ಗ ತಾಲ್ಲೂಕಿನ ಹೆಣ್ಣುಮಕ್ಕಳ ಸಾಕ್ಷರತೆಯ ಮಟ್ಟ ಜಿಲ್ಲೆಯಲ್ಲಿ ತೀರ ಹಿನ್ನಡೆಯಲ್ಲಿರುವುದು ಕೋಷ್ಟಕದಲ್ಲಿ ಕಾಣಬಹುದು. ಸಾಕ್ಷರತೆ ಹೆಣ್ಣುಮಕ್ಕಳಿಗೆ ಸ್ವ-ಅರಿವು ಉದ್ಯೋಗ, ಆರೋಗ್ಯ ಹಾಗೂ ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಸಂತಾನ ನಿಯಂತ್ರಣ ಹೀಗೆ ಮುಂತಾದವುಗಳ ಮೇಲೆ ಸಾಕ್ಷರತೆಯು ಅವರ ಸ್ಥಾನವನ್ನು ಉತ್ತಮ ಪಡಿಸುವ ಸಾಧನವಾಗಿರುವುದರಿಂದ ಶಿಕ್ಷಣ ಅಭಿವೃದ್ಧಿಯ ಪ್ರಮುಖ ಭಾಗವಾಗಬೇಕಿದೆ. ಅದಕ್ಕಾಗಿ ಸಾಕ್ಷರತೆಯ ಸಾಧನೆಯಲ್ಲಿ ಇನ್ನೂ ಸಾಧಿಸುವ ಅಗತ್ಯತೆಯಿದೆ.

ಶೈಕ್ಷಣಿಕ ಮುನ್ನಡೆಗೆ ದಾಖಾಲಾತಿ ಕೂಡ ಪ್ರಮುಖವಾದ ಅಂಶವಾಗಿದೆ ಇದಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳ ದಾಖಲಾತಿ ಸರಿಸಮನಾಗಿಲ್ಲ ದಾಖಲಾತಿಯಲ್ಲಿ ಕೂಡ ಅಂತರವನ್ನು ಕಾಣುತ್ತೇವೆ. ಜನಗಣತಿ ೨೦೧೧ ರ ಪ್ರಕಾರ ೧ ರಿಂದ ೧೦ ನೇಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡುವ ಮಕ್ಕಳಲ್ಲಿ ೧,೮೬,೨೨೫ ಗಂಡುಮಕ್ಕಳಿದ್ದರೆ ೧,೬೪,೯೨೫ ಹೆಣ್ಣುಮಕ್ಕಳು ಶಾಲೆಗೆ ದಾಖಲಾಗಿದ್ದಾರೆ.

ಶಾಲೆಗೆ ದಾಖಲಾಗದೇ ಇರುವುದು ಮತ್ತು ದಾಖಲಾದ ಮಕ್ಕಳು

ಮಧ್ಯದಲ್ಲಿಯೇ ಶಾಲೆ ತೊರೆಯುವುದನ್ನು ಶಾಲೆ ಬಿಡುವಿಕೆ ಎಂದು ಕರೆಯುತ್ತಾರೆ. ಶಾಲೆ ಬಿಡುವಿಕೆಯು ಶಿಕ್ಷಣ ಅಭಿವೃದ್ಧಿಗೆ ಒಂದು ಬಹು ದೊಡ್ಡ ಸಮಸ್ಯೆಯಾಗಿದೆ. ನಮ್ಮ ರಾಜ್ಯ ಸರಕಾರ ಲಿಂಗ ಸಮಾನತೆಯನ್ನು ತರುವ ನಿಟ್ಟಿನಲ್ಲಿ ಸಾಕ್ಷರತೆಯ ಪ್ರಮಾಣವನ್ನು ಹೆಚ್ಚಿಸುವ ಸಲುವಾಗಿ ರಾಜ್ಯ ಸರಕಾರ ೨೦೦೯ ರಲ್ಲಿ ೬ ರಿಂದ ೧೪ಳ ವರ್ಷದ ವರೆಗಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿತು. ಸ್ವತಂತ್ರ ಬಂದು ೭೦ ವರ್ಷಗಳು ಗತಿಸಿದರೂ ಗ್ರಾಮ ಮಟ್ಟದಲ್ಲಿ ಇನ್ನೂ ಸಫಲತೆಯನ್ನು ಕಾಣಲಾಗುತ್ತಿಲ್ಲ. ನಮ್ಮ ಭಾರತದಲ್ಲಿ ಸುಮಾರು ೨೦೦ ಮಿಲಿಯನ್ ಹೆಣ್ಣು ಮಕ್ಕಳು ಶಾಲೆ ಬಿಡುವಿಕೆಯಿಂದ ಮೂಲಭೂತ ಅಗತ್ಯಗಳಲ್ಲಿ ಒಂದಾದ ಶಿಕ್ಷಣದಿಂದ ವಂಚಿತರಾಗಿದ್ದಾರೆ. ರೂಪ ಹಾಸನ ಇವರ ಅಧ್ಯಯನದ ಪ್ರಕಾರ ನಮ್ಮ ಕರ್ನಾಟಕ ರಾಜ್ಯದಲ್ಲಿ ೮೩.೮೯ ಹೆಣ್ಣುಮಕ್ಕಳು ಶಾಲೆಯಿಂದ ವಂಚಿತರಾಗಿದ್ದಾರೆ. ಶಾಲೆ ಬಿಡುವಿಕೆ ಮತ್ತು ಶಾಲೆಯ ಹಾಜರಾತಿ ಸಮಸ್ಯೆ ಈ ಎರಡು ಅಂಶಗಳು ಶಿಕ್ಷಣದ ಪ್ರಗತಿಗೆ ಬಹುಮುಖ್ಯವಾದ ಅಡ್ಡಿಗಳಾಗಿವೆ.

೧೯೯೧ ರಿಂದ ೨೦೧೦ ರ ನಡುವೆ ಹೆಣ್ಣುಮಕ್ಕಳ ಶಾಲೆ ಬಿಡುವಿಕೆ ಗಂಡುಮಕ್ಕಳ ಶಾಲೆ ಬಿಡುವಿಕೆಗಿಂತ ಹೆಚ್ಚಿದೆ. ಬಡತನದಲ್ಲಿರುವ ಹೆಣ್ಣುಮಕ್ಕಳು ಶಾಲೆಯಿಂದ ವಂಚಿತರಾಗಿದ್ದಾರೆ. ಅನೇಕ ಬಡತನದ ಕುಟುಂಬಗಳು ಬಾಲಕಾರ್ಮಿಕರ ಆದಾಯವನ್ನು ಅವಲಂಬಿಸಿದ್ದಾರೆ ಶಾಲೆಗೆ ಹೋದರೆ ಆದಾಯವಿಲ್ಲ ಎನ್ನುವ ಮನೋಭಾವ ಪೋಷಕರಲ್ಲಿದೆ. ಗಂಡುಮಕ್ಕಳಿಗೆ ಮಾತ್ರ ಕಷ್ಟಪಟ್ಟು ಸಾಲಮಾಡಿ ಶಿಕ್ಷಣ ನೀಡುತ್ತಾರೆ. ಹೆಣ್ಣುಮಕ್ಕಳು ಬೇರೆ ಮನೆಗೆ ಹೋಗುತ್ತಾರೆ ಮನೆ ಕೆಲಸದಲ್ಲಿ ಸಹಾಯ ಮಾಡಲಿ ಎನ್ನುವ ಅಸಮಾನತೆಯಿಂದ ಕುಟುಂಬದಲ್ಲಿ ನೋಡಲಾಗುತ್ತದೆ. ಹಿಂದಿನ ಕಾಲದಿಂದಲೂ ಅಸಮಾನತೆಯ ಭಾವನೆಯನ್ನು ನಮ್ಮ ಸಾಮಾಜಿಕತೆಯಲ್ಲಿ ಬೆಳೆಸಿಕೊಂಡು ಬರಲಾಗಿದೆ. ಹೆಣ್ಣುಮಕ್ಕಳ ಶಿಕ್ಷಣ ಮಹತ್ವದ್ದು ಎಂದು ಭಾವಿಸುವುದಿಲ್ಲ ಗಂಡುಮಕ್ಕಳಿಗೆ ಶಿಕ್ಷಣ ನೀಡುವ ಆದ್ಯತೆ ಹೆಣ್ಣುಮಕ್ಕಳಿಗೆ ನೀಡುವುದಿಲ್ಲ.

ರಾಜ್ಯದ ೩೩ ಶೈಕ್ಷಣಿಕ ಜಿಲ್ಲೆಗಳ ಪೈಕಿ ರಾಯಚೂರು ಜಿಲ್ಲೆಯಲ್ಲಿ ಶಾಲೆಬಿಡುವಿಕೆ ಅತಿ ಹೆಚ್ಚಿದೆ. ಈ ಜಿಲ್ಲೆಯಲ್ಲಿ ಶಾಲೆ ಬಿಡುವಿಕೆ ಮತ್ತು ಹಾಜರಾತಿ ಸಮಸ್ಯೆ ಪ್ರಬಲವಾದ ಸಮಸ್ಯೆಗಳಾಗಿವೆ. ಕರ್ನಾಟಕ ಸರಕಾರದ ೨೦೧೩ ರ ಸರ್ವಶಿಕ್ಷಣ ಅಭಿಯಾನ ಸಮೀಕ್ಷೆಯ ಪ್ರಕಾರ ೧೧,೨೦೭ ಮಕ್ಕಳು ಸಂಪೂರ್ಣ ಶಾಲೆಯಿಂದಲೇ ವಂಚಿತರಾಗಿದ್ದಾರೆ. ೪೫,೯೫ ಮಕ್ಕಳು ಶಾಲೆ ಮಧ್ಯದಲ್ಲಿ ಬಿಟ್ಟಿದ್ದಾರೆ. ಸರಕಾರ ನೀಡಿದ ದಾಖಲೆಯ ಪ್ರಕಾರವೇ ಶಾಲೆಬಿಟ್ಟ ಮಕ್ಕಳ ಸಂಖ್ಯೆ ಹೆಚ್ಚಿದೆ.

ಶಾಲೆಬಿಡುವಿಕೆ ಮತ್ತು ಸಾಕ್ಷರತೆಗೆ ಒಂದಕ್ಕೊಂದು ಸಂಬಂಧವಿದೆ. ಸಾಕ್ಷರತೆ ಸಾಧಿಸಿದ ಪ್ರದೇಶಗಳಲ್ಲಿ ಹೆಣ್ಣುಮಕ್ಕಳ ಸಾಕ್ಷರತೆಯ ಪ್ರಮಾಣ ಹೆಚ್ಚಿದೆ ಹಾಗೂ ಶಾಲೆಬಿಟ್ಟ ಹೆಣ್ಣುಮಕ್ಕಳ ಪ್ರಮಾಣ ಕಡಿಮೆಯಿದೆ ಹಾಗಾಗಿ ಸಾಕ್ಷರತೆಯ ಸಾಧನೆಯಲ್ಲಿ ಶಾಲೆಬಿಡುವಿಕೆಯೂ ಒಂದು ಪ್ರಮುಖ ಅಡ್ಡಿಯಾಗಿದೆ. ಮಹಿಳಾ ಅಭಿವೃದ್ಧಿ ಮತ್ತು

ಸಶಕ್ತೀಕರಣಕ್ಕೆ ಶಿಕ್ಷಣ ಬಹು ಮುಖ್ಯ ಅಂಶವಾಗಿದೆ. ಸಮಾಜದಲ್ಲಿ ಹೆಣ್ಣು ಮಕ್ಕಳು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಸಮಾನ ಅವಕಾಶಗಳನ್ನು ಪಡೆದುಕೊಳ್ಳಲು ಮತ್ತು ಉದ್ಯೋಗವಕಾಶಗಳನ್ನು ದಕ್ಕಿಸಿಕೊಳ್ಳಲು ಅವರ ಆರೋಗ್ಯಮಟ್ಟ ಸುಧಾರಿಸಿಕೊಳ್ಳಲು ಹೆಣ್ಣು ಮಕ್ಕಳ ಜೀವನದಲ್ಲಿ ಶಿಕ್ಷಣ ಮಹತ್ವವನ್ನು ಪಡೆದಿದೆ. ಶಿಕ್ಷಣವು ಜನರ ಜೀವನಮಟ್ಟದಲ್ಲಿನ ಏರಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹೆಣ್ಣುಮಕ್ಕಳ ಶಿಕ್ಷಣ ಮತ್ತು ಆರ್ಥಿಕತೆ ಬೆಳವಣಿಗೆಯ ನಡುವೆ ನಿಕಟವಾದ ಸಂಬಂಧವಿದೆ. ಶಿಕ್ಷಣಮಟ್ಟ ಸುಧಾರಿಸಿದ ಪ್ರದೇಶಗಳಲ್ಲಿ ಶಿಶುಮರಣ ದರ ಕಡಿಮೆಯಿದೆ. ಸಾಕ್ಷರತೆ ಹೆಚ್ಚಿದಂತೆ ಶಿಶುಮರಣ–ತಾಯಿಮರಣ ಪ್ರಮಾಣ ಕಡಿಮೆಯಾಗಿ ಆರೋಗ್ಯ ಸುಧಾರಣೆಯನ್ನು ಕಾಣಬಹುದಾಗಿದೆ ಎಂದು ಭಾರತದಲ್ಲಿ ಕೈಗೊಂಡ ಮಾನವ ಅಭಿವೃದ್ಧಿಯ ವರದಿಗಳಿಂದ ತಿಳಿದುಬಂದಿದೆ.

ಕೋಷ್ಟಕ : ೨

ರಾಯಚೂರು ಜಿಲ್ಲೆಯಲ್ಲಿ ಶಾಲೆಬಿಟ್ಟ ಮಕ್ಕಳ ವಿವರ

ತಾಲ್ಲೂಕು	ಟಿ.ಸಿ ಪಡೆದ ಮಕ್ಕಳು	ಟಿ.ಸಿ ಪಡೆಯದೆ ಇರುವ ಮಕ್ಕಳು	ಒಟ್ಟು ಮಕ್ಕಳು
ರಾಯಚೂರು	೧೦,೧೬೬	೨,೦೭೪	೧೨,೨೪೦
ಸಿಂಧನೂರು	೧೦,೪೬೫	೨,೫೩೮	೧೩,೦೦೩
ಮಾನ್ವಿ	೯,೧೯೨	೩,೬೭೪	೧೧,೮೬೬
ಲಿಂಗಸೂಗೂರು	೮,೬೮೧	೨,೧೮೧	೧೦,೮೬೨
ದೇವದುರ್ಗ	೬,೫೯೧	೧,೭೪೦	೮.೩೩೧

ಜಿಲ್ಲೆಯ ಐದು ತಾಲ್ಲೂಕುಗಳನ್ನು ಗಮನಿಸಿದಾಗ ಐದು ತಾಲ್ಲೂಕುಗಳಲ್ಲಿ ಶಾಲಾಬಿಟ್ಟ ಮಕ್ಕಳ ಸಂಖ್ಯೆ ಹೆಚ್ಚಿದೆ. ೨೦೧೧ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಗ್ರಾಮೀಣ ಮಟ್ಟದ ಸಾಕ್ಷರತೆಯ ಪ್ರಮಾಣ ತೀರ ಕಡಿಮೆಯಿದೆ. ಗ್ರಾಮೀಣ ಮಟ್ಟದ ಸಾಕ್ಷರತೆಯಲ್ಲಿ ದೇವದುರ್ಗ ತಾಲ್ಲೂಕಿನಲ್ಲಿ ಶೇಕಡ ೩೬ ರಷ್ಟಿರುವುದು ಹಾಗೂ ಪ.ಪಂ.ಕ್ಕೆ ಸೇರಿದ ಹೆಣ್ಣುಮಕ್ಕಳ ಸಾಕ್ಷರತೆ ಮಟ್ಟ ಕೇವಲ ೩೩.೩೨ ರಷ್ಟಿರುವುದು ತೀರ ಅತಂಕ ತರುವ ವಿಷಯವಾಗಿದೆ. ಸಾಕ್ಷರತೆಯಿಂದ ಸುಮಾರು ಅರ್ಧಕ್ಕಿಂತಲೂ ಹೆಚ್ಚು ಹೆಣ್ಣುಮಕ್ಕಳು ಶಿಕ್ಷಣದಿಂದ ದೂರ ಉಳಿದಿದ್ದಾರೆ ಇಂತಹ ಸಂದಿಗ್ದ ಪರಿಸ್ಥಿತಿಯಲ್ಲಿ ಜಿಲ್ಲೆಯ ಹೆಣ್ಣುಮಕ್ಕಳ ಶಾಲೆಬಿಡುವಿಕೆ ಅತ್ಯಂತ ಕಳವಳಕಾರಿಯಾದ ಸಂಗತಿಯಾಗಿದೆ. ಜಿಲ್ಲೆಯಲ್ಲಿ ಒಟ್ಟು ೮೩೦ ಹಳ್ಳಿಗಳಲ್ಲಿ ೩೪೬ ಹಳ್ಳಿಗಳನ್ನು ಶೇಕಡ ೪೦ ಕ್ಕಿಂತಲೂ ಕಡಿಮೆ ಸಾಕ್ಷರತೆ ಹೊಂದಿರುವ ಪ್ರದೇಶಗಳೆಂದು ಗುರುತಿಸಲಾಗಿದೆ. ಪ್ರಾಥಮಿಕ ಹಂತದಲ್ಲಿ ಹೆಣ್ಣುಮಕ್ಕಳ ಶಾಲೆಬಿಡುವಿಕೆ ೧೨.೭೮ ರಷ್ಟಿದೆ ಹೈಸ್ಕೂಲು ಮಟ್ಟದಲ್ಲಿ ಶಾಲೆಬಿಡುವಿಕೆಯ ಪ್ರಮಾಣ ಇನ್ನೂ ಹೆಚ್ಚಿದೆ.

ಸರಕಾರದ ದಾಖಲೆಯ ಪ್ರಕಾರ ಶಾಲೆಬಿಡುವಿಕೆಗೂ ಕ್ಷೇತ್ರಕಾರ್ಯ ಮಾಡಿದ ಪ್ರದೇಶಗಳ ಶಾಲೆಬಿಡುವಿಕೆಯ ಅಂತರ ಅತಿ ಹೆಚ್ಚಾಗಿ ಕಂಡುಬಂದಿದೆ. ದೇವದುರ್ಗದಲ್ಲಿ ಮಾಡಿದ ಕ್ಷೇತ್ರಾಧ್ಯಯನದ ಪ್ರಕಾರ ಪ್ರಾಥಮಿಕ ಹಂತದಲ್ಲಿ ಶಾಲೆಬಿಡುವಿಕೆ ಕಡಿಮೆಯಿದೆ ಆದರೆ ಮಾಧ್ಯಮಿಕ ಹಾಗು ಪ್ರೌಢಶಾಲಾ ಹಂತದಲ್ಲಿ ಶಾಲೆ ಬಿಡುವಿಕೆ ಸುಮಾರು ಶೇಕಡ ೩೦ ರಷ್ಟಿದೆ. ಈ ಸಂಗತಿ ತಿಳಿದರೆ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಅತ್ಯಂತ ಆತಂಕದ ವಿಷಯವಾಗಿದೆ.

ಹೆಣ್ಣುಮಕ್ಕಳ ವಿಮೋಚನೆಗೆ ಶಿಕ್ಷಣದ ಅಗತ್ಯತೆಯಿದೆ. ರಾಯಚೂರು ಜಿಲ್ಲೆಯಲ್ಲಿ ಹೆಣ್ಣುಮಕ್ಕಳ ಶಿಕ್ಷಣ ಪ್ರಗತಿಗೆ ಯಾವ ಕಾರಣಗಳು ಅಡ್ಡಿಯಾಗಿವೆ, ಶೈಕ್ಷಣಿಕ ಅಭಿವೃದ್ಧಿಯಿಂದ ಹೆಣ್ಣುಮಕ್ಕಳು ದೂರ ಉಳಿಯುವಂತೆ ಮಾಡಿದ ಸ್ಥಿತಿಗೆ ಕಾರಣಗಳನ್ನು ತಿಳಿದು ಕೊಳ್ಳುವುದು ಹಾಗೂ ಹೆಣ್ಣುಮಕ್ಕಳ ವಾಸ್ತವ ಸ್ಥಿತಿಯನ್ನು ಅರಿತುಕೊಳ್ಳುವ ಅವಶ್ಯಕತೆಯಿದೆ. ರಾಯಚೂರು ಜಿಲ್ಲೆ ಕೃಷಿ ಪ್ರಧಾನವಾದ ಜಿಲ್ಲೆಯಾಗಿದೆ. ಬಡತನದಲ್ಲಿರುವ ಹೆಣ್ಣುಮಕ್ಕಳು ಕೃಷಿಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಾರೆ. ಕೃಷಿಯಲ್ಲಿ ತಂತ್ರಜ್ಞಾನದ ಅಳವಡಿಕೆಯಿಂದ ಕೃಷಿ ಕೆಲಸಗಳು ಬೇಗನೆ ಮುಗಿಯುತ್ತವೆ. ಕೃಷಿಕಾರ್ಮಿಕರಾಗಿ ಕೆಲಸಮಾಡುವ ಹೆಣ್ಣುಮಕ್ಕಳು ಕೆಲಸವಿಲ್ಲದ ಸಮಯದಲ್ಲಿ ಋತುಮಾನ ವಲಸೆ ಹೋಗುತ್ತಾರೆ. ವಲಸೆ ಹೋದಾಗ ಹೆಣ್ಣುಮಕ್ಕಳನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗುವದರಿಂದ ಶಾಲೆಯ ಮಧ್ಯದಲ್ಲಿ ಬಿಡುತ್ತಾರೆ. ಶಾಲೆಬಿಡುವಿಕೆಗೆ ಕಾರಣಗಳನ್ನು ತಿಳಿದುಕೊಳ್ಳಲು ಹಾಗೂ ಜಿಲ್ಲೆಯಲ್ಲಿ ಶಾಲೆಬಿಟ್ಟ ಹೆಣ್ಣುಮಕ್ಕಳ ಸಮಸ್ಯೆಗಳೇನು? ಆ ಹೆಣ್ಣುಮಕ್ಕಳು ಮತ್ತೆ ವಿದ್ಯಾಭ್ಯಾಸ ಮುಂದುವರಿಸಲು ಇಚ್ಛಿಸುತ್ತಾರೆಯೇ? ಮತ್ತು ಶಾಲೆಬಿಟ್ಟ ಮಕ್ಕಳ ವಾಸ್ತವ ಪರಿಸ್ಥಿತಿಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಅಧ್ಯಯನ ಮಾಡುವುದು ಸಂಶೋಧನೆಯ ಉದ್ದೇಶವಾಗಿದೆ.

ಸಂಶೋಧನೆಯಲ್ಲಿ ಪ್ರಕರಣ ಅಧ್ಯಯನಕ್ಕೆ ಸಂಬಂಧಿಸಿದಂತೆ ದೇವದುರ್ಗ ತಾಲ್ಲೂಕಿನ ಶಾಲೆಬಿಟ್ಟ ಹೆಣ್ಣುಮಕ್ಕಳು ತಮ್ಮ ಬಾಲ್ಯವನ್ನು ಅತ್ಯಂತ ಕಷ್ಟದಾಯಕವಾಗಿ ಅನೇಕ ಬವಣೆಗಳನ್ನು ಪಡುತ್ತಾ ದೊಡ್ಡವರು ಹೊರಬೇಕಾದ ಸಂಸಾರದ ನೊಗವನ್ನು ಈ ಪುಟ್ಟ ಪುಟ್ಟ ಮಕ್ಕಳು ಹೊತ್ತು ಸಾಗಿರುವ ಕಟುಸತ್ಯ ಕಣ್ಣಿಗೆ ಕಾಣುತ್ತದೆ. ಇಂತಹ ಪ್ರಕರಣಗಳಲ್ಲಿ ಶಾಲೆಬಿಟ್ಟ ಮಾರೆಮ್ಮಳ ಪ್ರಕರಣ ವಿಶೇಷವಾದದ್ದು. ಮಾರೆಮ್ಮಳ ಅಣ್ಣ ಶಾಲೆಬಿಟ್ಟು ಬೆಂಗಳೂರಿಗೆ ದುಡಿಯಲು ಗುಳೆ ಹೋಗಿ ಅಲ್ಲಿ ೨ ಕಾಲುಗಳನ್ನು ಮುರಿದುಕೊಂಡು ಬಂದಾಗ ಇಡೀ ಮನೆಯನ್ನೇ ನೋಡಿಕೊಳ್ಳುತ್ತಾ ಬದುಕಿನ ಹೋರಾಟದಲ್ಲಿ ಸಾಗತ್ತಿದ್ದ ದಿಟ್ಟ ಬಾಲಕಿ ಎನಿಸಿತು. ೧೬ ವರ್ಷದ ಮಾರೆಮ್ಮ ದುಂಡುಮುಖದ ೪.೫ ಅಡಿ ಎತ್ತರದ ಗೋಧಿ ಬಣ್ಣವನ್ನು ಹೊಂದಿದ ಹದಿಹರೆಯದ ಈ ಹೆಣ್ಣುಮಗಳು ಬಡತನವಿದ್ದರೂ ದುಡಿದು ಕಷ್ಟಪಟ್ಟು ಕೆಲಸ ಮಾಡುವ ಸ್ವಭಾವವಿದೆ. ನಿರಂತರ ಕೆಲಸ ಮಾಡುತ್ತಿದ್ದರೂ ಮುಖದಲ್ಲಿ ಮಂದಹಾಸದ ನಗೆಯಿಂದ ತನ್ನ ನೋವು ಬೆಟ್ಟದಷ್ಟಿದ್ದರೂ ಎಲ್ಲರ ಜೊತೆ ಪ್ರೀತಿಯಿಂದ ಮಾತನಾಡುತ್ತಾಳೆ.

ಮಾರೆಮ್ಮ ೬ ವರ್ಷದಲ್ಲಿರುವಾಗ ತಂದೆ ಕುಡಿತಕ್ಕೆ ಬಲಿಯಾಗಿದ್ದ ಮಾರೆಮ್ಮಳ ತಾಯಿ ದೇವದುರ್ಗದಲ್ಲಿ ತರಕಾರಿ ಮಾರುವ ಜೊತೆಗೆ ಶ್ರೀಮಂತರ ಮನೆಗೆಲಸ ಮಾಡಿ ೪ ಮಕ್ಕಳನ್ನು ಸಾಕಿದ್ದಳು. ಮಾರೆಮ್ಮಳ ತಾಯಿಗೆ ದಮ್ಮಿನ ತೊಂದರೆಯಿಂದ ಅನಾರೋಗ್ಯ ಉಂಟಾಗುತ್ತಿತ್ತು. ಬದುಕುವ ಭರವಸೆಯಿಲ್ಲದೇ ಇಬ್ಬರು ಹೆಣ್ಣುಮಕ್ಕಳನ್ನು ಬಾಲ್ಯವಿವಾಹ ಮಾಡಿದ್ದರು. ಚಿಕ್ಕವಳಿದ್ದಾಗ ಹಿರಿಯ ಅಕ್ಕ ಕಾಯಿಲೆಬಿದ್ದು ಸತ್ತುಹೋದಳು. ೨ ನೇಯ ಅಕ್ಕ ನಾಗಮ್ಮ ಮಾರೆಮ್ಮನಿಗೆ ಶಾಲೆಗೆ ಹಚ್ಚಿ ಇವಳು ಓದಿ ದೊಡ್ಡವಳಾಗಲಿ ನಮ್ಮ ಹಾಗೆ ಜೀವನ ಬೇಡ ತಮ್ಮ ಮತ್ತು ತಂಗಿ ವಿದ್ಯಾವಂತರಾಗಬೇಕೆಂದು ತವರಿನವರ ಕಷ್ಟಗಳಿಗೆ ಸಹಾಯ ಮಾಡುತ್ತಿದ್ದಳು. ನಾಗಮ್ಮ ಮತ್ತು ಅವಳ ಗಂಡ ಕೆಲಸಕ್ಕಾಗಿ ಬೆಂಗಳೂರಿಗೆ ಗುಳೆ ಹೋಗಿದ್ದರು. ರಜೆ ಬಂದಾಗ ತಂಗಿಯಾದ ಮಾರೆಮ್ಮ ಮತ್ತು ತಮ್ಮ ದಂಡಪ್ಪನನ್ನು ಬೆಂಗಳೂರಿಗೆ ಕರೆದುಕೊಂಡು ಹೋಗುತ್ತಿದ್ದಳು. ರಜೆಯಲ್ಲಿ ಕೆಲಸಕ್ಕೆ ಹಚ್ಚಿ ರಜೆ ಮುಗಿದ ಬಳಿಕ ಇಬ್ಬರನ್ನು ಕರೆದುಕೊಂಡು ಬಂದು ತವರಿಗೆ ಬಿಟ್ಟು ಅವರು ದುಡಿದ ಹಣವನ್ನು ತಾಯಿಗೆ ನೀಡಿ ತಮ್ಮ ತಂಗಿಗೆ ಬೇಕಾದದ್ದೆಲ್ಲಾ ಕೊಡಿಸಿ ಹೋಗುತ್ತಿದ್ದಳು. ಮನೆಯೆಲ್ಲರಿಗೆ ಆಸರೆಯಾದ ಅಕ್ಕ ೩ವರ್ಷದ ಒಂದು ಹೆಣ್ಣುಮಗು ೪ ತಿಂಗಳ ಗಂಡು ಮಗುವನ್ನು ಬಿಟ್ಟು ಸತ್ತು ಹೋದಳು. ಮಾರೆಮ್ಮನ ಅಕ್ಕನ ಸಾವಿಗೆ ಮೌಢ್ಯತೆಯ ಆಚರಣೆಗಳು ಕಾರಣವಾಗಿದ್ದವು ದೆವ್ವ ಭೂತ ಎಂದು ನಂಬಿ ಕೊನೆ ಗಳಿಗೆಯಲ್ಲಿ ಆಸ್ಪತ್ರೆಗೆ ಕರೆದೊಯ್ದಾಗ ಎಲ್ಲವೂ ಮೀರಿತ್ತು. ಆಗ ಚಿಕಿತ್ಸೆ ಫಲಕಾರಿಯಾಗದೇ ಮಾರೆಮ್ಮನ ಅಕ್ಕ ಬಾಣಂತನಕ್ಕೆ ಸಂಬಂಧಿಸಿದ ಕಾಯಿಲೆಯಿಂದಾಗಿ ಸತ್ತುಹೋದಳು. ನಾಗಮ್ಮನ ಗಂಡ ಮಕ್ಕಳನ್ನು ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿದರೂ ನಾಗಮ್ಮನ ಮೇಲಿರುವ ಪ್ರೀತಿಗೆ ಮಾರೆಮ್ಮಳ ತಾಯಿ ಕಳುಹಿಸಿರಲಿಲ್ಲ. ಮಕ್ಕಳನ್ನು ನೋಡಿಕೊಳ್ಳಲು ಯಾರೂ ಇಲ್ಲದ ಕಾರಣ ಅನಿವಾರ್ಯವಾಗಿ ನಾಗಮ್ಮನ ಗಂಡ ಬಿಟ್ಟುಹೋಗಿದ್ದ. ಮಾರೆಮ್ಮನ ತಾಯಿ ಮಗಳ ಚಿಂತೆಯಲ್ಲಿ ತೀರ ಅಶಕ್ತಳಾದಳು. ಆಗ ಮಾರೆಮ್ಮ ಶಾಲೆಬಿಟ್ಟು ಮನೆಕೆಲಸ ಮಾಡಿ ಬೇರೆಯವರ ಮನೆಕೆಲಸ ಮಾಡಿ ಮಕ್ಕಳನ್ನು ನೋಡಿಕೊಳ್ಳುತ್ತಿದ್ದಳು. ಮಾರೆಮ್ಮನ ಅಣ್ಣ ೧೦ ನೇಯ ತರಗತಿ ಪಾಸಾಗಲಿಲ್ಲ ಆಗ ಬೆಂಗಳೂರಿಗೆ ದುಡಿಯಲು ಹೋಗುತ್ತೇನೆ ಎಂದು ಹೋಗಿ ೨ ಕಾಲುಗಳನ್ನು ಮುರಿದುಕೊಂಡು ಬಂದಿದ್ದ. ಆಗ ಮಾರೆಮ್ಮನಿಗೆ ಕೇವಲ ೧೨ ವರ್ಷ ಮನೆಯ ಎಲ್ಲಾ ಭಾರವು ತಲೆಯ ಮೇಲೆ ಬಿತ್ತು.

ಮನೆಗೆಲಸ ಮಾಡಿ ಕಸ ಮುಸುರೆ ಮಾಡುವವರ ಮನೆ ಮಾಡಿ ಹೊಲದ ಕೆಲಸಕ್ಕೂ ಹೋಗುತ್ತಿದ್ದಳು ಮತ್ತು ಸಂಜೆ ಹೂ ಕಟ್ಟುತ್ತಿದ್ದಳು. ನಾಗಮ್ಮ ಬಿಡುವಿಲ್ಲದೇ ಕೆಲಸಗಳನ್ನು ನಿರ್ವಹಿಸಿ ಮನೆಯಲ್ಲಿ ಮಕ್ಕಳಿಗೆ ಕುಟುಂಬದವರಿಗೆ ಏನು ಕಡಿಮೆಯಾಗದಂತೆ ನೋಡಿಕೊಳ್ಳುತ್ತಿದ್ದಳು. ಅಲ್ಪ ಜ್ಞಾನವಿದ್ದ ಮಾರೆಮ್ಮ ಮಕ್ಕಳಿಗಾಗಲಿ ತನಗಾಗಲಿ ಹುಷಾರು ತಪ್ಪಿದರೆ ಸರಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯುತ್ತಾಳೆ. ಕೆಲಸಕ್ಕೆ ಹೋಗುವಾಗ ಮಕ್ಕಳನ್ನು ಅಂಗನವಾಡಿಯಲ್ಲಿ ಬಿಟ್ಟು ಮಧ್ಯಾಹ್ನದ ಅಡುಗೆ

ಮಾಡಿ ಹೋಗುತ್ತಾಳೆ. ಮಕ್ಕಳನ್ನು ಮದ್ಯಾಹ್ನದಿಂದ ಸಂಜೆವರೆಗೆ ತಾಯಿ ನೋಡಿಕೊಳ್ಳುತ್ತಾಳೆ. ಮಾರೆಮ್ಮನಿಗೆ ತಾಯಿಯ ತವರಿನವರು ಕೊಟ್ಟ ಮನೆಯೊಂದೇ ಆಸರೆಯಾಗಿದೆ. ಅಕ್ಕನ ಗಂಡ ಮಕ್ಕಳನ್ನು ಬಿಟ್ಟು ಹೋಗಿದ್ದರಿಂದ ಅಕ್ಕಿ, ಬೇಳೆ ಕೊಟ್ಟು ಹೋಗುತ್ತಾನೆ. ಮಕ್ಕಳು ಕಾಯಿಲೆ ಬಿದ್ದಾಗ ಬಂದು ಆಸ್ಪತ್ರೆಗೆ ತೋರಿಸಿ ಖರ್ಚಿಗೆ ಹಣ ನೀಡಿ ಹೋಗುತ್ತಾನೆ. ಇಷ್ಟು ಬಿಟ್ಟರೆ ಯಾರಿಂದಲೂ ಸಹಾಯ ಇಲ್ಲ. ಮಾರೆಮ್ಮಳಿಗೆ ಈಗ ೧೬ ವರ್ಷ ಮಾತ್ರ ಅದೆಷ್ಟು ಜವಾಬ್ದಾರಿ ನಿರ್ವಹಿಸುವ ತಾಳ್ಮೆ ನೋಡಿದರೆ ನಿಜಕ್ಕೂ ಆಶ್ಚರ್ಯವೆನಿಸುತ್ತದೆ. ಮಾರೆಮ್ಮನ ಅಣ್ಣನಿಗೆ ಅಪಘಾತ ವಾದ ಸಂದರ್ಭದಲ್ಲಿ ಬಂದ ಹಣ ಕಾಲಿನ ಚಿಕಿತ್ಸೆಗೆ ಸರಿಹೋಗದೇ ಮನೆಕೆಲಸದವರಲ್ಲಿ ಸಾಲಮಾಡಿದ್ದಾಳೆ. ಮಾರೆಮ್ಮನ ಅಣ್ಣ ಮತ್ತು ತಾಯಿಗೆ ಕೆಲಸ ಮಾಡಲು ಆಗುತ್ತಿಲ್ಲ. ಮಾರೆಮ್ಮ ಮನೆಯ ಯಜಮಾನಿಯಂತೆ ಎಲ್ಲಾ ಕೆಲಸಗಳನ್ನು ನಿರ್ವಹಿಸಬೇಕು. ಎಳೆಯ ಹುಡುಗಿ ಬದುಕಿನ ಬಂಡಿಯಲ್ಲಿ ಒಬ್ಬೊಂಟಿಯಾಗಿ ಸಂಸಾರ ನೊಗವನ್ನು ಹೊತ್ತು ಸಾಗಿದ್ದಾಳೆ.

ನಾಗಮ್ಮನಿಗೆ ಓದುವ ಆಸಕ್ತಿಯದೆಯಾ ಎಂದು ಕೇಳಿದಾಗ "ಅಕ್ಕಾ ಮನೆಯ ಕೆಲಸಗಳಿಂದ ಜಾಸ್ತಿ ವಿದ್ಯೆ ತಲೆಗೆ ಹತ್ತಲಿಲ್ಲ ಆದರೆ ಯಾವುದಕ್ಕೂ ಈಗ ಕಲಿಯಲು ಪುರುಸೊತ್ತು ಇಲ್ಲ. ನಾನು ಎಡೆಬಿಡದೆ ಕೆಲಸ ಮಾಡಿದರೆ ನಾಲ್ಕು ದುಡ್ಡು ಉಳಿಸಿ ಕೆಲಸ ಇಲ್ಲದಾಗ ಚಿಂತೆಯಿಲ್ಲದೇ ಊಟ ಮಾಡೋಕೆ ಆಗತ್ತೆ ಇಲ್ಲದೇ ಹೋದರೆ ಮಕ್ಕಳನ್ನು ನೋಡಿಕೊಳ್ಳೋದು ಕುಟುಂಬದ ಖರ್ಚು ನೋಡೋದು ತ್ರಾಸ್ ಅಂದಾಗ" ಈ ಪುಟ್ಟ ಹುಡುಗಿಗೆ ಅದೆಷ್ಟು ಮುಂದಾಲೋಚನೆ ವಯಸ್ಸಿಗೆ ಮೀರಿದ ದಿಟ್ಟತನವಿದೆ ಎನಿಸಿತು. ಈ ಮಕ್ಕಳ ಬವಣೆಯನ್ನು ನೋಡಿದಾಗ ಮನಸ್ಸಿಗೆ ನೋವಾಗುತ್ತದೆ. ದೇಶದ ಭವಿಷ್ಯವಾಗಬೇಕಾದ ಮಕ್ಕಳು ತಮ್ಮ ಬಾಲ್ಯವನ್ನು ಕಳೆದುಕೊಂಡು ನಲುಗುತ್ತಾ ತಮ್ಮ ಹಕ್ಕಗಳನ್ನು ಕಳೆದುಕೊಂಡು ಸಂಕಷ್ಟದಲ್ಲಿ ಬದುಕುತ್ತಿದ್ದಾರೆ. ಸರಕಾರದ ಯೋಜನೆಗಳಾದ ಚಿಣ್ಣರ ಅಂಗಳ, ಮಧ್ಯಾಹ್ನದ ಬಿಸಿಊಟ, ಬಾ ಬಾಲೆ ಮರಳಿಶಾಲೆಗೆ, ಸರ್ವಶಿಕ್ಷಣ ಅಭಿಯಾನ, ಬಾಲ ಕಾರ್ಮಿಕ ಶಾಲೆಗಳು ಹಾಗು ಬಾಲಕಾರ್ಮಿಕ ನಿರ್ಮೂಲನಾ ಯೋಜನೆ ಇನ್ನು ತಲುಪಿಲ್ಲವಲ್ಲ ಎಂದು ಮನಸ್ಸಿಗೆ ಖೇದವಾಗತ್ತದೆ. ಸರಕಾರದ ಯೋಜನೆಗಳೇನೋ ಇವೆ ಆದರೆ ಕೆಲವು ಕಾರ್ಮಿಕ ಹೆಣ್ಣುಮಕ್ಕಳಿಗೆ ವೈಯುಕ್ತಿಕ ಸಮಸ್ಯೆ ಸಾಮಾಜಿಕ ಸಮಸ್ಯೆ ಎಲ್ಲವನ್ನು ಮೀರಿ ಪಡೆಯಲಾಗುತ್ತಿಲ್ಲ. ಕುಟುಂಬದ ಹೊರೆ ಹೊತ್ತು ಕಾರ್ಮಿಕರಾಗಿ ದುಡಿಯುವ ಹೆಣ್ಣುಮಕ್ಕಳು ತಮ್ಮ ವಿದ್ಯಾಭ್ಯಾಸ ಮುಂದುವರೆಸುವುದು ಒಂದು ಸವಾಲಾಗಿದೆ. ಮಾರೆಮ್ಮನ ಹಾಗೆ ಅನೇಕ ಹೆಣ್ಣುಮಕ್ಕಳು ತಮ್ಮ ಹಕ್ಕುಗಳನ್ನು ಕಳೆದುಕೊಂಡರೂ ಕುಟುಂಬಕ್ಕೆ ಆಸರೆಯಾಗಿದ್ದಾರೆ ಎನ್ನುವುದು ನಾಗಮ್ಮನ ಪ್ರಕರಣ ಅಧ್ಯಯನವೇ ಸಾಕ್ಷಿಯಾಗಿದೆ. ದುಡಿಯುವ ವರ್ಗಕ್ಕೆ ಶ್ರಮವೇ ಬಂಡವಾಳ ಅದಕ್ಕಾಗಿ ಮಕ್ಕಳು ಕುಟುಂಬದ ಅನಿವಾರ್ಯತೆಯಿಂದ, ಅಸಮಾನತೆಯಿಂದ, ಬಾಲ್ಯವಿವಾಹ, ಗುಳೆಹೋಗುವುದು ಹೀಗೆ ಅನೇಕ ಕಾರಣಗಳಿಂದ ಶಾಲೆಬಿಡುತ್ತಾರೆ ಇಂತಹ

ಶಾಲೆಬಿಟ್ಟ ಹೆಣ್ಣುಮಕ್ಕಳ ಭವಿಷ್ಯ ಮತ್ತು ಅವರ ದೃಷ್ಟಿಯಿಂದ ಅನ್ಯಮಾರ್ಗವನ್ನು ಕಾಣುವ ಅಗತ್ಯತೆಯಿದೆ.

ಹೆಣ್ಣುಮಕ್ಕಳ ಆರೋಗ್ಯ, ಆರ್ಥಿಕ, ಸಾಮಾಜಿಕ, ರಾಜಕೀಯ ಪ್ರಗತಿಗೆ ಶಿಕ್ಷಣ ಬಹುಮುಖ್ಯ ಪಾತ್ರ ವಹಿಸುತ್ತದೆ. ಹೆಣ್ಣುಮಕ್ಕಳ ಶಿಕ್ಷಣ ಮುನ್ನಡೆಗೆ ಶಾಲೆಬಿಡುವಿಕೆ ಬಹು ದೊಡ್ಡ ಸಮಸ್ಯೆಯಾಗಿದೆ. ಆದ್ದರಿಂದ ಈ ಹೆಣ್ಣುಮಕ್ಕಳು ಶಾಲೆಯಿಂದ ದೂರ ಉಳಿಯಲು ಕಾರಣವೇನು? ಮತ್ತು ಹೆಣ್ಣುಮಕ್ಕಳ ವಾಸ್ತವ ಪರಿಸ್ಥಿತಿಯನ್ನು ಅರಿತುಕೊಳ್ಳುವ ಅಗತ್ಯತೆಯಿದೆ. ಜಿಲ್ಲೆಯಲ್ಲಿ ಶೈಕ್ಷಣಿಕಮಟ್ಟದಲ್ಲಿ ಹೆಣ್ಣುಮಕ್ಕಳ ದಾಖಲಾತಿ, ಹೆಣ್ಣುಮಕ್ಕಳ ಹಾಜರಾತಿ ಸಮಸ್ಯೆ ಹೆಣ್ಣುಮಕ್ಕಳ ಶಾಲೆಬಿಡುವಿಕೆ ಹೀಗೆ ಹೆಣ್ಣುಮಕ್ಕಳ ದೃಷ್ಟಿಕೋನದಿಂದ ಅಧ್ಯಯನ ಮಾಡುವ ಅವಶ್ಯಕತೆ ಕೂಡ ಇದೆ. ಜಿಲ್ಲೆಯಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಹಿನ್ನಲೆಯಿಂದ ಕಾರ್ಯಕ್ರಮಗಳನ್ನು ನಮ್ಮ ಸರಕಾರ ರೂಪಿಸುವ ಅವಶ್ಯಕತೆಯಿದೆ. ಜಿಲ್ಲೆಯ ಸಾರ್ವಜನಿಕ ಹಿತಾಸಕ್ತಿಯ ಸಂಘಟನೆಗಳು, ಮಹಿಳಾ

ಸಂಘಟನೆಗಳು ಮತ್ತು ಮಕ್ಕಳ ಪರವಾದ ಸಂಘಟನೆಗಳು ಹೆಣ್ಣುಮಕ್ಕಳು ಶೈಕ್ಷಣಿಕ ಹಕ್ಕನ್ನು ಪಡೆಯಲು ಆದ್ಯತೆಯನ್ನು ನೀಡಿ ಚಳುವಳಿಯೋಪಾದಿಯಲ್ಲಿ ಶ್ರಮವಹಿಸುವ ಅಗತ್ಯತೆಯಿದೆ.

– ಶಾಂತಾದೇವಿ
ಸಂಶೋಧನಾ ವಿದ್ಯಾರ್ಥಿನಿ
ಅಹಲ್ಯಾಬಾಯಿ ಸ್ನಾತಕೋತ್ತರ ಮತ್ತು ಮಹಿಳಾ ಅಧ್ಯಯನ ಕೇಂದ್ರ,
ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ ಅಕ್ಕಮಹಾದೇವಿ
ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ನುಡಿ ಮುತ್ತು

ದೀಪ ಆರಿತೆಂದು, ಹಣತೆ ಒಡೆಯಬೇಡಿ.
ಹೂವು ಬಾಡಿತೆಂದು, ಗಿಡ ಕೀಳಬೇಡಿ. ಯಾಕೆಂದರೆ,
ದೀಪ ಮತ್ತು ಹೂವು ಪ್ರಕೃತಿಯ ಕೈಗೊಂಬೆಯಾಗಿರುತ್ತದೆ.
ಹಾಗೆಯೇ, ನಿಮ್ಮವರು ತಪ್ಪು ಮಾಡಿದಾಗ,
ಅವರನ್ನು ಕ್ಷಮಿಸಿಬಿಡಿ. ಯಾಕೆಂದರೆ,
ಅವರು ಕೂಡ ಪರಿಸ್ಥಿತಿಯ ಕೈಗೊಂಬೆಯಾಗಿರಬಹುದು.

ಮರೆಯದ ಪ್ರೇಮ

ಬತ್ತಿ ಹೋದ ಕಂಗಳಿಗೆ
ಒತ್ತಿ ಹೇಳುವೆನು ಈ ಘಳಿಗೆ
ಕಂಬನಿಯನು ಸುರಿಸು
ಜಢ ಹೃದಯವನು ತಣಿಸು

ಬಿಕ್ಕಿ ಅಳು ನೀ ಹೃದಯವೇ
ಬಚ್ಚಿ ಹಿಡಿಯದಿರು ದುಃಖ
ಬಿಚ್ಚಿ ಹೇಳು ಓ ಒಲವೇ
ಇನ್ನೊಮ್ಮೆ ಸುಳಿಯದಿರು ಪಕ್ಕ

ಸತ್ತು ಹೋದ ಈ ಹೃದಯಕೆ
ನಿನ್ನ ನೆನಪೊಂದೇ ಸ್ಪೂರ್ತಿ
ಅಷ್ಟು ಸಾಕು ಗೆಳತಿ
ಈ ಜೀವ ಜೀವಿಸಲು ಪೂರ್ತಿ

ನೋವಿಗಿಂತ ದೊಡ್ಡದೇ ಸ್ವಾಭಿಮಾನ
ಮನಸಿನ ಯಾತನೆಗೆ ಅದೇ ತಾನೆ ಕಾರಣ
ನೋವಿನಲ್ಲೂ ಕಾಡುವ ನೆನಪುಗಳ ಹೂರಣ
ಆದರೂ ಅವು ಹಸಿರಿಲ್ಲದ ತೋರಣ

– ಡಾ.ಡಿ. ಶ್ರೀಧರ್
ಸಹಾಯಕ ಸಸ್ಯ ಸಂರಕ್ಷಣಾ ಅಧಿಕಾರಿ
ಭಾರತ ಸರ್ಕಾರ, ಚನ್ನೈ– ೨೭

ಗಾಂಧಿಯನ್ನು ಕೇಳಿದೆ

ಗಾಂಧಿಯನ್ನು ಕೇಳಿದೆ
ನಿನ್ನಂತಾಗಲಾ
ನನ್ನಂತೆ ಏನಾಗಬೇಕೆಂದು
ಕೇಳಿದರು

ಸ್ಯತ್ಯ ಶೋಧಕಳಾಗಲಾ
ಪ್ರಯೋಗಕ್ಕೆ ಸಿದ್ದವಾಗು
ಅಹಿಂಸಾವಾದಿಯಾಗಲಾ
ಅವಮಾನ ಸಹಿಸಿಕೊ

ಸೇವಕಳಾಗಲಾ
ಅಹಂ ಬಿಡು
ಅಪ್ರತಿಮ ದೇಶಭಕ್ತಳಾಗಲಾ
ನಿಸ್ವಾರ್ಥ ಪ್ರಜೆಯಾಗು

ಆಸ್ತಿಕಳಾಗಲಾ
ತರ್ಕವಿಲ್ಲದೆ ಅವನಿಗೆ ಶರಣಾಗು
ಜನಾನುರಾಗಿಯಾಗಲಾ
ಸ್ವಾರ್ಥಬಿಡು

ಲೇಖಕಳಾಗಲಾ
ನಿರಂತರ ಓದು
ಉತ್ತಮ ವಾಗ್ಮಿಯಾಗಲಾ
ಪೂರ್ವ ತಯಾರಿ ಮಾಡಿಕೊ

ತಪ್ಪುಗಳ ಒಪ್ಪಿಕೊಳ್ಳಲಾ
ಪಶ್ಚಾತಾಪ ಪಡು
ಮಿತವ್ಯಯಿಯಾಗಲಾ
ಆಸೆ ಕಡಿಮೆ ಮಾಡಿಕೊ

ನುಡಿದಂತೆ ನಡೆಯಲಾ
ಮಾಡಿ ತೋರಿಸು
ಬ್ರಹ್ಮಚರ್ಯ ಪಾಲಿಸಲಾ
ಪರೀಕ್ಷೆಗೆ ಒಡ್ಡಿಕೊ

ಪ್ರಾಮಾಣಿಕಳಾಗಲಾ
ಆತ್ಮಶುದ್ಧಿ ಮಾಡಿಕೊ
ನಿರಂಹಕಾರಿಯಾಗಲಾ
ವಿನಯವ ಮೈಗೂಡಿಸಿಕೊ

ಸರಳ ಜೀವನ ನಡೆಸಲಾ
ತ್ಯಾಗಕೆ ಸಿದ್ದವಾಗು
ಹಿಂಜರಿಕೆ ಮೀರಲಾ
ಪರಿಸ್ಥಿತಿಯ ಎದುರಿಸು

ಹೊಂದಾಣಿಕೆ ಮಾಡಿಕೊಳ್ಳಲಾ
ನಿನ್ನತನವ ಬಿಡದಿರು
ನನ್ನಂತಾಗುವುದಕ್ಕಿಂತ
ನಿನ್ನಂತೆಯಿದ್ದು
ಸತ್ಯಶೋಧಕಳಾಗು
ಎಂದು ಹೇಳಿದರು

ಡಾ. ಹೇಮಲತಾ.ಎಚ್.ಎಮ್
ಮಂಡ್ಯ



ಕರುನಾಡು ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆಯು ಸರ್ವಜ್ಞ ಪ್ರೌಢಶಾಲೆಯಲ್ಲಿ ರ್ಪಡಿಸಿದ ವಿಶ್ವ ಮಾನವ ದಿನಾಚರಣೆ ಕಾರ್ಯಕ್ರಮದಲ್ಲಿ ಪತ್ರಕರ್ತರಾದ ಶ್ರೀ ನಾಗಶೆಟ್ಟಿ ಧರಮಪೂರ ಮಾತನಾಡಿರುವುದು. ಹಾಗೂ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.



ಅಖಿಲ ಭಾರತ ದಾಸ ಸಾಹಿತ್ಯ ಪರಿಷತ್ತು ಸರ್ಕಾರಿ ಪ್ರೌಢಶಾಲೆ ಮಾಳೆಗಾಂವದಲ್ಲಿ ಏರ್ಪಡಿಸಿದ ದಾಸ ಸಾಹಿತ್ಯ ಸೌರಭ ಕಾರ್ಯಕ್ರಮದಲ್ಲಿ ಪರಿಷತ್ತಿನ ಅಧ್ಯಕ್ಷರಾದ ಶ್ರೀ ರವೀಂದ್ರ ಲಂಜವಾಡಕರ ಮಾತನಾಡಿರುವುದು ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

Sahitya Sinchana - Quarterly, Volume-3, Issue- 6 October - December - 2018
RNI Reg. no-KARKAN 2015/63783 **ISSN 2456-3617**



ಕರುನಾಡು ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆಯು ಹೋಟಲ್ ಕೃಷ್ಣ ರೀಜೆಸ್ಸಿಯಲ್ಲಿ ಏರ್ಪಡಿಸಿದ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಕವಿ ಗೋಷ್ಠಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಡಾ. ರಮೇಶ್ ಮೂಲಗೆ ಉದ್ಘಾಟಿಸಿರುವುದು. ಶ್ರೀಮತಿ ವಿಜಯಲಕ್ಷ್ಮೀ ಕೌಟಗೆ, ಶ್ರೀ ಅನೀಲಕುಮಾರ ದೇಶಮ ಶ್ರೀ, ಚಂದ್ರಪ್ಪ ಹೆಬ್ಬಾಳಕರ, ಶ್ರೀ ಸಿದ್ರಾಮ ಸಪಾಟೆ, ಶಾಮರಾವ ನೆಲವಾಡೆ, ಸಂಜೀವಕುಮಾರ ಅತಿವಾಳೆ, ಡಾ. ಶ್ರೇಯಾ ಮಹೇದ್ರಕರ ಉಪಸ್ಥಿತರಿದ್ದರು.

Printed Book - Book Post ಮುದ್ರಿತ ವಿಷಯ * ತೆರೆದ-ಅಂಚೆ

ಇವರಿಗೆ,

Edited : Shamrao Nelwade, **Published by:** Karunadu Sahitya Mattu Sanskrutika Vedike (R.)
H. No.-15 - 5-575, Kumbarwad road, Bank Colony, Bidar-585403.
Phone-9241010651. **Printed by:** Patne Printers, Bidar